03 February 2026 Tuesday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ನಮ್ಮ ಬದುಕಿನಲ್ಲಿ ನಾವು ಸಂಗ್ರಹಿಸ ಬೇಕಾಗಿದ್ದು ಸಂತೋಷದ ಕ್ಷಣಗಳನ್ನೇ ಹೊರತು ದುಬಾರಿ ಮಾತುಗಳನ್ನಲ್ಲ!

-ಸ್ನೇಹಾ ಆನಂದ್

info.varthaman@gmail.com



ಕೆಐಡಿಬಿ ಕಚೇರಿ ಮುಂಭಾಗ ರೈತರ ಅನಿರ್ದಿಷ್ಟಾವಧಿ ಅಹೋರಾತ್ರಿ ಧರಣಿ

ಪುಟ ಸಂ. 2



ಅರವಟ್ಟಿಗೆ ಬೀದಿಗೆ ಮೂಲಸೌಕರ್ಯ ಕಲ್ಪಿಸಲು ಒತ್ತಾಯ

ಪುಟ ಸಂ. 4



ಬಂಡೀಪುರ ಅಭಯಾರಣ್ಯ ಸುರಂಗ ಮಾರ್ಗದಿಂದ ಅಕ್ರಮ ಹೆಚ್ಚು

ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 89 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ನ್ಯಾಯಮಂಡಳಿ ರಚನೆಗೆ ಸುಪ್ರೀಂ ಆದೇಶ

## ಪೆನ್ನಾರ್ ನದಿ ನೀರು ಹಂಚಿಕೆ ವಿವಾದ | ಕರ್ನಾಟಕ ರಾಜ್ಯಕ್ಕೆ ಹಿನ್ನಡೆ

**ನವದೆಹಲಿ:** ಕರ್ನಾಟಕ ಹಾಗೂ ತಮಿಳುನಾಡು ನಡುವಿನ ದಕ್ಷಿಣ ಪಿನಾಕಿನಿ (ಪೆನ್ನಾರ್) ನದಿ ನೀರು ಹಂಚಿಕೆ ವಿವಾದ ಬಗೆಹರಿಸಲು ನ್ಯಾಯಮಂಡಳಿ ರಚಿಸುವಂತೆ ಸುಪ್ರೀಂ ಕೋರ್ಟ್ ಸೋಮವಾರ ಮಹತ್ವದ ಆದೇಶ ನೀಡಿದೆ.

ತಮಿಳುನಾಡು ಸರ್ಕಾರ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಹಾಗೂ ಎನ್.ವಿ.ಅಂಜಾರಿಯಾ ಪೀಠವು ವಿವಾದ ಇತ್ಯರ್ಥಪಡಿಸಲು ನ್ಯಾಯಮಂಡಳಿ ರಚಿಸುವುದು ಸೂಕ್ತ. ಆದೇಶ ಪ್ರಕಟವಾದ ಒಂದು ತಿಂಗಳೊಳಗೆ ಜಲವಿವಾದ ನ್ಯಾಯಮಂಡಳಿಯನ್ನು ರಚಿಸುವಂತೆ ಸುಪ್ರೀಂ ಕೋರ್ಟ್ ಕೇಂದ್ರಕ್ಕೆ ನಿರ್ದೇಶನ ನೀಡಿದೆ. ಈ ಮೂಲಕ ಕರ್ನಾಟಕ ರಾಜ್ಯಕ್ಕೆ ಹಿನ್ನಡೆ ಆದಂತಾಗಿದೆ.

ಈ ಹಿಂದೆ ನಡೆದ ಅರ್ಜಿ ವಿಚಾರಣೆ ವೇಳೆ ಪೀಠ ಉಭಯ ರಾಜ್ಯಗಳು ತಮ್ಮ ವಾದಗಳನ್ನು



ನ್ಯಾಯಮಂಡಳಿಯಲ್ಲಿ ಮಂಡಿಸುವುದು ಉತ್ತಮ ಎಂದು ಅಭಿಪ್ರಾಯ ವ್ಯಕ್ತಪಡಿಸಿತ್ತು. ದಕ್ಷಿಣ ಪಿನಾಕಿನಿ ನದಿಯ ಕಣಿವೆಯಲ್ಲಿ ಕರ್ನಾಟಕ ಸರ್ಕಾರ ಮಾರ್ಕಂಡೇಯ ನದಿಗೆ ಅಡ್ಡಲಾಗಿ ಅಣೆಕಟ್ಟೆ ನಿರ್ಮಿಸಿದೆ. ಬೆಂಗಳೂರಿನ ಎಲೆ ಮಲ್ಲಪ್ಪಚೆಟ್ಟಿ ಕೆರೆಯಿಂದ ಹೊಸಕೋಟೆಯವರೆಗೆ ನೀರು ಹರಿಸುವ ಕಾಮಗಾರಿ, ಬ್ಯಾಲಹಳ್ಳಿ ಗ್ರಾಮದ ಹತ್ತಿರ ಪೆನ್ನಾರ್ ನದಿಯಿಂದ ನೀರು ಹರಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದೆ.

ಕರ್ನಾಟಕ ಕಾಮಗಾರಿ ಕೈಗೆತ್ತಿಕೊಂಡ ಬೆನ್ನಲ್ಲೇ ತಮಿಳುನಾಡು ಸರ್ಕಾರ 2018ರಲ್ಲಿ ಕರ್ನಾಟಕ ಸರ್ಕಾರ ಹಾಗೂ ಕೇಂದ್ರ ಸರ್ಕಾರಗಳ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ದಾವೆ ಹೂಡಿತ್ತು. ನದಿಯ ಮೇಲ್ದಂಡೆ ಭಾಗದಲ್ಲಿ ಕರ್ನಾಟಕ ಸರ್ಕಾರ ಕೈಗೊಂಡ ನಿರ್ಧಾರಗಳಿಂದಾಗಿ ಕೆಳದಂಡೆ ಭಾಗದಲ್ಲಿರುವ ತಮಿಳುನಾಡಿಗೆ ಹರಿಯುವ ನೀರಿನ ಪ್ರಮಾಣದ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ ಎಂದು ತಮಿಳುನಾಡು ವಾದಿಸಿತ್ತು.

ಎರಡು ರಾಜ್ಯಗಳ ಸಚಿವರು ಸಭೆ ನಡೆಸಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವಂತೆ ಕೇಂದ್ರ ಸರ್ಕಾರ ಈ ಹಿಂದೆ ಸೂಚಿಸಿತ್ತಾದರೂ ಪ್ರಕರಣ ನಿರ್ಧರಿಸಲು ನ್ಯಾಯಮಂಡಳಿ ರಚನೆಯಾಗಬೇಕು ಎಂದು ತಮಿಳುನಾಡು ಒತ್ತಾಯಿಸಿತ್ತು. ಮಾತುಕತೆಗಳ ಮೂಲಕ ವಿವಾದ ಪರಿಹರಿಸಲು ವಿಳಂಬ ಆಗಿರುವುದಕ್ಕೆ ಸುಪ್ರೀಂಕೋರ್ಟ್

ಪುಟ 2ಕ್ಕೆ

# ವರನ ಹತ್ಯೆಗೆ ವಧು ಸುಪಾರಿ!

## * ಚಾಕು ಇರಿತ ಪ್ರಕರಣ: ವಧು, ಪ್ರಿಯಕರ ಸೇರಿ ಮೂವರ ಬಂಧನ

**ಚಾಮರಾಜನಗರ:** ಕೊಳ್ಳೇಗಾಲದಲ್ಲಿ ಕಲ್ಯಾಣ ಮಂಟಪಕ್ಕೆ ಬರುತ್ತಿದ್ದ ಸಂದರ್ಭದಲ್ಲಿ ವರನಿಗೆ ಚಾಕು ಇರಿದಿದ್ದ ಪ್ರಕರಣಕ್ಕೆ ತಿರುವು ಸಿಕ್ಕಿದೆ. ವರನಿಗೆ ಚಾಕು ಇರಿತದ ಹಿಂದೆ ಇದ್ದ ಸೂತ್ರದಾರಿಯೇ ವಧು ಎಂಬುದು ಬಯಲಾಗಿದೆ.

ವರನ ಕೊಲೆಗೆ ವಧುವೇ ಸುಪಾರಿ ಕೊಟ್ಟಿದ್ದಳು. ವಧು ನಯಾನಳ ಪ್ರಿಯಕರ ಮತ್ತು ಆತನ ಸ್ನೇಹಿತನನ್ನು ಪೊಲೀಸರು ಬಂಧಿಸಿದ್ದಾರೆ. ಕುಣಗಳ್ಳಿ ಗ್ರಾಮದ ರವೀಶ್ ಮತ್ತು ನಯನ ಮದುವೆ ಡಿ.30ರಂದು ನಡೆಯಬೇಕಿತ್ತು. ಹಿಂದಿನ ದಿನ ಆರತಕ್ಷತೆಗೆ ರವೀಶ್ ಸೇರಿದಂತೆ ಸಂಬಂಧಿಕರು ಕಲ್ಯಾಣ ಮಂಟಪದತ್ತ ಹೊರಟಿದ್ದರು.

ಕೊಳ್ಳೇಗಾಲದ ವೆಂಕಟೇಶ್ವರ ಮಂಟಪಕ್ಕೆ ಕಾರಿನಲ್ಲಿ ಬರುತ್ತಿದ್ದಾಗ ಮತ್ತೊಂದು ಕಾರಿನಲ್ಲಿ ಹಿಂಬಾಲಿಸಿಕೊಂಡು ಬಂದಿದ್ದ ಗುಂಪು ರವೀಶ್ ಕಾರನ್ನು ಅಡ್ಡಗಟ್ಟಿ ಗಲಾಟೆ ತೆಗೆದು ಚಾಕು ಇರಿದು ಪರಾರಿಯಾಗಿತ್ತು. ಆದರೆ, ಗಾಯಗೊಂಡಿದ್ದ ರವೀಶ್ ಪ್ರಾಣಾಪಾಯದಿಂದ ಪಾರಾಗಿದ್ದರು.

ಪ್ರಕರಣ ದಾಖಲಿಸಿದ ಪೊಲೀಸರು ತನಿಖೆಯಲ್ಲಿ ನಯನಳ ಕರೆ ಡಿಟೇಲ್ಸ್ ತೆಗೆದಾಗ ಶಾಕ್ ಆಗಿದ್ದಾರೆ. ಚಾಕು ಇರಿದ ಆರೋಪಿಗಳ ಜೊತೆ ಆಕೆ

ಪುಟ 2ಕ್ಕೆ



### ನಯಾನ ನಾಟಕ ಬಯಲು

ವರ ರವೀಶ್‌ಗೆ ಚಾಕು ಇರಿದ ಬಳಿಕ ಮದುವೆ ರದ್ದಾಗಿತ್ತು. ವರ ಆಸ್ಪತ್ರೆಗೆ ದಾಖಲಾಗಿದ್ದ. ಅಲ್ಲಿಗೆ ಓಡೋಡಿ ಬಂದಿದ್ದ ನಯನ ತನಗೆ ಏನು ಗೊತ್ತಿಲ್ಲ ಎನ್ನುವಂತೆ ಕಣ್ಣೀರಿಟ್ಟಿದ್ದಳು. ವರ ರವೀಶ್ ಬಳಿ ಮದುವೆ ಮಾಡಿಕೊಳ್ಳಿ ಎಂದು ಬೇಡಿಕೊಳ್ಳುವ ನಾಟಕ ಮಾಡಿದ್ದಳು. ನೀವೂ ಕೈ ಕೊಟ್ಟರೆ ನನ್ನನ್ನು ಯಾರೂ ಮದುವೆಯಾಗುವುದಿಲ್ಲ ಎಂದು ಕಣ್ಣೀರಿಟ್ಟು ಡ್ರಾಮ ಮಾಡಿದ್ದಳು.

ಪುಟ 2ಕ್ಕೆ

# ಮೈಸೂರಿನಲ್ಲೇ ಗಾಂಜಾ ಕೇಸ್ ಜಾಸ್ತಿ ಏಕೆ?: ಹೈಕೋರ್ಟ್ ಪ್ರಶ್ನೆ


**ಬೆಂಗಳೂರು:** ಮೈಸೂರಿನಲ್ಲೇ ಗಾಂಜಾ ಕೇಸುಗಳು ಯಾಕೆ ಜಾಸ್ತಿ? ಲೋಕ ಅದಾಲತ್‌ನಲ್ಲಿ ಗಾಂಜಾ ಆರೋಪದ ಕೇಸುಗಳನ್ನೂ ಸೆಟಲ್ ಮಾಡಲಾಗುತ್ತದೆಯೇ ಎಂದು ಹೈಕೋರ್ಟ್ ಆಶ್ಚರ್ಯ ವ್ಯಕ್ತಪಡಿಸಿದೆ.

ಗಾಂಜಾ ಮಾರಾಟದ ಆರೋಪದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಮೈಸೂರಿನ ಸಮೀರ್ ಖಾನ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಆರೋಪಿ ಪರ ವಕೀಲರಾದ ಆರ್.ಕೆ.ಮಹದೇವ, ಅರ್ಜಿದಾರರನ್ನು ಮೈಸೂರಿನ ಬಿಇಒ ಕಚೇರಿ ಬಳಿ ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪದಡಿ ಬಂಧಿಸಲಾಗಿದೆ. ಅರ್ಜಿದಾರರ ವಿರುದ್ಧ ದಾಖಲಾಗಿರುವ ಕಲಂಗಳು ಜಾಮೀನು ಪಡೆಯಲು ಅರ್ಹವಾಗಿವೆ. ಆದರೆ, ವಿಚಾರಣಾ ಕೋರ್ಟ್ ಜಾಮೀನು ತಿರಸ್ಕರಿಸಿದೆ. ಆದ್ದರಿಂದ, ಜಾಮೀನು ಮಂಜೂರು ಮಾಡಬೇಕು ಎಂದು ಕೋರಿದರು.

ರಾಜ್ಯದ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, ಈಗಾಗಲೇ ಇದೇ ಅರ್ಜಿದಾರರನ್ನು ಮಾದಕ ದ್ರವ್ಯ ಮಾರಾಟದ ಇಂತಹುದೇ ಆರೋಪದಡಿ ಮತ್ತೊಂದು ಕೇಸಿನಲ್ಲಿ ವಿಚಾರಣಾ ಕೋರ್ಟ್ ಅಪರಾಧಿ ಎಂದು ತೀರ್ಪು ನೀಡಿದೆ ಎಂದರು. ಇದಕ್ಕೆ ಮಹದೇವ, ಆ ಕೇಸಿನಲ್ಲಿ ಅರ್ಜಿದಾರರು ಅಪರಾಧ ಒಪ್ಪಿಕೊಂಡ ಕಾರಣ ಲೋಕ್ ಅದಾಲತ್‌ನಲ್ಲಿ ಪ್ರಕರಣವನ್ನು ಇತ್ಯರ್ಥ ಮಾಡಲಾಗಿದೆ ಎಂದರು.

ಈ ಮಾತಿಗೆ ನ್ಯಾಯಮೂರ್ತಿಗಳು,



ಏನ್ರೀ ಇದು ಲೋಕ್ ಅದಾಲತ್‌ನಲ್ಲಿ ಗಾಂಜಾ ಆರೋಪದ ಕೇಸುಗಳನ್ನೆಲ್ಲಾ ಸೆಟಲ್ ಮಾಡಲಾಗುತ್ತದೆಯೇ? ಹೀಗಾದರೆ ಹೇಗೆ? ನಾಳೆ ಮಾದಕ ದ್ರವ್ಯ ಕೇಸುಗಳನ್ನೂ ರಾಜಿ ಸಂಧಾನದ ಮೂಲಕ ಲೋಕ್ ಅದಾಲತ್‌ನಲ್ಲಿ ವಿಲೇವಾರಿ ಮಾಡಬಹುದಲ್ಲವೇ? ಇಂತಹ ಗಾಂಜಾ ಅಪರಾಧಿಗಳು ಅಪರಾಧ ಒಪ್ಪಿಕೊಂಡು ಕನಿಷ್ಠ ದಂಡ ಕಟ್ಟಿ ಜೈಲಿನಲ್ಲಿರಲು ಸಿದ್ಧರಾದರೆ ಗತಿಯೇನು ಎಂದು ತೀವ್ರ ಕಳವಳ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮೈಸೂರಿನಲ್ಲೇ ಗಾಂಜಾ ಕೇಸುಗಳು ಯಾಕೆ ಜಾಸ್ತಿ ಎಂದು ಅರ್ಜಿದಾರರ ಪರ ವಕೀಲರನ್ನು ಕೌತುಕದಿಂದ ಪ್ರಶ್ನಿಸಿದ ನ್ಯಾಯಮೂರ್ತಿಗಳು, ಮುಂದೆ 3 ಗ್ರಾಂ ಗಾಂಜಾ ಸಿಕ್ಕರೂ ಬಿಡುವುದಿಲ್ಲ. ಜೈಲಿಗೆ ಕಳುಹಿಸುತ್ತೇನೆ ಎಂದು ಎಚ್ಚರಿಸಿ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದರು.

# ಕುರ್ಚಿ ಕದನ: ಸಿದ್ದು, ಡಿಕೆಶಿ ಒಗ್ಗಟ್ಟು

## ವಿಪಕ್ಷಗಳಿಗೆ ಸಿಎಂ, ಡಿಸಿಎಂ ತಿರುಗೇಟು | ಸಮಯ ಉತ್ತರ ಕೊಡಲಿದೆ: ಡಿಕೆಶಿ

**ಬೆಂಗಳೂರು:** ವಿಧಾನಸಭೆಯಲ್ಲಿ ಸಿಎಂ ಕುರ್ಚಿ ಕದನದ ವಿಚಾರ ಶುಕ್ರವಾರ ಕಾವೇರಿದ ಚರ್ಚೆಗೆ ಕಾರಣವಾಯಿತು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಒಗ್ಗಟ್ಟು ಪ್ರದರ್ಶಿಸುವ ಮೂಲಕ ವಿಪಕ್ಷಗಳಿಗೆ ತಿರುಗೇಟು ನೀಡಿದರು.

ರಾಜ್ಯಪಾಲರ ಭಾಷಣ ಮೇಲೆ ಚರ್ಚೆಯ ಸಂದರ್ಭದಲ್ಲಿ ವಿಪಕ್ಷ ನಾಯಕ ಆರ್.ಅಶೋಕ್ ಮಾತನಾಡಿ, ಸಿಎಂ ಸಿದ್ದರಾಮಯ್ಯ ಹಾಗೂ ಡಿಕೆಶಿ ಮಧ್ಯೆ ಜಗಳ ಇದೆ ಎಂದು ಪ್ರಸ್ತಾಪಿಸಿದರು. ಇದಕ್ಕೆ ಉತ್ತರಿಸಿದ ಸಿದ್ದರಾಮಯ್ಯ ಅವರು, ನನ್ನ ಡಿಕೆಶಿ ಮಧ್ಯೆ ಜಗಳ ಇದೆ ಎಂದು ಅಶೋಕ್ ಆರೋಪಿಸಿದ್ದಾರೆಂದು ಪಕ್ಕದಲ್ಲೇ ಕೂತಿದ್ದ ಡಿಕೆಶಿ ಕಡೆ ನೋಡಿ ನಿನಗೂ-ನನಗೂ ಹಾಲಾಹಲ ಇದೆ ಅಂತೆ ಕಣಯ್ಯ ಎಂದು ಕೆಣಕಿದರು.

ಇದಕ್ಕೆ ತಕ್ಷಣ ಪ್ರತಿಕ್ರಿಯೆ ನೀಡಿದ ಡಿ.ಕೆ. ಶಿವಕುಮಾರ್ ಅವರು, ನಾನು ಹಾಗೂ ಸಿಎಂ ಪರಸ್ಪರರ ಕಷ್ಟದಲ್ಲಿ ಜೊತೆಯಾಗಿ ನಿಂತವರು. ಮುಂದೆಯೂ ಕಷ್ಟದಲ್ಲಿ ಪರಸ್ಪರ ಜೊತೆಯಾಗಿರುತ್ತೇವೆ. ಸಿದ್ದರಾಮಯ್ಯ ಸೇರಿದಂತೆ ನಮ್ಮ ಪಕ್ಷದ 139 ಶಾಸಕರು ನನ್ನ ಪರ ಇದ್ದಾರೆ. ನಾವಿಬ್ಬರೂ ಹೀಗೇ ಜೊತೆಯಾಗಿ ಇರ್ತೀವಿ. ಏನೇ ತೀರ್ಮಾನ ಇದ್ದರೂ ನಮ್ಮ ಹೈಕಮಾಂಡ್ ಮಾಡಲಿದೆ. 2028ಕ್ಕೆ ಏನಾಗುತ್ತದೆ ಎಂದು ನೋಡೋಣ ಎಂದು ಡಿಕೆಶಿ ತಿರುಗೇಟು ನೀಡಿದರು.


### ಬೆಳಗ್ಗೆ ಅಲ್ಲಿ, ರಾತ್ರಿ ಇಲ್ಲಿ! ಡಿಕೆಶಿಗೇ ಗೊಂದಲ: ಅಶೋಕ್

ಸಿದ್ದರಾಮಯ್ಯ ಮತ್ತು ಡಿಕೆಶಿ ಮಾತಿನ ನಡುವೆ



ಅಶೋಕ್ ಮಧ್ಯೆಪ್ರವೇಶಿಸಿ, ಇದು ಕರೆಕ್ಟ್, ಒಂದು ಮಾತು ನೂರು ಅರ್ಥ. ಇದು ಡಿಕೆಶಿ ಸ್ಟೈಲ್. ಸಮಯ ಉತ್ತರ ಕೊಡುತ್ತದೆ ಎಂದು ಹೇಳಿದ್ದಾರಲ್ಲ. ಆ ಸಮಯ ಯಾವಾಗ ಬರುತ್ತದೆ ಅಂತ ಹೇಳಲಿ ಅಂತ ಕುಟುಕಿದರು. ಈ ವೇಳೆ ಮಧ್ಯಪ್ರವೇಶ ಮಾಡಿದ ಸಂತೋಷ್ ಲಾಡ್ ಗೆ ನೀನು ಯಾರ ಕಡೆ? ಯಾರೋ ನನಗೆ ಹೇಳಿದರು,

ಪುಟ 4ಕ್ಕೆ



### ಸಿದ್ದು ಈಗ ಹೌದು ಇಲಿಯಾ!

**ಬೆಂಗಳೂರು:** ಸಿದ್ದರಾಮಯ್ಯ ಈಗ ಹೌದು ಹುಲಿಯಾ ಆಗಿ ಉಳಿದಿಲ್ಲ. ಅವರೀಗ ಹೌದು ಇಲಿಯಾ ಆಗಿದ್ದಾರೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ವಿಧಾನಸಭೆಯಲ್ಲಿ ಸಿದ್ದರಾಮಯ್ಯ ಅವರ ಕಾಲೆಳೆದರು. ರಾಜ್ಯಪಾಲರ ಭಾಷಣ ಮೇಲೆ ಚರ್ಚೆ ನಡೆಸಿದ ಆರ್.ಅಶೋಕ್, ಸರ್ಕಾರದ ವೈಫಲ್ಯಗಳು, ಭ್ರಷ್ಟಾಚಾರ ಆರೋಪ ಪ್ರಕರಣಗಳನ್ನ ಪ್ರಸ್ತಾಪಿಸಿದರು.

ಸಿಎಂ ಡಲ್ ಆಗಿದ್ದಾರೆ. ಮೊದಲಿನ ಹಾಗಿಲ್ಲ. ಆಡಳಿತದಲ್ಲಿ ಬಿಗಿ ಇಲ್ಲ. ಈ ಹಿಂದೆ ಹೌದು ಹುಲಿಯಾ ಆಗಿದ್ದರು. ಈಗ ಹೌದು ಇಲಿಯಾ ಆಗಿದ್ದಾರೆ. ಲೂಟಿಕೋರ ಅಧಿಕಾರಿಗಳ ವಿರುದ್ಧ ಕ್ರಮ ಇಲ್ಲ. ಇಲಾಖೆಗಳಲ್ಲಿ ಲೂಟಿ ನಿಲ್ಲಿಲ್ಲ. ಈ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಲಂಚಾವತಾರ ತಾಂಡವ ಆಡ್ತಿದೆ ಎಂದು ವಾಗ್ದಾಳಿ ನಡೆಸಿದರು.

ಸರ್ಕಾರಕ್ಕೆ ನೈತಿಕತೆ ಇಲ್ಲ. ಸಿಎಂ 17ನೇ ಬಜೆಟ್ ಮಂಡಿಸ್ತಿದ್ದಾರೆ. 18, 19ನೇ ಬಜೆಟ್ ಮಂಡಿಸುವುದಾಗಿ ಹೇಳಿದ್ದಾರೆ. ಅಧಿಕಾರಿಗಳಿಗೆ ಸರ್ಕಾರದಲ್ಲಿ ಬೆದರಿಕೆ ಹಾಕಲಾಗಿದೆ. ಆತ್ಮಹತ್ಯೆ ಭಾಗ್ಯ ಸಿಕ್ತಿದೆ ಎಂದು ಟೀಕಿಸಿದರು.

ಆನಂತರ ಮಾತನಾಡಿದ ಸಿದ್ದರಾಮಯ್ಯ, ಡಿಕೆಶಿ ವೈರಾಗ್ಯದ ಮಾತನಾಡುತ್ತಿಲ್ಲ. ವಾಸ್ತವಿಕ ಮಾತಾಡಿದ್ದಾರೆ, ಬಿಜೆಪಿ ಆರೋಪಕ್ಕೆ ಸ್ಪಷ್ಟತೆ ಕೊಟ್ಟಿದ್ದಾರೆ ಎಂದು ಹೇಳಿದರು. ಈ ವೇಳೆ ಡಿಕೆಶಿ, ಸಮಯ ಅದಕ್ಕೆ ಉತ್ತರ ಕೊಡುತ್ತದೆ ಬಿಡಿ ಸರ್ ಎಂದರು. ಅಶೋಕ್ ಆರೋಪ ಬಗ್ಗೆ ಡಿಕೆಶಿ ಎದ್ದು ಸ್ಪಷ್ಟನೆ ಕೊಟ್ಟರು. ನಾನು ಸ್ಟೂಡೆಂಟ್ ಪಾಲಿಟಿಕ್ಸ್ ನಿಂದ ಬಂದವನು. ನಾನು ಏಟು ತಿಂದಿದೀನಿ, ನೋವುಂಡಿದೀನಿ, ಬೆಳೆದಿದ್ದೀನಿ. ಅಶೋಕ್ ನಮ ಗಿಂತ ಹಿರಿಯರಾಗಿದ್ದರೂ ಅವರಿಗಿಂತ ಕಿರಿಯರು ಏನೇನೋ ಆಗಿಹೋಗಿದ್ದಾರೆ. ನನ್ನ ಸ್ಟೆಂತ್ ಸಿದ್ದರಾಮಯ್ಯ ಸೇರಿ 139 ಶಾಸಕರು.

ಪುಟ 2ಕ್ಕೆ

### ಅಡುಗೆ ಅನಿಲ ಸೋರಿಕೆಯಿಂದ ಬೆಂಕಿ ಹೊತ್ತಿ: ಮೂವರು ಸಾವು



**ಕನಕಪುರ:** ಅಡುಗೆ ಸಿಲಿಂಡರ್ ಪೈಪ್‌ನಿಂದ ಅನಿಲ ಸೋರಿಕೆಯಾಗಿ ಬೆಂಕಿ ಹೊತ್ತಿಕೊಂಡು ಸಂಭವಿಸಿದ ದುರಂತದಲ್ಲಿ ಗಾಯಗೊಂಡಿದ್ದ ಒಂದೇ ಕುಟುಂಬದ ಮೂವರು ಸಾವನ್ನಪ್ಪಿದ್ದಾರೆ. ಕನಕಪುರದ ಅಮರನಾರಾಯಣ ಬ್ಲಾಕ್ ಪ್ರಶಾಂತ್ (22), ಅವರ ತಾಯಿ ಸವಿತಾ (45) ಮತ್ತು ತಂದೆ ಸಿದ್ದರಾಜು (50) ಸಾವನ್ನಪ್ಪಿದವರು.


ಗ್ಯಾರೇಜ್ ಮುಂಭಾಗದಲ್ಲಿ ತಳ್ಳುಗಾಡಿ ಇಟ್ಟುಕೊಂಡು ಬಜ್ಜಿ-ಬೋಂಡ ಮಾರುವ ಹೋಟೆಲ್ ನಡೆಸುತ್ತಿದ್ದ ಪ್ರಶಾಂತ್, ಸೋಮವಾರ ಮನೆಯಲ್ಲೇ ಕಾರ ಮಿಕ್ಸರ್ ತಯಾರಿಸುತ್ತಿದ್ದಾಗ ಸಿಲಿಂಡರ್ ಪೈಪ್‌ನಿಂದ ಗ್ಯಾಸ್ ಸೋರಿಕೆಯಾಗಿತ್ತು. ಸಿಲಿಂಡರ್ ಹೊತ್ತಿಕೊಂಡು ಮನೆಗೆ ಬೆಂಕಿ ಹತ್ತಬಹುದೆಂದು ಭಯಪಟ್ಟು ಅದನ್ನು ನಂದಿಸಲು ನೀರಿನ ತೊಟ್ಟಿಯಲ್ಲಿ ಹಾಕಲು ಪ್ರಯತ್ನಿಸಿದರು. ಆ ಸಮಯದಲ್ಲಿ ಅವರಿಗೆ ತೀವ್ರವಾಗಿ ಬೆಂಕಿ ತಗಲಿ ಗಂಭೀರ ಸುಟ್ಟ ಗಾಯಗಳಾಗಿದ್ದವು.

ಬೆಂಕಿ ತಗುಲಿ ಸುಟ್ಟ ಗಾಯಗಳಾದಾಗ ಭಯಗೊಂಡ ಪ್ರಶಾಂತ್ ಮತ್ತು ಅವರ ತಂದೆ, ತಾಯಿ ಗ್ಯಾಸ್ ಸ್ಟವ್ ಸಿಲಿಂಡರ್ ಅಲ್ಲೇ ಬಿಟ್ಟು ಮನೆಯ ಒಳಗೆ ಓಡಿದ್ದಾರೆ. ಮನೆಯ ಅಕ್ಕಪಕ್ಕದವರು ಬೆಂಕಿ ಹತ್ತಿಕೊಂಡಿರುವುದನ್ನು ನೋಡಿ ಕೂಡಲೇ ಅಗ್ನಿಶಾಮಕ ದಳದವರಿಗೆ ಮಾಹಿತಿಯನ್ನು ತಿಳಿಸಿದ್ದಾರೆ, ಅಗ್ನಿಶಾಮಕ ದಳದವರು ಬಂದು ಬೆಂಕಿಯನ್ನು ನಂದಿಸಿದ್ದರು.

ಘಟನೆಯ ಮಾಹಿತಿ ತಿಳಿದ ಗ್ಯಾಸ್ ಏಜೆನ್ಸಿ ಅವರು ಸ್ಥಳಕ್ಕೆ ಭೇಟಿ ನೀಡಿ ಯಾವ ಕಾರಣದಿಂದ ಬೆಂಕಿ ಹೊತ್ತಿಕೊಂಡಿದೆ ಎಂಬುದನ್ನು ಪರಿಶೀಲಿಸಿ ಮನೆಯ

# ಸಿ.ಜೆ.ರಾಯ್ ಸಾವು: ನ್ಯಾಯಾಂಗ ತನಿಖೆಗೆ ಕೇರಳ ಸಿಎಂ ಒತ್ತಾಯ

**ತಿರುವನಂತಪುರಂ:** ಕಾನ್ಫಿಡೆಂಟ್ ಗ್ರೂಪ್ ಮುಖ್ಯಸ್ಥ ಸಿಜೆ ರಾಯ್ ಅತ್ಮಹತ್ಯೆ ಪ್ರಕರಣಕ್ಕೆ ಈಗ ಕೇರಳ ಸರ್ಕಾರ ಪ್ರವೇಶ ಮಾಡಿದೆ. ಸಿ.ಜೆ. ರಾಯ್ ಸಾವಿನ



ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕೆಂದು ಕೋರಿ ಸಿಎಂ ಪಿಣರಾಯಿ ವಿಜಯನ್ ಅವರು, ಹಣಕಾಸು ಸಚಿವೆ ನಿರ್ಮಲಾ ಸೀತಾ ರಾಮನ್ ಅವರಿಗೆ ಪತ್ರ ಬರೆದು ಆಗ್ರಹಿಸಿದ್ದಾರೆ.

ಉದ್ಯಮಿ ರಾಯ್ ಸಾವು ನಾಗರಿಕ ಸಮಾಜ ಮತ್ತು ವ್ಯಾಪಾರ ಸಮುದಾಯವನ್ನು ಆಘಾತ ಗೊಳಿಸಿದೆ. ದೇಶದ ತೆರಿಗೆ ಆಡಳಿತದ ಮೇಲೆ ಕಪ್ಪು ಚುಕ್ಕೆ ಎಂದು ಟೀಕಿಸಿದ್ದಾರೆ. ಆದಾಯ ತೆರಿಗೆ ಅಧಿಕಾರಿಗಳು ಪಾಲಿಸಬೇಕಾದ ನಿಯಮಗಳನ್ನು ಪಾಲಿಸಿಲ್ಲ ಎಂದು ವರದಿಗಳು ಹೇಳುತ್ತವೆ. ಇದರಿಂದ ಒಬ್ಬ ಉದ್ಯಮಿಯ ಅಮೂಲ್ಯ ಜೀವನ ನಷ್ಟವಾಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ಕಚೇರಿಯಲ್ಲಿ ಐಟಿ ಶೋಧ ಮತ್ತು ವಶಪಡಿಸಿಕೊಳ್ಳುವ

ಪುಟ 2ಕ್ಕೆ

# 52 ಸಾವಿರ ಮಂದಿಗೆ ಗೃಹಲಕ್ಷ್ಮಿ ಖೋತಾ

## ಜಿಎಸ್‌ಟಿ, ಆದಾಯ ತೆರಿಗೆ ದಾಖಲೆ ಪತ್ತೆ: ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್

**ಬೆಂಗಳೂರು:** ಗೃಹಲಕ್ಷ್ಮಿ ಯೋಜನೆಗೆ ನೋಂದಣಿ ಆಗಿದ್ದರೂ 52 ಸಾವಿರ ಮಹಿಳೆಯರಿಗೆ ಹಣ ಜಮೆ ಆಗದ ಬಗ್ಗೆ ಪ್ರತಿಕ್ರಿಯಿಸಿರುವ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಸಮಸ್ಯೆಯ ಮೂಲದ ಬಗ್ಗೆ ಮಾಹಿತಿ ನೀಡಿದ್ದಾರೆ.

ವಿಧಾನ ಪರಿಷತ್ ಕಲಾಪದಲ್ಲಿ ಸದಸ್ಯರಾದ ಪಿ.ಎಚ್ ಪೂಜಾರ ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ಜಿಎಸ್‌ಟಿ ಹಾಗೂ ಆದಾಯ ತೆರಿಗೆ ಕಟ್ಟುತ್ತಿದ್ದಾರೆ ಎಂದು ಸುಮಾರು 52 ಸಾವಿರ ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆಯ ಹಣ ಸಿಗುತ್ತಿಲ್ಲ. ಈ ಪೈಕಿ ಸುಮಾರು 20 ಸಾವಿರ ಫಲಾನುಭವಿಗಳ ಸಮಸ್ಯೆಯನ್ನು



ಇತ್ಯರ್ಥ ಪಡಿಸಲಾಗಿದೆ. ಇನ್ನು ಉಳಿದವರ ಸಮಸ್ಯೆಯನ್ನು ಸರಿಪಡಿಸಲು ಪ್ರಯತ್ನಿಸುತ್ತಿದ್ದೇವೆ ಎಂದು ಹೇಳಿದರು.

ಜಿಎಸ್‌ಟಿ ಹಾಗೂ ಆದಾಯ ತೆರಿಗೆ ಇಲಾಖೆಗಳ ದಾಖಲೆಯಲ್ಲೂ ಇದೇ

ಪುಟ 2ಕ್ಕೆ

### ಟೆಂಗಿನಕಾಯಿ ಬಲೂನ್ ಇದ್ದಂಗೆ!

ಗೃಹಲಕ್ಷ್ಮಿ ಯೋಜನೆಯ ಬಗ್ಗೆ ಅಪಪ್ರಚಾರ ಮಾಡುತ್ತಿರುವ ಬಿಜೆಪಿ ಶಾಸಕ ಮಹೇಶ್ ಟೆಂಗಿನಕಾಯಿ ಒಂಥರ ಬಲೂನ್ ಇದ್ದಂಗೆ. ಅವರಿಗೆ ಯಾವಾಗ ಗಾಳಿ ಹೋಗುತ್ತದೆ ಗೊತ್ತಿಲ್ಲ. ಅವರಿಗೆ ಬೇರೆ ಯಾವುದೇ ಕೆಲಸವಿಲ್ಲದೇ ಈ ರೀತಿ ಅನಾವಶ್ಯಕವಾಗಿ ಮಾತನಾಡುತ್ತಿದ್ದಾರೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಕಿಡಿಕಾರಿದರು.


ಪುಟ 2ಕ್ಕೆ

# ರಂಜಾನ್ ಮಾಸ: ಶಾಲಾವಧಿ ಬದಲು

## ರಾಜ್ಯ ಸರ್ಕಾರದ ಆದೇಶಕ್ಕೆ ವಿರೋಧ ಪಕ್ಷ ಬಿಜೆಪಿ ಆಕ್ರೋಶ

**ಬೆಂಗಳೂರು:** ರಂಜಾನ್ ಅಂಗವಾಗಿ ಉರ್ದು ಮಾಧ್ಯಮ ಕಿರಿಯ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಶಾಲಾ ಸಮಯವನ್ನು ಪರಿಷ್ಕರಿಸಿ ರಾಜ್ಯ ಸರ್ಕಾರ ಆದೇಶಿಸಿದೆ. ಬೆಳಿಗ್ಗೆ 8ರಿಂದ ಮಧ್ಯಾಹ್ನ 12.45ರವರೆಗೆ ಮಾತ್ರ ತರಗತಿ ನಡೆಸಲು ಆದೇಶಿಸಲಾಗಿದೆ.

ರಾಜ್ಯದ ಉರ್ದು ಮತ್ತು ಇತರ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯದ ನಿರ್ದೇಶನದ ಪ್ರಕಾರ, ಶಾಲೆಗಳು ಈಗ ಬೆಳಿಗ್ಗೆ 8ರಿಂದ ಮಧ್ಯಾಹ್ನ 12.45 ರವರೆಗೆ ಕಾರ್ಯನಿರ್ವಹಿಸುತ್ತವೆ. ಇದು ರಂಜಾನ್ ಆರಂಭದಿಂದ ಅಂದರೆ ಫೆಬ್ರವರಿ ಮಧ್ಯ



ಕರ್ನಾಟಕ ಸರ್ಕಾರ
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,
ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ: ಎಂ.ಸಿ.10.ನಿ.ಮ್ಯೆ.ಆಡಳಿತ ಶಾಖೆ-01/2026-27 ದಿನಾಂಕ: 30-01-2026

-: : ಸುತ್ತೋಲೆ : : -

ವಿಷಯ: ರಂಜಾನ್ ಮಾಹಯಲ್ಲಿ ರಾಜ್ಯದ ಉರ್ದು ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಶಾಲಾ ಅವಧಿ ಬದಲಾವಣೆ ಮಾಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಪತ್ರ ಸಂಖ್ಯೆ: ಇಪಿ 99 2023 ದಿನಾಂಕ: 08-03-2023.
2. ಅಧ್ಯಕ್ಷರು, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ(ರಿ), ಬೆಂಗಳೂರು. ರವರ ಮನವಿ ದಿನಾಂಕ: 17-01-2026.

* * * * *

ಪ್ರಸ್ತಾವನೆ :-


ಉಲ್ಲೇಖಿತ ಸುತ್ತೋಲೆಯಲ್ಲಿ ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ, ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ 2023-24ನೇ ಸಾಲಿನ ಶೈಕ್ಷಣಿಕ ವರ್ಷದ ಚಟುವಟಿಕೆಗಳ ಕ್ರಿಯಾ ಯೋಜನೆ ಅನುಷ್ಠಾನಗೊಳಿಸುವ ಬಗ್ಗೆ ನಿರ್ದೇಶನವಿರುತ್ತದೆ. ಅದರಂತೆ ಶಾಲೆಗಳ ದೈನಂದಿನ ಶೈಕ್ಷಣಿಕ ಚಟುವಟಿಕೆಗಳ ನಿರ್ವಹಣೆಗೆ ಸಲಹಾತ್ಮಕ ವೇಳಾ ಪಟ್ಟಿಯಲ್ಲಿ ಬೆಳಿಗ್ಗೆ 10-00 ಗಂಟೆಯಿಂದ ಸಂಜೆ 4-20 ರವರೆಗೆ ಶಾಲಾ ಅವಧಿ ನಿಗಧಿಪಡಿಸಲಾಗಿರುತ್ತದೆ.

ಸರ್ಕಾರದ ಪತ್ರದಲ್ಲಿ ರಂಜಾನ್ ಮಾಸದ ಪ್ರಯುಕ್ತ ರಾಜ್ಯದಲ್ಲಿನ ಉರ್ದು ಮಾಧ್ಯಮದ ಕಿರಿಯ ಪ್ರಾಥಮಿಕ ಶಾಲೆ, ಹಿರಿಯ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಗಳನ್ನು ಬೆಳಿಗ್ಗೆ 8-00 ಗಂಟೆಯಿಂದ ಮಧ್ಯಾಹ್ನ 12.45 ರವರೆಗೆ ರಂಜಾನ್ ತಿಂಗಳು ಪ್ರಾರಂಭವಾದ ದಿನಾಂಕದಿಂದ ಒಂದು ತಿಂಗಳವರೆಗೆ ಮಾತ್ರ ನಡೆಸಲು ಈ ಹಿಂದೆ ದಿನಾಂಕ: 31-10-2002 ರಲ್ಲಿ ಹೊರಡಿಸಲಾಗಿದ್ದ ಸ್ಟ್ಯಾಂಡಿಂಗ್ ಆರ್ಡರ್ (Standing Order) ನ್ನು ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮವಹಿಸುವಂತೆ ಸೂಚಿಸಲಾಗಿರುತ್ತದೆ. ಮುಂದುವರೆದು, ಉಲ್ಲೇಖಿತ-(2) ರ ಪತ್ರದಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಣ ಸಂಘ(ರಿ), ಬೆಂಗಳೂರು ರವರು ಮನವಿ ಮಾಡಿಕೊಂಡಿದ್ದು, ಅದರಂತೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ :-

ಆದೇಶ :-

1. 2025-26ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಉರ್ದು ಮಾಧ್ಯಮದ ಕಿರಿಯ, ಹಿರಿಯ ಹಾಗೂ ಪ್ರೌಢಶಾಲೆಗಳು ರಂಜಾನ್ ತಿಂಗಳು ಪ್ರಾರಂಭವಾದ ದಿನಾಂದಿಂದ ದಿನಾಂಕ: 20-03-2026ರವರೆಗೆ ಮಾತ್ರ ಶಾಲಾ ಅವಧಿಯ ವೇಳಾಪಟ್ಟಿಯ ಬದಲಾವಣೆಯ ವಿವರಗಳು :

| ಅವಧಿ | ಸಮಯ |
|---|---|
| 1 | ಬೆಳಿಗ್ಗೆ 8-00 ಗಂಟೆಯಿಂದ 8-40 ರವರೆಗೆ |
| 2 | 8-40 ರಿಂದ 9-20 ರವರೆಗೆ |
| 3 | 9-20 ರಿಂದ 10-00 ರವರೆಗೆ |
| ವಿರಾಮ | 10-00 ರಿಂದ 10-15 ರವರೆಗೆ |
| 4 | 10-15 ರಿಂದ 10-55 ರವರೆಗೆ |
| 5 | 10-55 ರಿಂದ 11-35 ರವರೆಗೆ |
| 6 | 11-35 ರಿಂದ 12-10 ರವರೆಗೆ |
| 7 | 12-10 ರಿಂದ 12-45 ರವರೆಗೆ |



ದಿಂದ ಮಾರ್ಚ್ 20ರವರೆಗೆ ಜಾರಿಯಲ್ಲಿರುತ್ತದೆ ಎಂದು ಸೂಚಿಸಲಾಗಿದೆ. ರಂಜಾನ್ ತಿಂಗಳು ಪ್ರಾರಂಭವಾದ ದಿನಾಂಕದಿಂದ ಒಂದು ತಿಂಗಳವರೆಗೆ ಮಾತ್ರ ನಡೆಸಲು ಈ ಹಿಂದೆ ದಿನಾಂಕ: 31-10-2002ರಲ್ಲಿ ಹೊರಡಿಸಲಾಗಿದ್ದ ಸ್ಟ್ಯಾಂಡಿಂಗ್ ಆರ್ಡರ್ ಅನ್ನು ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮವಹಿಸುವಂತೆ ಸೂಚಿಸಲಾಗಿರುತ್ತದೆ.

ರಾಜ್ಯದ ಸರ್ಕಾರಿ, ಅನುದಾನಿತ ಹಾಗೂ

ಪುಟ 2ಕ್ಕೆ

### ಕಾಂಗ್ರೆಸ್ ತುಷ್ಟೀಕರಣ ರಾಜಕೀಯ: ಬಿಜೆಪಿ ಟೀಕೆ

ರಾಜ್ಯ ಸರ್ಕಾರ ಈ ಕ್ರಮವನ್ನು ಬಿಜೆಪಿ ವಿರೋಧಿಸಿದೆ. ಕಾಂಗ್ರೆಸ್ ಸರ್ಕಾರ ತುಷ್ಟೀಕರಣ ರಾಜಕೀಯದಲ್ಲಿ ತೊಡಗಿದೆ. ಯಾವುದೇ ಹಿಂದೂ ಹಬ್ಬಕ್ಕೂ ಅದು ಅದೇ ಕ್ರಮವನ್ನು ತೆಗೆದುಕೊಳ್ಳುತ್ತದೆಯೇ ಎಂದೂ ಬಿಜೆಪಿ ಪ್ರಶ್ನಿಸಿದೆ.

ಇದು ಅವರ ತುಷ್ಟೀಕರಣ ರಾಜಕೀಯವನ್ನು ತೋರಿಸುತ್ತದೆ. ಕಾಂಗ್ರೆಸ್ ಪಕ್ಷ ಯಾವಾಗಲೂ ಹಿಂದೂ ಧರ್ಮದ

ಪುಟ 2ಕ್ಕೆ

# ಮುಂಬೈ ರೈಲ್ವೆ ಕಾರಿಡಾರ್ ಘೋಷಿಸಿ

## ಕೇಂದ್ರ ಸಚಿವರಾದ ಜೋಶಿ, ವಿ.ಸೋಮಣ್ಣ ವೈಫಲ್ಯ | ಎಂ.ಬಿ.ಪಾಟೀಲ ಆಕ್ರೋಶ

**ವಿಜಯಪುರ:** ಕೇಂದ್ರ ಬಜೆಟ್‌ನಲ್ಲಿ ರಾಜ್ಯಕ್ಕೆ ಅಗತ್ಯವಿದ್ದ ಬೆಂಗಳೂರು-ಪುಣೆ-ಮುಂಬೈ ರೈಲ್ವೆ ಕಾರಿಡಾರ್ ಘೋಷಣೆ ಮಾಡದೇ ಕರ್ನಾಟಕ ಮತ್ತು ಮಹಾರಾಷ್ಟ್ರಕ್ಕೆ ಅನ್ಯಾಯ ಮಾಡಲಾಗಿದೆ. ಪೂರಕ ಬಜೆಟ್‌ನಲ್ಲಾದರೂ ಈ ಕಾರಿಡಾರ್ ಘೋಷಣೆ ಮಾಡಬೇಕು. ಇಲ್ಲವಾದರೆ ಜನಜಾಗೃತಿ ಆಂದೋಲನ ಮಾಡಲಾಗುವುದು ಎಂದು ಸಚಿವ ಎಂ.ಬಿ.ಪಾಟೀಲ ಕಿಡಿಕಾರಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದರಿಂದ ಕೇಂದ್ರದ ಪ್ರಭಾವಿ ಸಚಿವ ಎಂದು ಬಿಂಬಿಸಿಕೊಳ್ಳುವ ಪ್ರಹ್ಲಾದ ಜೋಶಿ, ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರ ವೈಫಲ್ಯ ಎದ್ದು ಕಾಣುತ್ತಿದೆ. ರಾಜ್ಯದ ಬಿಜೆಪಿ ಸಂಸದರಿಂದ ಕರ್ನಾಟಕಕ್ಕೆ ದೊಡ್ಡ ಅನ್ಯಾಯವಾಗಿದೆ ಎಂದು ವಾಗ್ದಾಳಿ ನಡೆಸಿದರು.

ವಿಜಯಪುರ ಜಿಲ್ಲೆಯ ಸಂಸದರು ಆಟಕ್ಕೂ ಇಲ್ಲ, ಲೆಕ್ಕಕ್ಕೂ ಇಲ್ಲ ಎಂಬಂತಾಗಿದ್ದಾರೆ. ಉತ್ತರ ಕರ್ನಾಟಕ ಭಾಗದ ಸಂಸದರಾದ ಬಸವರಾಜ



ಬೊಮ್ಮಾಯಿ, ಜಗದೀಶ ಶೆಟ್ಟರ್ ಸೇರಿದಂತೆ ರಾಜ್ಯದ ಯಾವೊಬ್ಬರ ಸಂಸದರೂ ಈ ಬಗ್ಗೆ ರೈಲ್ವೆ ಸಚಿವರನ್ನು, ಪ್ರಧಾನಿ ಮೋದಿ ಅವರ ಮೇಲೆ ಒತ್ತಡ ಹೇರುವಲ್ಲಿ ವಿಫಲವಾಗಿದ್ದಾರೆ ಎಂದು ಆರೋಪಿಸಿದರು.

ಬೆಂಗಳೂರು- ಹೈದರಾಬಾದ್, ಬೆಂಗಳೂರು-ಚೆನ್ನೈ ಹೈಸ್ಪೀಡ್ ರೈಲಿನಿಂದ ರಾಜ್ಯಕ್ಕೆ ಪ್ರಯೋಜನವಿಲ್ಲ. ಕರ್ನಾಟಕದೊಳಗೆ 100 ಕಿ.ಮೀ. ಕೂಡ ಓಡದ ಮಾರ್ಗಗಳಿಂದ ರಾಜ್ಯಕ್ಕೆ ಏನು ಲಾಭ? ಇದು ತಮಿಳುನಾಡು ಮತ್ತು ಆಂಧ್ರಕ್ಕೆ ಮಾತ್ರ ಪ್ರಯೋಜನವಾಗಲಿದೆ ಎಂದು ಟೀಕಿಸಿದರು.

ಬೆಂಗಳೂರು-ಪುಣೆ- ಮುಂಬೈ

ಪುಟ 4ಕ್ಕೆ

ಮೊದಲ ಪುಟದಿಂದ

## ವರನ ಹತ್ಯೆಗೆ ವಧು ಸುಪಾರಿ!

ಸಂಪರ್ಕದಲ್ಲಿದ್ದ ವಿಚಾರ ಗೊತ್ತಾಗಿದೆ. ಮೊದಲ ಆರೋಪಿ ದರ್ಶನ್ ತಮಟೆ ಬಾರಿಸುವ ಹಾಗೂ ಪುಸ್ತಕ ಮಾರಾಟ ಮಾಡುವ ಕೆಲಸ ಮಾಡುತ್ತಿದ್ದ. ಎರಡು ವರ್ಷಗಳಿಂದ ನಯನಳನ್ನು ಪ್ರೀತಿಸುತ್ತಿದ್ದ. ಈ ನಡುವೆಯೇ ನಯನಗೆ ಕುಣಗಳ್ಳಿ ಗ್ರಾಮದ ರವೀಶ್ ಜೊತೆ ವಿವಾಹ ನಿಶ್ಚಯವಾಗಿತ್ತು. ಇಷ್ಟ ಇಲ್ಲದೇ ಇದ್ದರೂ ಮನೆಯವರು ಮದುವೆ ಮಾಡಲು ಮುಂದಾಗಿದ್ದರು. ಬಳಿಕ ರವೀಶ್‌ನ ಮೊಬೈಲ್ ನಂಬರ್ ಅನ್ನು ಆರೋಪಿ ದರ್ಶನ್‌ಗೆ ನೀಡಿ ಬೆದರಿಕೆ ಹಾಕಿ ಮದುವೆ ನಿಲ್ಲಿಸುವಂತೆ ನಯನಾ ಒತ್ತಡ ಹೇರಿದ್ದಳು.

ಮದುವೆ ನಿಲ್ಲಿಸಲು ಕೊನೆಯ ಪ್ರಯತ್ನ ಎನ್ನುವಂತೆ ನಯನ ತನ್ನ ತಂಗಿಯ ಮೊಬೈಲ್‌ನಿಂದ ಪ್ರಿಯಕರ ದರ್ಶನ್‌ಗೆ ಕರೆ ಮಾಡಿ ವರನನ್ನು ಹತ್ಯೆ ಮಾಡುವಂತೆ ಹೇಳಿದ್ದಳು. ಈಗ ನಯನ, ನಯನಳ ಪ್ರೇಮಿ ದರ್ಶನ್ ಹಾಗು ಮಿಥುನ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ಕೃತ್ಯಕ್ಕೆ ಬಳಸಿದ್ದ ಕಾರನ್ನು ವಶಕ್ಕೆ ಪಡೆಯಲಾಗಿದೆ. ಮತ್ತಿಬ್ಬರು ಆರೋಪಿಗಳ ಬಂಧನಕ್ಕೆ ಶೋಧ ಕಾರ್ಯ ನಡೆಸುತ್ತಿದ್ದಾರೆ. ಪೊಲೀಸ್ ವಿಚಾರಣೆಯಲ್ಲಿ ಆರೋಪಿ ಎಲ್ಲಾ ವಿಚಾರವನ್ನು ಬಾಯಿ ಬಿಟ್ಟಿದ್ದಾನೆ.

## ತನಿಖೆಗೆ ಕೇರಳ ಸಿಎಂ ಒತ್ತಾಯ

ಕಾರ್ಯಾಚರಣೆ ನಡೆ ಯುತ್ತಿರುವಾಗ ರಾಯ್ ಪಿಸ್ತೂಲಿನಿಂದ ಶೂಟ್ ಮಾಡಿ ಆತ್ಮಹತ್ಯೆ ಮಾಡಿದ್ದು ಆಶ್ಚರ್ಯ ತಂದಿದೆ. ಪ್ರಸ್ತುತ ಪ್ರಕರಣದಲ್ಲಿ ಪರಿಶೀಲನೆ ನಡೆಸುತ್ತಿದ್ದಾಗ ರಾಯ್ ಮತ್ತೊಂದು ಕೋಣೆಗೆ ತೆರಳಿ ತನ್ನ ಪರವಾನಗಿ ಪಡೆದ ಪಿಸ್ತೂಲ್ ಹೊರತೆಗೆದು ಸ್ವತಃ ಗುಂಡು ಹಾರಿಸಿಕೊಂಡಿದ್ದಾರೆ. ಮಾಧ್ಯಮಗಳ ವರದಿ ಸರಿಯಾಗಿದ್ದರೆ ಇದೊಂದು ಗಂಭೀರ ಲೋಪ. ಐಟಿ ಅಧಿಕಾರಿಗಳು ಕನಿಷ್ಠ ಅಗತ್ಯದ ಶಿಷ್ಟಾಚಾರವನ್ನು ಪಾಲನೆ ಮಾಡದೇ ಇರುವುದನ್ನು ಸೂಚಿಸುತ್ತದೆ. ಇದರ ಪರಿಣಾಮವಾಗಿ ಮಾನವ ಜೀವ ನಷ್ಟವಾಗಿದೆ

# ಕನಕಪುರ: ಅದ್ದೂರಿಯಾಗಿ ನಡೆದ ಕನಕೋತ್ಸವಕ್ಕೆ ತೆರೆ





ಕನಕಪುರ/ರಾಮನಗರ: ಕಳೆದ ಐದು ದಿನಗಳಿಂದ ಅದ್ದೂರಿಯಾಗಿ ನಡೆದ ಕನಕೋತ್ಸವಕ್ಕೆ ಭಾನುವಾರ ತೆರೆ ಬಿದ್ದಿತು.

ಜ.28ರಂದು ಆರಂಭವಾದ ಕನಕೋತ್ಸವದಲ್ಲಿ ಪ್ರತಿದಿನ ಸಾಂಸ್ಕೃತಿಕ ಕಾರ್ಯಕ್ರಮಗಳು, ವಿವಿಧ ಸ್ಪರ್ಧೆಗಳು, ನೃತ್ಯ ಮತ್ತು ಸಂಗೀತ ಕಾರ್ಯಕ್ರಮಗಳು ನಡೆದವು. ಕನ್ನಡ ಚಿತ್ರರಂಗದ ಖ್ಯಾತ ನಟ–ನಟಿಯರು, ರಾಜಕೀಯ ಪ್ರಮುಖರು ಕನಕೋತ್ಸವದಲ್ಲಿ ಭಾಗವಹಿಸಿದ್ದರು. ಡಿಕೆಎಸ್ ಚಾರಿಟಬಲ್ ಟ್ರಸ್ಟ್ ವತಿಯಿಂದ ರಾಮನಗರದಲ್ಲಿ ರಾಮೋತ್ಸವ, ಚನ್ನಪಟ್ಟಣದಲ್ಲಿ ಗಂಗೋತ್ಸವ, ಮಾಗಡಿಯಲ್ಲಿ ಕೆಂಪೇಗೌಡ ಉತ್ಸವ ಯಶಸ್ವಿಯಾದ ನಂತರ ಕನಕಪುರದಲ್ಲಿ ಜಿಲ್ಲಾ ಮಟ್ಟದ ಕನಕೋತ್ಸವ ಆಯೋಜಿಸಲಾಗಿತ್ತು.

ಮೊದಲ ದಿನ ಚಲನಚಿತ್ರ ನಟ–ನಟಿಯರು, ರಿಯಾಲಿಟಿ ಶೋ ಸ್ಪರ್ಧಿಗಳು ಕನಕೋತ್ಸವದಲ್ಲಿ ಭಾಗವಹಿಸಿ ಭರಪೂರ ಮನರಂಜನೆ ನೀಡಿದ್ದರು. ಎರಡನೇ ದಿನ ಹೆಸರಾಂತ ಗಾಯಕ ರಘು ದೀಕ್ಷಿತ್, ಸಂಜಿತ್ ಹೆಗಡೆ, ಮೂರನೇ ದಿನ ಗಾಯಕ ವಿಜಯಪ್ರಕಾಶ್, ಗಾಯಕಿ ಮಂಗ್ಲಿ, ನಾಲ್ಕನೇ ದಿನ ನವೀನ್ ಸಜ್ಜು, ಚಂದನ್ ಶೆಟ್ಟಿ ಜುಗಲ್ ಬಂದಿ ನಡೆಸಿ ನೋಡುಗರ ಹುಬ್ಬೇರಿಸಿದ್ದರು. ಖ್ಯಾತ ನಟ ಶಿವರಾಜಕುಮಾರ್, ನಿರೂಪಕಿ ಅನುಶ್ರೀ, ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್, ಬಿಗ್ ಬಾಸ್ ಮುಂತಾದ ರಿಯಾಲಿಟಿ ಶೋಗಳ ಸ್ಪರ್ಧಿಗಳು ಕನಕೋತ್ಸವದಲ್ಲಿ ಭಾಗವಹಿಸಿದ್ದರು. ಐದನೇ ದಿನ ಭಾನುವಾರ ಜಿಲ್ಲಾ ಮಟ್ಟದ ಕ್ರೀಡೆಗಳು ರಂಗೋಲಿ, ಮೆಹಂದಿ, ಉಡುಗೆ ತೊಡುಗೆ, ರಂಗಗೀತೆ, ಕುಸ್ತಿ ಪಂದ್ಯ ಸ್ಪರ್ಧೆಗಳು, ವಿಜ್ಞಾನ ವಸ್ತು ಪ್ರದರ್ಶನ ಪ್ರದರ್ಶನ, ಚಿತ್ರ ಬಿಡಿಸುವ ಸ್ಪರ್ಧೆ, ಕೇಶ ವಿನ್ಯಾಸ ವಾಯ್ಸ್ ಆಫ್ ಕನಕೋತ್ಸವ ದೇಹದಾರ್ಢ್ಯ, ಚೆಸ್ ಸ್ಪರ್ಧೆ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ನಡೆಯಿತು. ಎಸ್ ಎಸ್ ಎಲ್ ಸಿ ದ್ವಿತೀಯ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಸುಮಾರು 8000 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

### ಮತ್ಸ್ಯ ಲೋಕ ವಿಶೇಷ

ಕನಕೋತ್ಸವದ ವೇಳೇ ಕನಕಪುರ ಕಿನ್ನರ ಲೋಕದಂತೆ ವಿಜೃಂಬಿಸುತ್ತದೆ. ಈ ಬಾರಿಯ ಕನಕೋತ್ಸವದಲ್ಲಿ ಕನಕಪುರದಲ್ಲಿ ಮತ್ಸ್ಯ ಲೋಕ ಸೃಜಿಸಲಾಗಿತ್ತು. ಫ್ಯಾಂಟಸಿ ವರ್ಲ್ಡ್‌ನಲ್ಲಿ ಮಕ್ಕಳು, ಯುವ ಸಮುದಾಯ ಕುಣಿದು ಕುಪ್ಪಳಿಸಿದರು. ಕನಕೋತ್ಸವದ ಕೊನೆ ದಿನ ಭಾನುವಾರ ರಾತ್ರಿ ರಸಮಂಜರಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ವರ್ಣ ರಂಜಿತವಾದ ವೇದಿಕೆಯಲ್ಲಿ ಗಾಯಕ ನವೀನ್ ಸಜ್ಜು ಮತ್ತು ಚಂದನ್ ಶೆಟ್ಟಿ ಜುಗಲ್ ಬಂದಿ ಪ್ರೇಕ್ಷಕರ ಹುಬ್ಬೇರಿಸಿತು. ರಿಯಲ್ ಸ್ಟಾರ್ ಉಪೇಂದ್ರ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಡಿಸಿಎಂ ಡಿ.ಕೆ. ಶಿವಕುಮಾರ್ ಹಾಗೂ ಡಿ. ಕೆ. ಸುರೇಶ್ ಉಪೇಂದ್ರ ಅವರನ್ನು ಸನ್ಮಾನಿಸಿ ಗೌರವಿಸಿದರು.

### ಮೆಹಂದಿ ವಿಶೇಷ!

ಮಹಳೆಯೊಬ್ಬರು ತಮ್ಮ ಬಲಗೈ ಮೇಲೆ ಡಿಕೆ ಸಹೋದರರ ಮೆಹಂದಿ ಹಾಕಿಕೊಂಡು ಡಿಕೆ ಸಹೋದರರ ಗಮನ ಸೆಳೆದಿದ್ದು ವಿಶೇಷವಾಗಿತ್ತು.

### ಜಾಗತಿಕ ಮಟ್ಟದ ಸ್ಪರ್ಧೆಗೆ ಮುಂದಾಗಿ: ಡಿಕೆಶಿ

ಭಾರತವನ್ನು ವಿಶ್ವ ಬೆಂಗಳೂರಿನ ಮೂಲಕವೇ ನೋಡುತ್ತದೆ. ನಾವೆಲ್ಲ ಬೆಂಗಳೂರಿನವರು, ನಾವು ವಿಶ್ವ ಮಟ್ಟದಲ್ಲಿ ಸ್ಪರ್ಧೆ ಮಾಡಬೇಕು ಎಂದು ಕನಕಪುರ ಶಾಸಕ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಜಿಲ್ಲೆಯ ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಕನಕಪುರದಲ್ಲಿ ನಡೆದ ಕನಕೋತ್ಸವದಲ್ಲಿ ಪ್ರತಿಭಾ ಪುರಸ್ಕಾರದ ವೇಳೆ ಅವರು ಮಾತನಾಡಿ ವಿದ್ಯಾರ್ಥಿಗಳು ಮತ್ತು ಯುವ ಸಮುದಾಯದಲ್ಲಿ ಸ್ಫೂರ್ತಿ ತುಂಬಿದರು. ಮತದಾರರು ನಮಗೆ ಶಕ್ತಿ ಕೊಟ್ಟಿದ್ದಾರೆ, ನಾನು ಹಾಗು ಸಹೋದರ ಡಿ.ಕೆ.ಸುರೇಶ್ ನಿಮಗೆ ಶಕ್ತಿ ಕೊಟ್ಟು, ಋಣ ತೀರಿಸಬೇಕು. ನಾವು ಈ ಹಿಂದೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿದ್ದವು. ಈಗ ಮತ್ತೆ ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ನಾಮಕರಣ ಮಾಡಿದ್ದೇವೆ. ಅದು ನಮ್ಮ ಮೂಲ ಹಕ್ಕು, ಹಕ್ಕನ್ನು ಕೊಡಿಸಿದ್ದೇನೆ ಎಂದರು.

ಐಶ್ವರ್ಯ ಡಿ. ಕೆ. ಶಿವಕುಮಾರ್, ಶಾಸಕ ಪ್ರದೀಪ್ ಈಶ್ವರ್, ಮಾಜಿ ಸಂಸದ ಡಿ.ಕೆ.ಸುರೇಶ್, ಶಾಸಕ ಸಿ.ಪಿ.ಯೋಗೇಶ್ವರ್ ಮುಂತಾದ ಗಣ್ಯರು ಮಾತನಾಡಿದರು.

# ಅಹೋರಾತ್ರಿ ಧರಣಿ

## ಭೂಮಿ ಕಳೆದುಕೊಂಡ ರೈತರಿಗೆ ಉದ್ಯೋಗ, ನಿವೇಶನಕ್ಕೆ ಆಗ್ರಹ



ಮೈಸೂರು: ಭೂಮಿ ಕಳೆದುಕೊಂಡಿರುವ ರೈತರಿಗೆ ಉದ್ಯೋಗ ನೀಡಬೇಕು, ಅವರಿಗೆ ನಿವೇಶನ ನೀಡಬೇಕು ಮತ್ತು ಅವರಿಗೆ ಹೆಚ್ಚಿನ ಪರಿಹಾರ ನೀಡಬೇಕು ಎಂದು ಒತ್ತಾಯಿಸಿ ಭೂಮಿ ಕಳೆದು ಕೊಂಡ ಸಂತ್ರಸ್ತ ರೈತರು ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದಲಗಲಿ ಕೆ.ಐ.ಡಿ.ಬಿ ಕಚೇರಿ ಮುಂಭಾಗ ಅಹೋರಾತ್ರಿ ಅನಿರ್ಧಿಷ್ಟಾವಧಿ ಧರಣಿ ಕೈಗೊಂಡರು.

ನಗರದ ಗನ್ ಹೌಸ್ ವೃತ್ತದಲ್ಲಿ ಸೋಮವಾರ ಜಮಾಯಿಸಿದ ಕೋಚನಹಳ್ಳಿ ಗ್ರಾಮ ಮತ್ತು ಹಿಮ್ಮಾವು ಗ್ರಾಮದ ರೈತರು ರಾಮಸ್ವಾಮಿ ವೃತ್ತದ ವರೆಗೆ ಪಾದಯಾತ್ರೆ ಮೂಲಕ ತೆರಳಿ ನಂತರ ಕೆ.ಆರ್.ಎಸ್. ರಸ್ತೆಯಲ್ಲಿರುವ ಕೆ.ಐ.ಡಿ.ಬಿ ಕಚೇರಿ ಬಳಿಗೆ ತೆರಳಿದರು. ಇದೇ ವೇಳೆ ರಾಜ್ಯ ರೈತ ಸಂಘ ಜಿಲ್ಲಾ ಸಂಘಟನ ಕಾರ್ಯದರ್ಶಿ ಹೊಸ ಕೋಟರ ಬಸವರಾಜು ಮಾತನಾಡಿ, ಕೋಚನ ಹಳ್ಳಿ ಗ್ರಾಮದಲ್ಲಿ ಸುಮಾರು 160 ಎಕರೆ ರೈತರ ಜಮೀನನ್ನು ಗಾಲ್ಫ್ ಕಂಪನಿಯವರು ವಶಕ್ಕೆ ಪಡೆದು ಉದ್ಯೋಗ ಕೊಡುವುದಾಗಿ ಭರವಸೆ ನೀಡಿ ರೈತರಿಗೆ ಮೋಸ ಮಾಡಿದ್ದಾರೆ. ಈ ಸಂಬಂಧ ಹೋರಾಟ ಮಾಡಿಕೊಂಡು ಬರುತ್ತಿದ್ದು, ಅಂದಿನ ಜಿಲ್ಲಾಧಿಕಾರಿ ಬಗಾದಿ ಗೌಥಮ್ ಅವರು ರೈತರು ಮತ್ತು ಕಂಪನಿಯವರೊಂದಿಗೆ ಮಾತುಕತೆ ನಡೆಸಿ ಉದ್ಯೋಗ ಕೊಡುವ ಭರವಸೆನ್ನು ನೀಡಿ ಆದೇಶ ಮಾಡಿದ್ದರು. ಆದರೆ ಈಡೇರಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಿಮ್ಮಾವು ಗ್ರಾಮದಲ್ಲಿ 1515 ಎಕರೆ ಜಮೀನನ್ನು ಕೆ.ಐ.ಡಿ. ಭೂಸ್ವಾಧೀನಪಡಿಸಿಕೊಂಡು ಚಿತ್ರನಗರಿಗೆ 165 ಎಕರೆ ನೀಡಿದೆ.ಇಲ್ಲಿಯೂ ಸಹ ರೈತರಿಗೆ ಅನ್ಯಾವಾಗಿದ್ದು 500 ಎಕರೆ ಪ್ರದೇಶ ಸರ್ಕಾರಿ ಗೋಮಾಳ ಎಂದು ಹೇಳಿ ರೈತರಿಗೆ ಪರಿಹಾರವನ್ನೇ ನೀಡಿಲ್ಲ. ಇಲ್ಲಿನ ಸಂತ್ರಸ್ಥ ರೈತರಿಗೆ ದೊರೆಯಬೇಕಾದ 18 ಕೋಟಿ ಪರಿಹಾರವನ್ನು ಮೂಲ ರೈತರಿಗೆ ನೀಡದೆ ಅನ್ಯಾಯ ಮಾಡಲಾಗಿದೆ. ಹಾಗಾಗಿ ಇದರ ಮರುತನಿಖೆ ಆಗಬೇಕು ಎಂದು ಒತ್ತಾಯಿಸಿದರು. ಕೂಡಲೇ ಸಚಿವರು, ಜಿಲ್ಲಾಧಿಕಾರಿಗಳು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಮಧ್ಯಪ್ರವೇಶ ಮಾಡಿ ಮೂಲ ರೈತರಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು ಆಗ್ರಹಿಸಿದರು.

ರೈತ ಸಂಘದ ವಿಭಾಗೀಯ ಸಂಘಟನಾ ಕಾರ್ಯದರ್ಶಿಹೊಸಕೋಟೆ ಬಸವರಾಜು, ಮೈಸೂರು ಜಿಲ್ಲಾ ಪ್ರಧಾನಕಾರ್ಯದರ್ಶಿ ಮರಕಂಯ್ಯ, ಉಗ್ರನರಸಿಂಹೇಗೌಡ, ಚಂದ್ರಶೇಖರ್ ಮೇಟಿ, ಆನಂದೂರು ಪ್ರಭಾಕರ್, ಯುವ ಘಟಕದ ಜಿಲ್ಲಾಧ್ಯಕ್ಷ ಪ್ರೇಮ್ ರಾಜ್, ಬಸವರಾಜು, ಮಂಡಕಳ್ಳಿ ಮಹೇಶ್, ಹೊಸೂರು ಕುಮಾರ್, ನೇತ್ರಾವತಿ ಸೇರಿ ಅನೇಕರು ಅನಿರ್ಧಿಷ್ಟಾವದಿ ಅಹೋರಾತ್ರಿ ಧರಣಿಯಲ್ಲಿ ಭಾಗವಹಿಸಿದ್ದರು.

### ನಿಲಸೋಗೆ ಗ್ರಾಮದಲ್ಲಿ ಇನ್ಸ್ಪೆಕ್ಟರ್ ಧನಂಜಯ ನೇತೃತ್ವದಲ್ಲಿ ಶಾಂತಿಸಭೆ

# 2 ಗುಂಪುಗಳ ಮನಸ್ತಾಪ ಸುಖಾಂತ್ಯ



ಟಿ.ನರಸೀಪುರ: ತಾಲೂಕಿನ ನಿಲಸೋಗೆ ಗ್ರಾಮದಲ್ಲಿ ಅಂಬೇಡ್ಕರ್ ಭವನ ನಿರ್ಮಾಣದ ಜಾಗದ ವಿಚಾರದಲ್ಲಿ ಎರಡು ಗುಂಪುಗಳ ನಡುವೆ ಇದ್ದ ಮನಸ್ತಾಪವನ್ನು ಪೊಲೀಸ್ ಇನ್ಸ್ಪೆಕ್ಟರ್ ಧನ ಂಜಯ್ ಶಾಂತಿ ಸಭೆ ಮೂಲಕ ಬಗೆಹರಿಸಿ ಎರಡು ಗುಂಪು ಗಳಲ್ಲಿದ್ದ ದ್ವೇಷ, ಮನಸ್ತಾಪವನ್ನು ಸುಖಾಂತ್ಯ ಗೊಳಿಸಿದ್ದಾರೆ.

ಡಾ.ಅಂಬೇಡ್ಕರ್ ಭವನ ನಿರ್ಮಾಣದ ಜಾಗದ ವಿಚಾರದಲ್ಲಿ ಸುಮಾರು ಐದು ವರ್ಷಗಳಿಂದ ಎರಡು ಗುಂಪುಗಳ ನಡುವೆ ಮನಸ್ತಾಪವಿತ್ತು ಈ ವಿಚಾರ ಕೋರ್ಟ್ ಹಾಗೂ ಪೊಲೀಸ್ ಠಾಣೆ ಮೆಟ್ಟಿಲೇರಿತ್ತು. ಎರಡು ಗುಂಪುಗಳನ್ನು ಕರೆಸಿದ ಇನ್ಸ್ಪೆಕ್ಟರ್ ಧನಂಜಯ್ ಅವರು, ಮನಸ್ತಾಪಕ್ಕೆ ಕಾರಣ ತಿಳಿದು ಅವರಿಗೆ ಬುದ್ಧಿವಾದ ಹೇಳಿ ಗ್ರಾಮದಲ್ಲಿ ಎಲ್ಲರೂ ಕುಳಿತು ತೀರ್ಮಾನ ಮಾಡಿ ಕೊಳ್ಳಲು ತಿಳಿ ಹೇಳಿದ್ದರು. ಅದರಂತೆ ಭಾನುವಾರ ಗ್ರಾಮದ ಯಜಮಾನರಾದ ಸುರೇಶ್, ಅಭಿಲಾಷ್, ಶಿವಣ್ಣ, ಮಾದಯ್ಯ, ಬಸವರಾಜು ಸಿದ್ದರಾಜು ಹಾಗೂ ಗ್ರಾಮದ ವಕೀಲ ರಾಜು ಮತ್ತು ಮಾಜಿ ಯಜಮಾನ ಮಹದೇವಸ್ವಾಮಿ ನೇತೃತ್ವದಲ್ಲಿ ಸಭೆ ಸೇರಿ ವಿಚಾರದ ಬಗ್ಗೆ ಚರ್ಚೆ ಮಾಡಿ ತಮ್ಮಲ್ಲಿದ್ದ ಮನಸ್ತಾಪವನ್ನು ಸುಖಾಂತ್ಯಗೊಳಿಸಿಕೊಂಡು ನಂತರ ಇನ್ಸ್ಪೆಕ್ಟರ್ ಧನಂಜಯ್ ಅವರನ್ನು ಕರೆಯಿಸಿ ಶಾಂತಿ ಸಭೆ ನಡೆಸಲಾಯಿತು.

ಸಭೆಯಲ್ಲಿ ಇನ್ಸ್ಪೆಕ್ಟರ್ ಧನಂಜಯ್ ಅವರು ಮಾತನಾಡಿ, ಕ್ಷುಲ್ಲಕ ಕಾರಣಕ್ಕೆ ಒಬ್ಬರು ಮತ್ತೊಬ್ಬರ ಮೇಲೆ ದ್ವೇಷ ಅಸೂಯೆ ಇಟ್ಟುಕೊಳ್ಳದೆ, ಸಣ್ಣಪುಟ್ಟ ಮನಸ್ತಾಪಗಳು ಬಂದಾಗ ಎಲ್ಲರೂ ಕುಳಿತು ಚರ್ಚೆ ಮಾಡಿ ಬಗೆಹರಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಮುಂದುವರಿದು ಮಾತನಾಡಿದ ಅವರು, ನಿಮ್ಮ ನಿಮ್ಮಲ್ಲೆ ಮನಸ್ತಾಪ ಬಂದಾಗ ಅದನ್ನೆ ಬಂಡವಾಳ ಮಾಡಿ ಕೊಳ್ಳುವ ತಾಲೂಕಿನ ಕೆಲವು ಕಿಡಿಗೇಡಿ ವ್ಯಕ್ತಿಗಳು ನಿಮ್ಮಲ್ಲಿನ ಸಣ್ಣ ಮನಸ್ತಾಪಗಳಿಗೆ ಬೆಂಕಿ ಹಚ್ಚಿ ದೊಡ್ಡದಾಗಿ ಮಾಡುವ ಕೆಲಸ ಮಾಡುತ್ತಾರೆ. ಅಂತಹವರ ಮಾತಿಗೆ ನೀವು ಕಿವಿಗೊಡಬಾರದು. ನಿಮ್ಮ ಗ್ರಾಮದಲ್ಲೆ ತುಂಬಾ ಜನ ವಿದ್ಯಾಂತರಿದ್ದೀರಿ ದೊಡ್ಡ ದೊಡ್ಡ ಸರ್ಕಾರಿ ಹುದ್ದೆಗಳಲ್ಲಿದ್ದಾರೆ ಹಾಗಾಗಿ ಅಂತಹವರ ಮಾರ್ಗದರ್ಶನದಲ್ಲಿ ಗ್ರಾಮವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಬೇಕೆಂದು ಕಿವಿ ಮಾತು ಹೇಳಿದರು. ಗ್ರಾಮದಲ್ಲಿ ಮದುವೆ ಹಾಗೂ ಇನ್ನಿತರ ಸಮಾರಂಭಗಳಾದಾಗ ಹೆಂಗಸರು ಮಕ್ಕಳು ಬೀದಿಯಲ್ಲಿ ಕುಳಿತು ಊಟ ಮಾಡುತ್ತಾರೆ ಎಂಬುದು ನೋವಿನ ವಿಚಾರ. ಹಾಗಾಗಿ ಯಾರೋ ನಿಮ್ಮೂರಿನ ದಾನಿಗಳು ಜನರಿಗೋಸ್ಕರ ಒಂದು ಭವನ ಕಟ್ಟಿಕೊಡಲು ಮುಂದಾದಾಗ ಅದನ್ನು ಬಳಕೆ ಮಾಡಿಕೊಳ್ಳಲು ಮುಂದಾಬೇಕೆ ಹೊರತು ಅದನ್ನು ವಿರೋಧಿಸುವುದು ಸರಿಯಲ್ಲ ಎಂದು ತಿಳಿಹೇಳಿದರಲ್ಲದೆ, ಗ್ರಾಮದವರೆಲ್ಲಾ ತಮ್ಮಲ್ಲಿದ್ದ ಮನಸ್ತಾಪವನ್ನು ಹೋಗಲಾಡಿಸಿ ಕೊಂಡು ಒಂದಾಗಿರುವುದು ಶ್ಲಾಘನೀಯ ಎಂದರು. ಇದೇ ವೇಳೆ ಇನ್ಸ್ಪೆಕ್ಟರ್ ಧನಂಜಯ್ ಅವರನ್ನು ಗ್ರಾಮಸ್ಥರು ಅಭಿನಂದಿದರು. ಅಂಬೇಡ್ಕರ್ ಸಂಘದ ಪದಾಧಿಕಾರಿಗಳು, ಸದಸ್ಯರು, ಗ್ರಾಮದ ಹಿರಿಯ ಮುಖಂಡರು, ಹಾಜರಿದ್ದರು.

ಮೊದಲ ಪುಟದಿಂದ

## ರಂಜಾನ್ ಮಾಸ: ಶಾಲಾವಧಿ ಬದಲು

ಅನುದಾನರಹಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮುಸ್ಲಿಂ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ವರ್ಗದವರು ರಂಜಾನ್ ಮಾಹೆಯಲ್ಲಿ ಉಪವಾಸ ವ್ರತವನ್ನು ಕೈಗೊಳ್ಳುವುದರಿಂದ ಅವರುಗಳಿಗೆ ರಂಜಾನ್ ಮಾಹೆಯಲ್ಲಿ ಪ್ರತಿದಿನ ಸಂಜೆ ಅರ್ಧ ಗಂಟೆ ಮುಂಚಿತವಾಗಿ ತೆರಳಲು ಅನುಮತಿಸಬಹುದು. ಈ ವ್ಯವಸ್ಥೆಯಿಂದ ಶಾಲೆಗಳ ಕೆಲಸದ ಅವಧಿಯಲ್ಲಿ ಕಡಿಮೆ ಆಗುವ ಅವಧಿಯನ್ನು ಇತರೇ ರಜಾ ದಿನಗಳಲ್ಲಿ ಕಾರ್ಯ ನಿರ್ವಹಿಸುವ ಮೂಲಕ ಸರಿದೂಗಿಸಿಕೊಳ್ಳಲು ಆದೇಶಿಸಲಾಗಿದೆ. 2025–26ನೇ ಸಾಲಿನ ಪ್ರಾಥಮಿಕ ಮತ್ತು ಪ್ರೌಢಶಾಲಾ ಪರೀಕ್ಷಾ ವೇಳಾಪಟ್ಟಿಯಂತೆ ನಡೆಸುವಂತೆ ಕ್ರಮವಹಿಸುವುದು. 2025–26ನೇ ಸಾಲಿಗೆ ನಿಗದಿಪಡಿಸಿರುವ ಎಸ್.ಎಸ್.ಎಲ್.ಸಿ. ಪರೀಕ್ಷಾ ಕೇಂದ್ರ ಮತ್ತು ಪರೀಕ್ಷಾ ಕರ್ತವ್ಯ ನಿರತ ಉರ್ದು ಮಾಧ್ಯಮದ ಶಿಕ್ಷಕರಿಗೆ ಈ ಆದೇಶವು ಅನ್ವಯಿಸುವುದಿಲ್ಲ ಎಂದು ಹೇಳಲಾಗಿದೆ.

## ತುಷ್ಟೀಕರಣ ರಾಜಕೀಯ: ಬಿಜೆಪಿ ಟೀಕೆ

ವಿರುದ್ಧ ಹೋಗುತ್ತದೆ. ಸಿದ್ದರಾಮಯ್ಯ ಕೂಡ ಅದನ್ನೇ ಮಾಡುತ್ತಿದ್ದಾರೆ. ನೀವು ರಂಜಾನ್‌ಗೆ ವಿಶೇಷ ಗಮನ ನೀಡಲಿದ್ದರೆ, ಹಿಂದೂಗಳಿಗೆ ಏಕೆ ಗಮನ ನೀಡಬಾರದು? ಈ ಸರ್ಕಾರ ಮುಸ್ಲಿಮರಿಗೆ ಮಾತ್ರ, ಮತಗಳ ಲಾಭಕ್ಕಾಗಿ ಎಂದು ಕರ್ನಾಟಕದ ಜನರು ಭಾವಿಸುತ್ತಾರೆ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಶೆಹಜಾದ್ ಪೂನವಾಲ ಪ್ರಶ್ನಿಸಿದ್ದಾರೆ.

## ಗೃಹಲಕ್ಷ್ಮಿ ಖೋತಾ

ರೀತಿ ತೋರಿಸುತ್ತಿದೆ. ಇದರಿಂದ ಸಮಸ್ಯೆ ಬಗೆಹರಿಸಲು ಪ್ರಯತ್ನಿಸುತ್ತಿದ್ದು, ಸರ್ಕಾರದ ಹಾಗೂ ನಮ್ಮ ಇಲಾಖೆಯದ್ದು ಯಾವುದೇ ತಪ್ಪಿಲ್ಲ ಎಂದರು.

ರಾಜ್ಯದಲ್ಲಿ ಸುಮಾರು 1.26 ಕೋಟಿ ಫಲಾನುಭವಿಗಳಿದ್ದಾರೆ. ಕೆಲವು ಫಲಾನುಭವಿಗಳು ಕೆಲವೊಂದು ವ್ಯವಹಾರ ನಡೆಸುವಾಗ ಜಿಎಸ್‌ಟಿ, ಆದಾಯ ತೆರಿಗೆ ವ್ಯಾಪ್ತಿಗೆ ಒಳಪಟ್ಟಿರುತ್ತಾರೆ. ಗೃಹಲಕ್ಷ್ಮಿಗಾಗಿಯೇ ನಿರ್ಮಿಸಲಾಗಿರುವ ಸಾಫ್ಟ್ ವೇರ್‌ನಲ್ಲಿ ಜಿಎಸ್‌ಟಿ, ಆದಾಯ ತೆರಿಗೆ ಅಂತ ತೋರಿಸಿದರೆ ಬದಲಾವಣೆ ಮಾಡಲು ಸಾಧ್ಯವಿಲ್ಲ. ಗೃಹಲಕ್ಷ್ಮಿ ಯೋಜನೆ ನಿರಂತರ ಪ್ರಕ್ರಿಯೆ, ಈಗಾಗಲೇ ಆದಾಯ ತೆರಿಗೆ ಜಿಎಸ್‌ಟಿ ಕೌನ್ಸಿಲ್ ಗಮನಕ್ಕೂ ತರಲಾಗಿದೆ ಎಂದು ಹೇಳಿದರು.

## ಅಡುಗೆ ಅನಿಲ ಸೋರಿಕೆಯಿಂದ ಬೆಂಕಿ ಹೊತ್ತಿ: ಮೂವರು ಸಾವು

ಒಳಗಡೆ ಇದ್ದಂತಹ ಗ್ಯಾಸ್ ತುಂಬಿದ್ದ ಮತ್ತೊಂದು ಸಿಲಿಂಡರನ್ನು ಹೊರಗಡೆ ತೆಗೆದಿದ್ದರು.

ಮೊದಲ ಪುಟದಿಂದ

## ನ್ಯಾಯಮಂಡಳಿ ರಚನೆಗೆ ಆದೇಶ

ಕೇಂದ್ರ ಸರ್ಕಾರವನ್ನು ನವೆಂಬರ್ 2022ರಲ್ಲಿ ತರಾಟೆಗೆ ತೆಗೆದುಕೊಂಡಿತ್ತು.

ಇದಕ್ಕೂ ಮುನ್ನ ಜನವರಿ 2019ರಲ್ಲಿ ಈ ಸಂಕೀರ್ಣ ಸಮಸ್ಯೆಯನ್ನು ಪರಿಹರಿಸಲು ನ್ಯಾಯಮಂಡಳಿ ರಚಿಸುವಂತೆ ತಮಿಳುನಾಡು ಸರ್ಕಾರ ಮನವಿ ಸಲ್ಲಿಸಲು ನ್ಯಾಯಾಲಯ ಅನುಮತಿ ನೀಡಿತ್ತು. ನಂತರ ಮೇ ತಿಂಗಳಲ್ಲಿ ಈ ಉದ್ದೇಶಕ್ಕಾಗಿ ಸುಪ್ರೀಂಕೋರ್ಟ್ ಮತ್ತೊಮ್ಮೆ ಗಡುವು ವಿಸ್ತರಿಸಿತ್ತು.

ಪೆನ್ನಾರ್ ಜಲವಿವಾದ ನ್ಯಾಯಮಂಡಳಿ ರಚನೆಗೆ ಸಂಬಂಧಿಸಿದ ಪ್ರಸ್ತಾವನೆಗೆ ಸಚಿವ ಸಂಪುಟ ಕಾರ್ಯದರ್ಶಿ ಮೂಲಕ ಅನುಮೋದನೆಗಾಗಿ ಕಳುಹಿಸಲಾಗಿದ್ದರೂ ಕೇಂದ್ರ ಸಚಿವ ಸಂಪುಟ ಇನ್ನೂ ಅಂತಿಮ ನಿರ್ಧಾರ ಕೈಗೊಂಡಿಲ್ಲ ಎಂದು 2023ರಲ್ಲಿ ಕೇಂದ್ರ ಜಲಶಕ್ತಿ ಸಚಿವಾಲಯ ಸುಪ್ರೀಂ ಕೋರ್ಟ್ಗೆ ತಿಳಿಸಿತ್ತು.

ಕರ್ನಾಟಕ ಮತ್ತು ತಮಿಳುನಾಡು ನಡುವೆ ಹಲವು ದಶಕಗಳಿಂದ ಜೀವಂತ ಇರುವ ಕಾವೇರಿ ವಿವಾದಕ್ಕೆ ಸಂಬಂಧಿಸಿದಂತೆ ಫೆಬ್ರವರಿ 2018ರಲ್ಲಿ ಐತಿಹಾಸಿಕಾ ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್ ಜಲಸಂಪತ್ತು ರಾಷ್ಟ್ರದ ಆಸ್ತಿಯಾಗಿದ್ದು ಯಾವುದೇ ಒಂದು ರಾಜ್ಯ ಅವುಗಳ ಮೇಲೆ ಏಕಸ್ವಾಮ್ಯ ಸಾಧಿಸುವಂತಿಲ್ಲ ಎಂದು ಆದೇಶಿಸಿತ್ತು.

ಕರ್ನಾಟಕದ ಜಲಾನಯನ ಪ್ರದೇಶದಲ್ಲಿ ಒಟ್ಟು 11.77 ಟಿಎಂಸಿ ನೀರಿನಲ್ಲಿ 9.77 ಟಿಎಂಸಿ ನೀರನ್ನು ಬಳಸಲು ಯೋಜಿಸಲಾಗಿದೆ. ಇದರಲ್ಲಿ 2 ಟಿಎಂಸಿ ಮತ್ತು ಹೆಚ್ಚುವರಿ ನೀರು ತಮಿಳುನಾಡಿಗೆ ಉಳಿದಿದೆ. ಇದು ತಮಿಳುನಾಡಿನ ಅವಶ್ಯಕತೆಗಳನ್ನು ಪೂರೈಸಲು ಸಾಕಾಗುತ್ತದೆ ಎಂದು ಕರ್ನಾಟಕ ವಾದ ಮಂಡಿಸಿತ್ತು.

## ಸಿದ್ದು, ಡಿಕೆಶಿ ಒಗ್ಗಟ್ಟು

ರಾಜ ಕಾರಣದಲ್ಲಿ ನಂಬರ್ ಮೇಲೆ ನಿರ್ಧಾರ ಆಗಲ್ಲ. ನಿಮ್ಮಲ್ಲಿ ಎಷ್ಟೋ ಜನ ಸಿಎಂಗಳು ಬದಲಾದರು. ಪೂರ್ಣ ಕ್ಯಾಬಿನೆಟ್ ಬದ ಲಾಯ್ತು ಎಂದರು. ಇದಕ್ಕೆ ನಿಮ್ಮ ಸ್ಟ್ರೆಂತ್ ಬಾಗಿಲು ಒದ್ದು ಮಂತ್ರಿ ತಗೊಂಡಿದ್ದು. ಆದರೆ ನಿಮ್ಮ ಸಹಜ ಗುಣ ಅಂತ ಬ್ಲೆಡ್ ಹೇಳಿ ದ್ದು. ನಿಮ್ಮ ಹಾಗೂ ಅಶೋಕ್ ಮಾತಿಗೆ ನಾನು ಜಗ್ಗಲ್ಲ ಅಂತ ಡಿಕೆಶಿ ಟಕ್ಕರ್ ಕೊಟ್ಟರು.

## ಬಲೂನ್ ಇದ್ದಂಗೆ!

ಹಿಂದಿನ ಬಿಜೆಪಿ ಸರ್ಕಾರದಿಂದ ರಾಜ್ಯದ ಜನತೆ ಭ್ರಮನಿರಸಗೊಂಡಿದ್ದರು. ಕೊಟ್ಟ ಮಾತಿನಂತೆ ನಾವು ಗೃಹಲಕ್ಷ್ಮೀ ಯೋಜನೆಯನ್ನು ಜಾರಿಗೊಳಿಸಿದ್ದೇವೆ. ಇದುವರೆಗೂ 26 ತಿಂಗಳ ಕಂತು ಬಿಡುಗಡೆಯಾಗಿದ್ದು, ಮನೆ ಮನೆಗೆ ನಮ್ಮ ಯೋಜನೆಗಳು ತಲುಪುತ್ತಿವೆ. ಕಳೆದ ವರ್ಷದ ಫೆಬ್ರವರಿ, ಮಾರ್ಚ್ ತಿಂಗಳ ಹಣ ಬಿಡುಗಡೆ ಕುರಿತು ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಹಾಗೂ ಹಣಕಾಸು ಇಲಾಖೆಯವರು ಇಷ್ಟರಲ್ಲೇ ತೀರ್ಮಾನ ಕೈಗೊಳ್ಳಲಿದ್ದಾರೆ ಎಂದು ತಿಳಿಸಿದರು.

### ನಗರಸಭಾಧ್ಯಕ್ಷ ಹಾಗೂ ಶ್ರೀ ಅಯ್ಯಪ್ಪ ಸ್ವಾಮಿ ಸೇವಾ ಮಂಡಳಿ ಅಧ್ಯಕ್ಷ ಕೆ.ಶೇಷಾದ್ರಿ ಮಾಹಿತಿ । ಫೆ. 4ರಿಂದಲೇ ಧಾರ್ಮಿಕ ಕೈಂಕರ್ಯಗಳು ಆರಂಭ

# ಫೆ.6ರಂದು ರಾಮನಗರದಲಿ ಗಜಗೌರಿ ವ್ರತ ಸಾಮೂಹಿಕ ಆಚರಣೆ



ರಾಮನಗರ: ಲೋಕಕಲ್ಯಾಣಾರ್ಥ ಇದೇ ಫೆ.6ರಂದು ನಗರದಲ್ಲಿ ಗಜಗೌರಿ ವ್ರತ ಸಾಮೂಹಿಕ ಆಚರಣೆ ನಡೆಯಲಿದೆ. ಆಸ್ತಿಕರೆಲ್ಲರು ಜೀವನದಲ್ಲಿ ಯಶಸ್ಸು ಮತ್ತು ಮಕ್ಕಳ ಶ್ರೇಯಕ್ಕಾಗಿ ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಹಕರಿಸಬೇಕು ಎಂದು ನಗರಸಭಾಧ್ಯಕ್ಷ ಹಾಗೂ ಶ್ರೀ ಅಯ್ಯಪ್ಪ ಸ್ವಾಮಿ ಸೇವಾ ಮಂಡಳಿ ಅಧ್ಯಕ್ಷ ಕೆ.ಶೇಷಾದ್ರಿ ತಿಳಿಸಿದರು.

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಅಗ್ರಹಾರದಲ್ಲಿ ಅಯ್ಯಪ್ಪ ಸ್ವಾಮಿ ದೇವಾಲಯ ನಿರ್ಮಾಣಕ್ಕೆ ಉದ್ದೇಶಿಸಿರುವ ಭೂಮಿಯಲ್ಲಿ ಗಜಗೌರಿ ವ್ರತ ಸಾಮೂಹಿಕ ಆಚರಣೆ ನಡೆಯಲಿದೆ. ಈಗಾಗಲೆ ಶುಲ್ಕ ಕೊಟ್ಟು ನೋಂದಾಯಿಸಿಕೊಂಡಿರುವ 108 ದಂಪತಿಗಳಿಂದ ಗಜಗೌರಿ ವ್ರತಾಚರಣೆ ನಡೆಯಲಿದೆ. ಗಜಗೌರಿ ವ್ರತಾಚರಣೆ ಫೆ.4ರಿಂದಲೇ ಆರಂಭವಾಗಲಿದೆ. ಫೆ.8ರಂದು ಗಜಗೌರಿ ಮೂರ್ತಿಗಳ ವಿಸರ್ಜನೆಯೊಂದಿಗೆ ಸಂಪನ್ನವಾಗಲಿದೆ ಎಂದರು.

### ಗಜಗೌರಿ ವ್ರತದ ಮಹತ್ವ

ಗಜಗೌರಿ ವ್ರತಾಚರಣೆಯ ಬಗ್ಗೆ ಮಹಾಭಾರತದಲ್ಲಿ ಉಲ್ಲೇಖವಿದೆ. ಕೌರವರ ತಾಯಿ ಗಾಂಧಾರಿ ತನ್ನ ಮಕ್ಕಳ ಶ್ರೇಯಕ್ಕಾಗಿ ನಾರದಮುನಿಯವರ ಸಲಹೆ ಮೇರೆಗೆ ಈ ವ್ರತವನ್ನು ಆಚರಿಸುತ್ತಾಳೆ. ಗಜಗೌರಿಯರನ್ನು ಮಣ್ಣಿನ ಆಕೃತಿಗಳನ್ನು ಮಾಡಿ ಮಣ್ಣಿನ ಆನೆಯ ಮೇಲೆ ಪ್ರತಿಷ್ಠಾಪಿಸಿ, ಪೂಜಿಸಿ ವತ್ರವನ್ನು ಆಚರಿಸುತ್ತಾಳೆ. ಗ್ರಾಮದ ಎಲ್ಲರನ್ನು ಈ ವ್ರತಾಚರಣೆಗೆ ಆಹ್ವಾನಿಸುವ ಗಾಂಧಾರಿ, ಪಾಂಡವರನ್ನು ಆಹ್ವಾನಿಸುವುದಿಲ್ಲ. ಹೀಗಾಗಿ ಪಾಂಡವರು ತಾವೇ ಸ್ವತಃ ಗಜಗೌರಿ ವತ್ರವನ್ನು ಆಚರಿಸಲು ಮುಂದಾಗಿ, ಶ್ರೀಕೃಷ್ಣನ ಸಹಕಾರದಲ್ಲಿ ಇಂದ್ರಲೋಕದಿಂದ ಸಾಕ್ಷಾತ್ ಐರಾವತವನ್ನು ತಂದು ವ್ರತವನ್ನು ಆಚರಿಸುತ್ತಾರೆ. ಗಜಗೌರಿ ವ್ರತಾಚರಣೆಯ ಮಹತ್ವ ಮಹಭಾರತದಲ್ಲೇ ಉಲ್ಲೇಖವಾಗಿದೆ. ರಾಮನಗರದ ಸಮಸ್ತ ನಾಗರೀಕರ ಒಳಿತಿಗಾಗಿ ಮತ್ತು ಲೋಕಕಲ್ಯಾಣಾರ್ಥ ರಾಮನಗರದಲಿ ಮೂರು ದಶಕಗಳ ನಂತರ ನಡಯುತ್ತಿದೆ. ಈ ಬಾರಿ ಶ್ರೀ ಸೀತಾರಾಮ ಸೇವಾ ಟ್ರಸ್ಟ್, ಶ್ರೀ ಬಲಮುರಿ ಗಣಪತಿ ದೇವಸ್ಥಾನ ಟ್ರಸ್ಟ್ ಮತ್ತು ಶ್ರೀ ಅಯ್ಯಪ್ಪ ಸ್ವಾಮಿ ಸೇವಾ ಮಂಡಳಿಗಳು ನಾಗರೀಕರ ಸಹಕಾರದಲ್ಲಿ ಅದ್ದೂರಿಯಾಗಿ ಈ ವ್ರತವನ್ನು ಹಮ್ಮಿಕೊಂಡಿದ್ದಾರೆ. ಆಸ್ತಿಕರೆಲ್ಲರೂ ಈ ವ್ರತದಲ್ಲಿ ಭಾಗವಹಿಸಬೇಕು ಎಂದು ಕರೆ ನೀಡಿದರು.

### ಫೆ.4 ರಿಂದ ಧಾರ್ಮಿಕ ಕಾರ್ಯಕ್ರಮಗಳು ಆರಂಭ

ಫೆ.4ರಂದು ಶ್ರೀ ಅಯ್ಯಪ್ಪ ಸ್ವಾಮಿ ಸೇವಾ ಮಂಡಳಿವತಿಯಿಂದ ಸಂಜೆ 4 ಗಂಟೆಗೆ ಗಂಗಪೂಜೆ, ಗೋಪೂಜೆ, ಗಣಪತಿ ಪೂಜೆ, ಪಣ್ಯಾಹ, ಮಹಾಸಂಕಲ್ಪ, ಕಂಕಣ ಬಂಧನ, ಅಂಕುರಾರ್ಪಣೆ, ಕಳಸ ಸ್ಥಾಪನೆ, ವಾಸ್ತು ಹೋಮ, ರಕ್ಷೋಘ್ನ ಹೋಮ, ದಿಗ್‌ಬಲಿ ಪೂಜೆ, ಪೂರ್ಣಾಹುತಿ ಮತ್ತು ಪ್ರಸಾದ ವಿನಿಯೋಗ ಕಾರ್ಯಕ್ರಮ ನಡೆಯಲಿದೆ.

ಫೆ.5ರಂದು ಬೆಳಿಗ್ಗೆ 7.30ಕ್ಕೆ ಗಣಪತಿ ಹೋಮ, ನವಗ್ರಹ ಹೋಮ, ರುದ್ರಾಭಿಷೇಕ, ರುದ್ರ ಹೋಮ, ಮೃತ್ಯುಂಜಯ ಹೋಮ, ಸಂಜೆ 5.30ಕ್ಕೆ ಆಶ್ಲೇಷ ಬಲಿ ಪೂಜಾ ಕಾರ್ಯಕ್ರಮ ನಡೆಯಲಿದೆ ಎಂದು ಮಾಹಿತಿ ಕೊಟ್ಟರು.

### ಫೆ.6ರಂದು ಗಜಗೌರಿ ವ್ರತಾಚರಣೆ

ಫೆ. 6ರಂದು ಬೆಳಿಗ್ಗೆ 7 ಗಂಟೆಯಿಂದ ಗಜಗೌರ ವ್ರತವನ್ನು ಆಚರಿಸುವ ದಂಪತಿಗಳು ರಾಜಬೀದಿಯಲ್ಲಿ ಕಳಸ ಸಮೇತ ಮೆರವಣಿಗೆಯಲ್ಲಿ ಪೂಜಾ ಮಂಟಪಕ್ಕೆ ಬರಲಿದ್ದಾರೆ. ಬೆಳಿಗ್ಗೆ 9 ಗಂಟೆಯಿಂದ 3 ಗಂಟೆವರೆಗೆ ಗಜಗೌರಿ ವ್ರತಾಚರಣೆ ನಡಯಲಿದೆ. ಇದೇ ದಿನ ಸಂಜೆ 6 ಗಂಟೆಯಿಂದ ಮಕ್ಕಳಿಂದ ಕಂಸಾಳೆ ನೃತಯ ಪ್ರದರ್ಶನ, ಮಹಿಳೆಯರಿಂದ ಡೊಳ್ಳು ಕುಣಿತ ಪ್ರದರ್ಶನ ನಡೆಯಲಿದೆ. ಸಂಜೆ 7 ಗಂಟೆಗೆ ಕಾಶಿಯಲ್ಲಿ ನಡೆಯುವ ಗಂಗಾರತಿ ಮಾದರಿಯಂತೆ ಗಂಗಾರತಿ ನಡೆಯಲಿದೆ ಎಂದರು.

ಫೆ. 7ರಂದು ರಾಮನಗರದ ಪೌರ ಕಾರ್ಮಿಕರಿಗೆ ಮಡಲಕ್ಕಿ ತುಂಬುವ ಕಾರ್ಯಕ್ರಮ, 10 ಸಾವಿರ ಗಾಯತ್ರಿ ಜಪ ಮತ್ತು ಗಾಯತ್ರಿ ಹೋಮ ನಡೆಯಲಿದೆ. ಇದೇ ವೇಳೆ ವಿವಿಧ ಭಜನಾ ಮಂಡಳಿಗಳಿಂದ ಅಖಂಡ ಭಜನೆ ನಡೆಯಲಿದೆ. ಸಂಜೆ 7 ಗಂಟೆಯ ನಂತರ ಗಜಗೌರಿ ಹರಿಕಥೆ ಮತ್ತು ದುರ್ಗಾ ದೀಪ ನಮಸ್ಕಾರ, ಪ್ರಸಾದ ವಿನಿಯೋಗ ಕಾರ್ಯಕ್ರಮಗಳು ನಡೆಯಲಿವೆ.

### ಫೆ.8 ಮೂರ್ತಿಗಳ ವಿಸರ್ಜನೆ

ಫೆ.8ರಂದು ಶ್ರೀ ಕ್ಷೇತ್ರ ಶಿವಗಂಗೆ ದೇವರಿಗೆ ಗಿರಿಜಾ ಕಲ್ಯಾಣ ನಡೆಯಲಿದೆ. ಇದೇ ದಿನ ಮಧ್ಯಾಹ್ನ 3 ಗಂಟೆಯಿಂದ ಗಜಗೌರಿಗಳನ್ನು ಆನೆಯ ಮೇಲಿರಿಸಿ ಮೆರವಣಿಗೆ ನಡೆದು ನಂತರ ರಂಗರಾಯರದೊಡ್ಡಿ ಕೆರೆಯಲ್ಲಿ ಮೂರ್ತಿಗಳ ವಿಸರ್ಜನೆ ನಡೆಯಲಿದೆ ಎಂದು ತಿಳಿಸಿದರು. ಗಜಗೌರಿ ವತ್ರಚಾರಣೆಗೆ ಶಾಸಕ ಇಕ್ಬಾಲ್ ಹುಸೇನ್ ಸೇರಿದಂತೆ ನಗರದ ಗಣ್ಯರು, ಪ್ರಮುಖರು ಸಹಕಾರ ನೀಡುತ್ತಿದ್ದಾರೆ. ಆಸ್ತಿಕರೆಲ್ಲರು ಈ ವ್ರತಾಚರಣೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

### ಆಶ್ಲೇಷ ಬಲಿ ಪೂಜೆ: ಸಂಕಲ್ಪಕ್ಕೆ ಅವಕಾಶ

ಶ್ರೀ ಸೀತಾರಾಮ ಸೇವಾ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಕೆ.ವಿ.ಉಮೇಶ್ ಅವರು ಮಾತನಾಡಿ, ಫೆ.5ರಂದು ನಡೆಯುವ ಆಶ್ಲೇಷ ಬಲಿ ಪೂಜೆಗೆ ಆಸ್ತಿಕರು ಯಾರು ಬೇಕಾದರು ಸಂಕಲ್ಪ ಮಾಡಲು ಅವಕಾಶವಿದೆ. ನಾಗದೋಷ ಇರುವ ಯಾರೇ ಆದರು ಈ ಪುಣ್ಯ ಕಾರ್ಯಕ್ರಮದಲ್ಲಿ ಭಾಗವಹಿಸಿದರೆ ಪರಿಹಾರ ಸಾಧ್ಯ ಎಂದು ಹಿರಿಯರ ಅಭಿಪ್ರಾಯವಿದೆ ಎಂದು ಕೆ.ವಿ,ಉಮೇಶ್ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಅವರನ್ನು ಮೊಬೈಲ್ ಸಂಖ್ಯೆ 7019261656 ಮೂಲಕ ಸಂಪರ್ಕಿಸಬಹುದು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಆನಂದಸ್ವಾಮಿ ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಸಬ್ಬಕೆರೆ ಶಿವಲಿಂಗಯ್ಯ, ನಗರಸಭಾ ಸದಸ್ಯ ಸೋಮಶೇಖರ್ (ಮಣಿ), ಪ್ರಮುಖರಾದ ಆರ್.ವಿ.ಸುರೇಶ್, ಗೂಳಿ ಗೌಡ, ಕುಮಾರಸ್ವಾಮಿ, ಪಿ.ಶಿವಾನಂದ, ರಘು, ಮುಂತಾದವರು ಹಾಜರಿದ್ದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

# ಕರುನಾಡಿನಲ್ಲಿ ನೆಮ್ಮದಿಯ ಗ್ಯಾರಂಟಿ

## ಅಲ್ಪಸಂಖ್ಯಾತರ ಕಲ್ಯಾಣಕ್ಕೆ ಬದ್ಧ





- ಮಂಗಳೂರಿನಲ್ಲಿ ಹಜ್ ಭವನ ನಿರ್ಮಾಣ
- 2024-25 ನೇ ಸಾಲಿನಲ್ಲಿ ಜೈನರ ಪ್ರಮುಖ ಧಾರ್ಮಿಕ ಸ್ಥಳಗಳ ಅಭಿವೃದ್ಧಿಗಾಗಿ ₹. 50 ಕೋಟಿ ಅನುದಾನ
- ಅಲ್ಪಸಂಖ್ಯಾತರ 169 ವಸತಿ ಶಾಲೆ / ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ 25,000 ವಿದ್ಯಾರ್ಥಿನಿಯರಿಗೆ ಸ್ವಯಂ ರಕ್ಷಣಾ ಕೌಶಲ್ಯ ತರಬೇತಿ
- ಉಳ್ಳಾಲದಲ್ಲಿ ಅಲ್ಪಸಂಖ್ಯಾತರ ವಿದ್ಯಾರ್ಥಿನಿಯರಿಗಾಗಿ ವಸತಿ ಸಹಿತ ಪಿಯು ಕಾಲೇಜುಗಳ ಸ್ಥಾಪನೆ
- 50 ಹೊಸ ಮೌಲಾನಾ ಆಜಾದ್ ಶಾಲೆಗಳು ಆರಂಭ
- ಕೆಪಿಎಸ್ ಮಾದರಿಯಲ್ಲಿ ಉರ್ದು ಶಾಲೆಗಳ ಅಭಿವೃದ್ಧಿ
- ಬೆಂಗಳೂರಿನಲ್ಲಿ ಹಜ್ ಭವನಕ್ಕೆ ಬರುವ ಪ್ರವಾಸಿಗರಿಗೆ ಉಳಿದುಕೊಳ್ಳಲು ವ್ಯವಸ್ಥೆ ಕಲ್ಪಿಸಲು ಈ ಬಾರಿ ₹. 10 ಕೋಟಿ ಅನುದಾನ



ಕರ್ನಾಟಕ ನವ ನಿರ್ಮಾಣಕ್ಕೆ
## ಗ್ಯಾರಂಟಿ ಸರ್ಕಾರ...

ಗ್ಯಾರಂಟಿ ಯೋಜನೆಗಳ ಜೊತೆಗೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿ ಮಾಡುತ್ತಾ ನುಡಿದಂತೆ ನಡೆದು ಜನರ ವಿಶ್ವಾಸ ಗಳಿಸಿದ್ದೇವೆ.

ವೈಜ್ಞಾನಿಕ ಮನೋಧರ್ಮ ಬೆಳೆಸಿಕೊಳ್ಳುವುದು; ಪ್ರಶ್ನೆ ಮಾಡುವ ಮತ್ತು ಬದಲಾವಣೆಗೆ ಒಡ್ಡಿಕೊಳ್ಳುವ ಮನಃಸ್ಥಿತಿ ಬೆಳೆಸಿಕೊಳ್ಳುವುದು.- ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

ಬ್ರಾಹ್ಮಣ ಸಮುದಾಯ ಮಾಲೀಕತ್ವದ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

# ಉಚಿತ ಕಣ್ಣಿನ ತಪಾಸಣಾ ಶಿಬಿರ



ಚಾಮರಾಜನಗರ: ರೋಟರಿ ಸಂಸ್ಥೆ ವತಿಯಿಂದ ನಗರದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ನಡೆಯಿತು. ನಗರದ ಬಿ.ರಾಚಯ್ಯ ಜೋಡಿರಸ್ತೆಯಲ್ಲಿರುವ ರೋಟರಿ ಭವನದಲ್ಲಿ ರೋಟರಿ ಸಂಸ್ಥೆ, ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮ, ಅರವಿಂದ ಕಣ್ಣಿನ ಆಸ್ಪತ್ರೆ ಇವರ ಸಂಯುಕ್ತಾಶ್ರಯದಲ್ಲಿ ನಡೆದ ಉಚಿತ ಕಣ್ಣಿನ ತಪಾಸಣೆ ಶಿಬಿರದಲ್ಲಿ 155 ಮಂದಿ ತಪಾಸಣೆ ಮಾಡಿಸಿಕೊಂಡರು. 80 ಮಂದಿ ಶಸ್ತ್ರಚಿಕಿತ್ಸೆಗೆ ಆಯ್ಕೆಯಾಗಿದ್ದು, ಅವರನ್ನು ಕೊಯಮತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಶಿಬಿರದಲ್ಲಿ ವ್ಯವಸ್ಥೆ ಮಾಡಲಾಯಿತು.

ರೋಟರಿ ಸಂಸ್ಥೆ ಖಜಾಂಚಿ ಆರ್.ಎಂ.ಸ್ವಾಮಿ ಮಾತನಾಡಿ, ರೋಟರಿ ಸಂಸ್ಥೆಯು ಪ್ರತಿ ತಿಂಗಳು ಮೊದಲನೆಯ ಭಾನುವಾರ ಉಚಿತ ನೇತ್ರ ತಪಾಸಣಾ ಶಿಬಿರವನ್ನು ಅಯೋಜಿಸುತ್ತಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶಿಬಿರದ ಪ್ರಯೋಜನ ಪಡೆಯುತ್ತಿರುವುದು ತುಂಬಾ ಖುಷಿ ತಂದಿದೆ ಎಂದು ಹೇಳಿದರು. ಸೇವಾ ಕಾರ್ಯ ಮಾಡುವ ಮೂಲಕ ರೋಟರಿ ಸಂಸ್ಥೆ ಎಲ್ಲರಿಗೂ ಮಾದರಿಯಾಗಿದೆ. ರೋಟರಿ ಸಂಸ್ಥೆ ಈಗಾಗಲೆ ಸಾವಿರಾರು ಜನರ ಕಣ್ಣಿನ ದೃಷ್ಟಿ ಸಮಸ್ಯೆ ನಿವಾರಿಸಿದೆ..ಶಸ್ತ್ರ ಚಿಕಿತ್ಸೆ ಪಡೆದ ಫಲಾನುಭವಿಗಳು ದೃಷ್ಟಿ ಪಡೆದು ಸಂತಸ ವ್ಯಕ್ತಪಡಿಸಿದ್ದಾರೆ.ಪ್ರತಿ ತಿಂಗಳು ಮೊದಲ ಭಾನುವಾರ ನಡೆಯುವ ಈ ಸೇವಾ ಕಾರ್ಯಕ್ರಮ ರೋಟರಿಯ ಸಾರ್ಥಕ ಸೇವೆಯಾಗಿದೆ ಎಂದು ಅಭಿಪ್ರಾಯಪಟ್ಟರು.. ಅರವಿಂದ ಆಸ್ಪತ್ರೆ ಯ ವೈದ್ಯರು ಗಳಾದ ಡಾ.ಸಾಯಿತೇಜ,ಡಾ.ಜೈ ಓಸ್ವಾಲ್,ಡಾ.ಚಂದ್ರವದನ್ ತಪಾಸಣೆ ನಡೆಸಿದರು. ಕಾರ್ಯಕ್ರಮದಲ್ಲಿ ರೋಟರಿಯನ್ನಗಳಾದ ಸುಭಾಷ್ ,ಶ್ರೀನಿವಾಸ್,ಸಿದ್ದಮಲ್ಲಪ್ಪ,ನಾರಾಯಣ್,ಸುರಭಿ ನಾಗರಾಜು, ಹೊನ್ನಮೇಟಿ ಸುಂದರ್, ಸವಿತಾ, ಪಿಆರ್ ಓ ವಿಜಯ ಕಾಂತ್ ಹಾಜರಿದ್ದರು.

ಐತಿಹಾಸಿಕ ಮುಡುಕುತೊರೆ ಜಾತ್ರಾ ಮಹೋತ್ಸವ

# ಅರವಟ್ಟಿಗೆ ಬೀದಿಗೆ ಮೂಲಸೌಕರ್ಯ ಕಲ್ಪಿಸಲು ಒತ್ತಾಯ



ಚಾಮರಾಜನಗರ, ಐತಿಹಾಸಿಕ ಮುಡುಕುತೊರೆ ಜಾತ್ರಾ ಮಹೋತ್ಸವವು ಸಾಂಪ್ರಾದಾಯಿಕ ಹಾಗೂ ಧಾರ್ಮಿಕ ಪೂಜಾ ಕಾರ್ಯಕ್ರಮದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡು, ಸರತಿಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ಪುನೀತರಾದರು.

ಮುಡುಕುತೊರೆಯ ಅರವಟ್ಟಿಗೆ ಬೀದಿಯಲ್ಲಿ ಚಾಮರಾ ಜನಗರ ತಾಲೂಕಿನ ಹೆಗ್ಗವಾಡಿಪುರ ದೇಶವಳ್ಳಿ ಮಹೇಶ್ ಕುಮಾರ್, ರಾಜು, ಶ್ರೀಕಂಠಶರ್ಮಾ ಕುಟುಂಬವರ್ಗದ ವತಿಯಿಂದ ಪ್ರತಿವರ್ಷದಂತೆ ಈ ಬಾರಿಯು ಅರವಟ್ಟಿಗೆ ನಡೆಯಿತು. ದಾಸೋಹದಲ್ಲಿ ಸಹಸ್ರಾರು ಜನರು ಭಾಗ ವಹಿಸಿ ಕಡ್ಲೆಕಾಳುಹುಳಿ, ಪಾಯಸ ಸವಿದರು.

**ಮುತ್ತೈದೆಯರಿಗೆ ಬಾಗಿನ ಅರ್ಪಣೆ**

ಹೆಗ್ಗವಾಡಿಪುರ ದೇಶವಳ್ಳಿ ಮಹೇಶ್‌ಕುಮಾರ್, ರಾಜು, ಶ್ರೀಕಂಠಶರ್ಮಾ ಕುಟುಂಬವರ್ಗ ನೂರಾರು ಮುತ್ತೈದೆಯರಿಗೆ ಬಾಗಿನ ಅರ್ಪಿಸಿ ನಮಿಸಿದರು. ಈ ವೇಳೆ ಹೆಗ್ಗವಾಡಿಪುರ ಮಹೇಶ್‌ಕುಮಾರ್ ಮಾತನಾಡಿ, ಮೂಡುಕುತೊರೆಯಲ್ಲಿ ವಿಶ್ವಮಾತೆ ಭ್ರಮರಾಂಭಿಕದೇವಿ ಸಮೇತ ವಿಶ್ವದಾತ ಮಲ್ಲಿಕಾರ್ಜುನಸ್ವಾಮಿ ಬೆಟ್ಟವು ಯಾತ್ರಸ್ಥಳವಾಗಿದ್ದು, ಭಕ್ತರ ಇಷ್ಟಾರ್ಥ ಈಡೇರಿಸುವ ಆರಾಧ್ಯದೈವವಾಗಿರುವ ಭ್ರಮರಾಂಭ ಮಲ್ಲಿಕಾರ್ಜುನಸ್ವಾಮಿ ಬೆಟ್ಟವಾಗಿದೆ. ಇಲ್ಲಿ ನಮ್ಮ ಪೂರ್ವಜರು ಎರಡು ಶತಮಾನಗ ಳಿಂದಲ್ಲೂ ಇಲ್ಲಿ ಬಂದು ಅರವಟ್ಟಿಗೆ ಮಾಡಿಕೊಂಡು ಬಂದಿದ್ದಾರೆ. ತಾವು ಹೊಲದಲ್ಲಿ ಬೆಳೆದ ಪದಾರ್ಥಗಳನ್ನು ಶೇಖರಣೆ ಮಾಡಿ ತಂದು ದಾಸೋಹ ಮಾಡಿ ಜನರಿಗೆ ಬಡಿಸುವುದು ಮಾಡಿಕೊಂಡು ಬಂದಿದ್ದು ಅ ಪದ್ಧತಿಯನ್ನು ನಾವು ಮುಂದು ವರಿಸಿಕೊಂಡು ಹೋಗುತ್ತಿದ್ದೇವೆ ಎಂದರು. ಸರ್ಕಾರ ಅರವಟ್ಟಿಗೆ ಬೀದಿಗೆ ಮೂಲಭೂತ ಸೌಕರ್ಯ ಒದಗಿಸಬೇಕು ಎಂದು ಒತಾಯಿ ಸಿದರು. ಶೈಲಜಾ ಶ್ರೀಕಂಠ ಶರ್ಮಾ, ರಾಜೇಶ್ವರಿ ವೃಷಬೇಂದ್ರಸ್ವಾಮಿ ನಾಗರತ್ನಮ್ಮ, ಬಾಲಮಣಿ, ಲೀಲಾವತಿ ಶ್ರೀಕಂಠಸ್ವಾಮಿ, ಎಚ್.ಸಿ.ಸುಧಾ, ಮಂಜುಳ ಶ್ರೀಧರ್, ಜ್ಞಾ ನಾಂಭ, ಉಷಾಮಹೇಶ್ವರಿ, ಉಮಾಸತೀಶ್, ರಮ್ಯಶ್ರೀ ಕಾಂತ್, ಮೌನಶ್ರೀ ಅಜಯ್, ಹೆಚ್.ಎಂ ಓಂಕಾರ್, ಎಸ್.ಭಾಗ್ಯ, ಎಸ್ .ಶೀಲಾ ಇತರರು.ಹಾಜರಿದ್ದರು.

# ಕೆರೆಗಳ ಹೂಳೆತ್ತಲು ಸೂಚನೆ

## ಶಾಸಕ ಮಂಜುನಾಥ್ ಗ್ರಾಮಸ್ಥರಿಗೆ ಸೂಚನೆ



ಹನೂರು: ತಾಲೂಕಿನ ಬಿ.ಗುಂಡಾಪುರ ದೊಡ್ಡಕೆರೆ (ಗಂಜಗೆರೆ) ಗಿಡಗಂಟಿ ತೆರವುಗೊಳಿಸಿ ಹೂಳು ಎತ್ತುವ ಕಾಮಗಾರಿಯನ್ನು ಕೈಗೊಳ್ಳಲು ಶಾಸಕ ಮಂಜುನಾಥ್ ಗ್ರಾಮಸ್ಥರಿಗೆ ಸೂಚನೆ ನೀಡಿದರು.

ಬೂದುಬಾಳು ದೊಡ್ಡಕೆರೆ ಗ್ರಾಮಕ್ಕೆ ನೀರು ತುಂಬಿಸುವ ಕಾರ್ಯಕ್ರಮ ಮುಗಿಸಿ ತೆರಳುವಾಗ ಬಿ.ಗುಂಡಾಪುರ ಗ್ರಾಮದ ಯಜಮಾನರಾದ ಬಿಎಸ್‌ಎಫ್ ಮಹದೇವ್, ಯಜಮಾನರಾದ ಕೆ. ಮಹದೇವ, ಸಿದ್ದರಾಜು ಇನ್ನಿತರರು ಗ್ರಾಮದಲ್ಲಿ ಜಲಜೀವನ್ ಮಿಷನ್ ಯೋಜನೆಯ ಕುಡಿಯುವ ನೀರು ಹಾಗೂ ಕೊಳವೆ ಬಾವಿಗಳಿಂದ ಬರುವ ನೀರಿಗೆ ಪ್ರತ್ಯೇಕ ಟ್ಯಾಂಕ್ ವ್ಯವಸ್ಥೆ ಕಲ್ಪಿಸಬೇಕು. ಗ್ರಾಮದ ಅವಳಿ ಕೆರೆಗಳಾದ ದೊಡ್ಡಕೆರೆ, ಚಿಕ್ಕಕೆರೆಗಳು ಮಳೆಯಿಲ್ಲದೆ ಬರಿದಾಗಿವೆ ಇದರಿಂದ ಜಾನುವಾರುಗಳಿಗೆ ನೀರಿನ ತೊಂದರೆಯಾಗಿದೆ. ಬೇಸಿಗೆ ಪ್ರಾರಂಭವಾದರೆ ಸುತ್ತಮುತ್ತಲಿನ ಪಂಪ್ ಸೆಟ್ ಜಮೀನುಗಳಲ್ಲಿನ ಕೊಳವೆ ಬಾವಿಗಳು ಸೇರಿದಂತೆ ಗ್ರಾಮಕ್ಕೆ ನೀರು ಸರಬರಾಜು ಆಗುವ ಕೊಳವೆ ಬಾವಿಗಳು ಅಂತರ್ಜಲ ಕುಸಿತದಿಂದ ನೀರು ಬರುವುದಿಲ್ಲ. ಈಗಾಗಲೇ ಬೂದುಬಾಳು ಗ್ರಾಮದಲ್ಲಿ ಹರಿಯುತ್ತಿರುವ ಹಳ್ಳದಿಂದ ಅಥವಾ ಕಾವೇರಿ ನೀರು ಸರಬರಾಜು ಘಟಕದಿಂದ ನೀರು ತುಂಬಿಸುವ ಪುಣ್ಯದ ಕಾರ್ಯವನ್ನು ಮಾಡಿಕೊಡಬೇಕೆಂದು ಮನವಿ ಮಾಡಿದರು.

ಈ ಹಿನ್ನಲೆಯಲ್ಲಿ ಶಾಸಕ ಮಂಜುನಾಥ್ ಅವರು ಗ್ರಾಮದ ಮುಖಂಡ ಬಿಎಸ್‌ಎಫ್ ಮಹದೇವ ಅವರಿಗೆ ಕೆರೆ ಸುತ್ತಲಿನ ಗಿಡಗಂಟಿ ಹಾಗೂ ಹೂಳು ತೆರೆವುಗೊಳಿಸುವ ಕಾಮಗಾರಿಯನ್ನು ಕೈಗೊಳ್ಳಲು ಸೂಚಿಸಿ ಖರ್ಚು ವೆಚ್ಚಗಳ ಮಾಹಿತಿಯನ್ನು ಕೊಡಿ ಬರುವ ಶುಕ್ರವಾರ ಗ್ರಾಮಕ್ಕೆ ಬಂದು ಪರಿಶೀಲನೆ ನಡೆಸಲಾಗುವುದು ಎಂದು ತಿಳಿಸಿದರು.

### ಗರಿಗೆದರಿದ ಕಾವೇರಿ ನೀರಿನ ಕನಸು ಸಂಭ್ರಮ

ಬೂದುಬಾಳು ಗ್ರಾಮದ ಬಳಿ ಇರುವ ಕಾವೇರಿ ನೀರಿನ ಸರಬರಾಜು ಘಟಕ ಹಾಗೂ ಈಗಾಗಲೇ ಬೂದುಬಾಳು ಚಂಗವಾಡಿ ಮಾದಯ್ಯನ ಕೆರೆ ಹಳ್ಳದಲ್ಲಿ ಮೂಲಕ ಹರಿಯುತ್ತಿರುವ ಕಾವೇರಿ ನೀರನ್ನು ಬಿ.ಗುಂಡಾಪುರ ದೊಡ್ಡಕೆರೆಗೆ ತರಲು ಕೇವಲ ಒಂದೂವರೆ ಕಿ.ಮಿ. ಅಂತರವಿರವಿದೆ. ಕ್ಷೇತ್ರದ ಜನತೆಯ ಕಲ್ಯಾಣಕ್ಕೆ ಪಣ ತೊಟ್ಟಿರುವ ಶಾಸಕ ಮಂಜುನಾಥ್ ಅವರು ನಮ್ಮ ಗ್ರಾಮದ ಕೆರೆಗೆ ನೀರು ತುಂಬಿಸುತ್ತಾರೆ ಎಂಬ ಆಶಾಭಾವನೆ ಗ್ರಾಮಸ್ಥರಲ್ಲಿ ಒಡಮೂಡಿದೆ. ಈ ಹಿನ್ನಲೆಯಲ್ಲಿ ಗ್ರಾಮದ ಯಜಮಾನರುಗಳು ಪಂಚಾಯ್ತಿ ಸೇರಿ ಮಂಗಳವಾರ ಕೆರೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲು ಹುರುಪಿನಿಂದಲೇ ಸಿದ್ಧತೆ ಕೈಗೊಂಡಿದ್ದಾರೆ.

### ದೊಡ್ಡಕೆರೆ ವಿಶೇಷತೆ

ಗ್ರಾಮದ ದೊಡ್ಡ ಕೆರೆಯ ವಿಶೇಷವೆಂದರೆ ಒಮ್ಮೆ ಮೈದುಂಬಿದರೆ ಬೇಸಿಗೆ ಬಂದರು ನೀರು ನಿಲ್ಲುವ ಮಣ್ಣಿನ ಗುಣವನ್ನು ಹೊಂದಿದೆ. ಈ ಕೆರೆಯ ಆಳದವರೆಗೂ ಕಣ್ಣು ಹಾಯಿಸುವಷ್ಟು ದೃಶ್ಯ ಗೋಚರವಾಗುತ್ತದೆ. ಕಳೆದ ಮೂವತ್ತು ನಲವತ್ತು ವರ್ಷಗಳ ಹಿಂದೆ ಗ್ರಾಮದ ಕುಡಿಯುವ ನೀರಿನ ಏಕೈಕ ಮೂಲ ಇದಾಗಿತ್ತು. ಹಾಲಿನ ನೊರೆಯಷ್ಟು ಶ್ರೇಷ್ಠವಾಗಿತ್ತು ಈ ಕೆರೆಯ ನೀರು. ಬರಗಾಲ ಹಾಗೂ ಬೇಸಿಗೆಯ ಅಭಾವದಲ್ಲಿ ನೆರೆಯ ಬೂದುಬಾಳು, ಮಂಗಲ, ಕಾಮಗೆರೆ ಗ್ರಾಮಗಳ ಜನತೆ ಈ ಕೆರೆಯ ನೀರನ್ನು ಕುಡಿಯಲು ಹೊತ್ತು ಹೋಗುತ್ತಿದ್ದರು ಎಂದು ಸ್ಮರಿಸುತ್ತಾರೆ ಗ್ರಾಮದ ಹಿರಿಯರು.

# ಕಾಡುಪ್ರಾಣಿಗಳ ಹಾವಳಿ ತಪ್ಪಿಸುವಂತೆ ಸಂಘಟನೆ ವತಿಯಿಂದ ಒತ್ತಾಯ

ಗುಂಡ್ಲುಪೇಟೆ. ಪಟ್ಟಣದ ಹಳೆ ಪ್ರವಾಸಿ ಮಂದಿರದಲ್ಲಿ ಜಯ ಕರ್ನಾಟಕ ರಕ್ಷಣಾ ಸೇನೆ ವತಿಯಿಂದ ಕಾಡಂಚಿನ ಗ್ರಾಮಗಳಲ್ಲಿ ಕಾಡುಪ್ರಾಣಿಗಳ ಹಾವಳಿ ತಪ್ಪಿಸುವಂತೆ ವಲಯ ಅರಣ್ಯ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು

ನಂತರ ಜಿಲ್ಲಾಧ್ಯಕ್ಷ ಈಶ್ವರ್ ಎಸ್ ಮಾತನಾಡಿ

ತಾಲೂಕಿನ ಕಾಡಂಚಿನ ಗ್ರಾಮಗಳಲ್ಲಿ ಹುಲಿ ಮತ್ತು ಚಿರತೆಗಳು ಕಾಡಿನಿಂದ ಬಂದು ರೈತರು ತಮ್ಮ ಜಮೀನಿಗೆ ಹೋಗುವಾಗ ದಾಳಿ ಮಾಡಿ ಪ್ರಾಣಾಪಾಯ ಮಾಡಿರುವುದು ಎಲ್ಲೆಡೆ ನಡೆದಿರುತ್ತದೆ, ರೈತರು ದಿನನಿತ್ಯ ಭಯದಿಂದ ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ರೈತರಿಗೆ ಅರಣ್ಯ ಇಲಾಖೆ ಸೂಕ್ತ ಬಂದುಬಸ್ತ್ ಕಲ್ಪಿಸದೆ ರೈತರು ಸಂಕಷ್ಟದಲ್ಲಿದ್ದಾರೆ ಆದ್ದರಿಂದ ಇಲಾಖೆ ಎಚ್ಚೆತ್ತುಕೊಂಡು ಕಾಡಂಚಿನ ಗ್ರಾಮಗಳಲ್ಲಿ ರೈತರು ಹಾಗೂ ಸಾರ್ವಜನಿಕರ ಹಿತಕಾಯಲು ಸಂಶಯ ಇರುವಂತಹ ಸ್ಥಳಗಳಲ್ಲಿ ಬೋನನ್ನು ಇಟ್ಟು ಅದರ ಚಹರೆ ಗುರುತಿಸಿ ರೈತರಿಗೆ ಧೈರ್ಯ ತುಂಬುವ ಕೆಲಸ ಮಾಡಬೇಕು ಕಾಡು ಪ್ರಾಣಿಗಳ ಹಾವಳಿಗೆ ಕ್ರಮ ಕೈಗೊಳ್ಳಬೇಕು ಎಂದರು ಹಾಗೂ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ನಮ್ಮ ಸಂಘಟನೆಯಿಂದ ಪ್ರತಿಭಟನೆ ಹೋರಾಟ ಹಮ್ಮಿಕೊಳ್ಳಲಾಗುತ್ತದೆಎಂದರು

ಜಿಲ್ಲಾ ಗೌರವಾಧ್ಯಕ್ಷೆ ಎಸ್ ಪುಟ್ಟಮ್ಮ ಮಾತನಾಡಿದರು ನಂತರ ಮನವಿ ಪತ್ರ ಸ್ವೀಕರಿಸಿ ಮಾತನಾಡಿದ ಡಿ ಆರ್ ಎಫ್ ಓ ಶಿವಕುಮಾರ್ ಕಾಡಂಚನ ಗ್ರಾಮಗಳಲ್ಲಿ ರೈತರು ಮತ್ತು ಸಾರ್ವಜನಿಕರ ಹಿತಕಾಯಲು ಹಾಗೂ ರೈತರಿಗೆ ಧೈರ್ಯ ತುಂಬ ಕೆಲಸ ಮಾಡುತ್ತೇವೆ ಎಂದು ಭರವಸೆ ನೀಡಿದರು

ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗರಾಜ್ ಲಕ್ಕೂರು ಜಿಲ್ಲಾ ಕಾರ್ಯಾಧ್ಯಕ್ಷ. ಬೆಳವಾಡಿ ರಾಜಪ್ಪ ಮಹಿಳಾ ಘಟಕ ರೇಖಾ ಭಾಸ್ಕರ್ ಸವಿತಾ. ಜಿಲ್ಲಾ ಕಾರ್ಯಾಧ್ಯಕ್ಷ ಮಂಜುನಾಥ ಬೊಮ್ಮನಹಳ್ಳಿ ಪತ್ರಿಕಾ ವರದಿಗಾರರು ಸದಾನಂದ ಕಣ್ಣೇಗಾಲ ಟೌನ್ ಉಪಾಧ್ಯಕ್ಷ ಅಜಿತ್ ಕುಮಾರ್. ಗುರುಪ್ರಸಾದ್ ಸಿದ್ಧರಾಜು ಸಂಘಟನಾ ಕಾರ್ಯದರ್ಶಿ ಮಹದೇವಪ್ಪ ಶಿಂಡನಪುರ. ಮಿಮಿಕ್ರಿ ರಾಜು ಗುಂಡ್ಲುಪೇಟೆ ಮಂಜು ಹಾಗೂ ಪದಾಧಿಕಾರಿಗಳು ಹಾಜರಿದ್ದರು



ಮೊದಲ ಪುಟದಿಂದ

## ರೈಲ್ವೆ ಕಾರಿಡಾರ್ ಘೋಷಿಸಿ

ಹೈಸ್ಪೀಡ್ ರೈಲು ಕಾರಿಡಾರ್ ಅಗತ್ಯವಾಗಿತ್ತು. ಇದಕ್ಕಾಗಿ ಕರ್ನಾಟಕ–ಮಹಾರಾಷ್ಟ್ರ ಸಂಸದರು ಪಕ್ಷಾತೀತವಾಗಿ ಧ್ವನಿ ಎತ್ತಬೇಕು ಎಂದು ಒತ್ತಾಯಿಸಿದರು. ಈ ಕಾರಿಡಾರ್ ಆಗಿದ್ದರೇ ಎರಡು ನಗರಗಳ ನಡುವೆ ಸಂಪರ್ಕ ಸಾಧ್ಯವಾಗುತ್ತಿತ್ತು. ಇದರಿಂದ ಮಧ್ಯ ಕರ್ನಾಟಕ, ಉತ್ತರ ಕರ್ನಾಟಕ ಹಾಗೂ ದಕ್ಷಿಣ ಮಹಾರಾಷ್ಟ್ರಕ್ಕೂ ಹೆಚ್ಚು ಅನುಕೂಲವಾಗುತ್ತಿತ್ತು ಎಂದು ಹೇಳಿದರು. ಅತೀ ಹೆಚ್ಚು ತೆರಿಗೆ ಕೊಟ್ಟು ದೇಶವನ್ನು ನಡಿಸುತ್ತಿರುವ ರಾಜ್ಯಕ್ಕೆ ನ್ಯಾಯಸಮ್ಮತ ಹಂಚಿಕೆ ಇಲ್ಲ, ಅಗತ್ಯ ಯೋಜನೆಗಳಿಗೆ ಅನುದಾನ ಇಲ್ಲ. ಇದು ಕೇವಲ ಬಜೆಟ್ ವೈಫಲ್ಯವಲ್ಲ. ಒಕ್ಕೂಟ ವ್ಯವಸ್ಥೆಯ ಆತ್ಮಕ್ಕೇ ಹೊಡೆತ ಎಂದು ಆರೋಪಿಸಿದರು.

## ಬೆಳಗ್ಗೆ ಅಲ್ಲಿ, ರಾತ್ರಿ ಇಲ್ಲಿ! ಡಿಕೆಶಿಗೇ ಗೊಂದಲ: ಅಶೋಕ್

ಡಿಕೆಶಿ ಕಡೆ 56 ಶಾಸಕರು ಇದ್ದಾರೆ ಅಂತ. ಆದರೆ ಸಂತೋಷ್ ಲಾಡ್ ಅಂಥವರು ಬೆಳಗ್ಗೆ ಅಲ್ಲಿ ರಾತ್ರಿ ಇಲ್ಲಿ ಇರ್ತಾರೆ. ಅದಕ್ಕೆ ಡಿಕೆಶಿಗೆ ಲಾಡ್ ಅಂಥವರನ್ನ ನೋಡಿ ಯಾರು ಯಾರ ಕಡೆ ಇದ್ದಾರೆ ಅಂತ ಗೊಂದಲ ಆಗಿದೆಯಂತೆ ಎಂದು ಅಶೋಕ್ ಅವರು, ಸಂತೋಷ್ ಲಾಡ್ ಲೇವಡಿ ಮಾಡಿದರು. ಅಶೋಕ್ ಮಾತಿಗೆ ಸಿಡಿದ ಲಾಡ್, ನಿಮ್ಮ ಮೇಲೆ ನಮಗೆ ಗೌರವ ಇದೆ. ಈಥರ ಮಾತಾಡಬೇಡಿ ಅಂತ ಲಾಡ್ ಕಿಡಿಕಾರಿದರು.

ಕರ್ನಾಟಕ ಸರ್ಕಾರ
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,
ಪಂ.ರಾ.ಇಂ. ವಿಭಾಗ, ಕೆ.ಆರ್.ನಗರ
ಸಂ. ಕಾಇಂ/ಪಂರಾಇಂವಿ/ಕೃರಾನ/ಎ.ಇ/ಟೆಂಡರ್/2025–26 ದಿ: 29.01.2026

ಇ–ಪ್ರೊಕ್ಯೂರ್‌ಮೆಂಟ್ ರೀತ್ಯಾ ಅಲ್ಪಾವಧಿ ಟೆಂಡರ್ ಪ್ರಕಟಣೆ – ಸಂಖ್ಯೆ 16/2025–26 ದಿನಾಂಕ: 29.01.2026

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು K.W –1 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ನಿಯಮಾನುಸಾರ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು G.O. No. FD 9 PCL 2004 Dt. 06-08-2005 ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಲೋಕೋಪಯೋಗಿ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಕೆ.ಆರ್.ನಗರ ರವರ ಪರವಾಗಿ ಈ ಕೆಳಗೆ ನಮೂದಿಸಿರುವ ವಿವಿಧ ಲೆಕ್ಕಶೀರ್ಷಿಕೆಯ ಯೋಜನೆಯಡಿ ಕಾಮಗಾರಿಯನ್ನು ಕೈಗೊಳ್ಳಲು https://kppp.karnataka.gov.in ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. 1) ಕೆ.ಪಿ.ಪಿ.ಪಿ ಪೋರ್ಟಲ್ ನಲ್ಲಿ ಷೆಡ್ಯೂಲ್–ಬಿ ಅಪ್ ಲೋಡ್ (Upload) ಮಾಡುವ ಅಂದಾಜು ದಿ: 30.01.2026ರ ಬೆಳಿಗ್ಗೆ 10.30 ಗಂಟೆಯಿಂದ. 2) ಕೆ.ಪಿ.ಪಿ.ಪಿ ಪೋರ್ಟಲ್ ನಲ್ಲಿ ಷೆಡ್ಯೂಲ್–ಬಿ ನಲ್ಲಿ ದರ ನಮೂದಿಸುವ ಕೊನೆಯ ದಿ: 06.02.2026 ರ ಸಂಜೆ 5.00 ಗಂಟೆಯವರೆಗೆ. 3) ತಾಂತ್ರಿಕ ಬಿಡ್(ಕೆಡಬ್ಲ್ಯೂ–1,2) ತೆರೆಯುವ ದಿ: 07.02.2026 ರ ಸಂಜೆ 12.00 ಗಂಟೆಯಿಂದ. 4) ಆರ್ಥಿಕ ಬಿಡ್(ಕೆಡಬ್ಲ್ಯೂ–1,2) ತೆರೆಯುವ ದಿನಾಂಕ ತಾಂತ್ರಿಕವಾಗಿ ಅರ್ಹತೆಗೊಂಡ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು

ಕಾಮಗಾರಿಗಳ ವಿವರ

| ತಾಲ್ಲೂಕು | ಸರಗೂರು | ಒಟ್ಟು |
|---|---|---|
| ಒಟ್ಟು ಕಾಮಗಾರಿಗಳ ಸಂಖ್ಯೆ | 01 | 01 |
| ಸಾಮಾನ್ಯ | 01 | 01 |

ಆನ್ ಲೈನ್ ನಲ್ಲಿ ಮಾತ್ರ ನಿರ್ವಹಿಸಲಾಗುವುದು, ವಿವರಗಳಿಗೆ https://kppp.karnataka.gov.in ನಲ್ಲಿ ಸಂಪರ್ಕಿಸಬಹುದಾಗಿದೆ ಹಾಗೂ ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ. ದೂರವಾಣಿ ಸಂಖ್ಯೆ 08223–262228.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ತಾಂತ್ರಿಕ ವಿಭಾಗ, ಕೆ.ಆರ್.ನಗರ

DIPR/DDMYS/1588/KSMCA/900/2025-26

# ಸುರಂಗ ಮಾರ್ಗದಿಂದ ಅಕ್ರಮ ಹೆಚ್ಚು



ಗುಂಡ್ಲುಪೇಟೆ: ಕೇರಳ ಹಾಗೂ ಕರ್ನಾಟಕ ನಡುವೆ ಹಾದು ಹೋಗಿರುವ ಬಂಡೀಪುರ ಅಭಯಾರಣ್ಯದೊಳಗೆ ರಾತ್ರಿ ಹೊತ್ತು ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡುವ ಉದ್ದೇಶದಿಂದ ಪರ್ಯಾಯ ಸುರಂಗ ಮಾರ್ಗ ಮಾಡುವಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮುಂದಾಗಿದ್ದು ಇದರಿಂದ ಪ್ರಾಕೃತಿಕ ವಿಕೋಪ ಹಾಗೂ ಅಕ್ರಮ ದಂದೆಗಳು ಕಳ್ಳ ಖದೀಮರು ಮತ್ತಷ್ಟು ಹೆಚ್ಚಾಗುವುದಲ್ಲದೇ ಈಗಾಗಲೇ ಗಾಂಜಾ ಜಾನುವಾರು ಪಡಿತರ ಅಕ್ಕಿ ಕಲ್ಲು ಮಣ್ಣು ಎಂ ಸ್ಯಾಂಡ್ ಎಗ್ಗಿಲ್ಲದೆ ಹೊರ ರಾಜ್ಯಕ್ಕೆ ಹೋಗುತ್ತಿದೆ ಇನ್ನೂ ಈ ರೀತಿಯಲ್ಲಿ ಸುರಂಗ ಮಾರ್ಗವೇನಾದರೂ ಆದರೆ ತಾಲ್ಲೂಕು ಮತ್ತು ತಾಲೂಕಿನ ಜನರ ಪರಿಸ್ಥಿತಿ ಹದಗೆಟ್ಟು ಬೇರೆ ರಾಜ್ಯದವರ ಹಾವಳಿಯ ಜೊತೆಗೆ ಜನರ ಬದುಕು ಹದಗೆಡುತ್ತದೆ ಯಾವುದೇ ಕಾರಣಕ್ಕೂ ರಾಜಕೀಯ ದೊಂಬರಾಟಕ್ಕೆ ಮಣಿದು ಸುರಂಗ ಮಾರ್ಗ ಕೈಗೊಳ್ಳಬಾರದೆಂದು ನಂತರ ನಮ್ಮ ಜಯ ಕರ್ನಾಟಕ ರಕ್ಷಣಾ ಸೇನೆ ವತಿಯಿಂದ ಶಿರಸ್ತೇದಾರ್ ವಿನೋದ್‌ಗೆ ಮನವಿ ಸಲ್ಲಿಸಲಾಯಿತು

ಮುಂದಿನ ದಿನಗಳಲ್ಲಿ ಪಕ್ಷಾತೀತವಾಗಿ ನಮ್ಮ ಸಂಘಟನೆ ವತಿಯಿಂದ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು ಜಿಲ್ಲಾ ಗೌರವಾಧ್ಯಕ್ಷ ಎಸ್ ಪುಟ್ಟಮ್ಮ ಜಿಲ್ಲಾ ಅಧ್ಯಕ್ಷ ಈಶ್ವರ್ ಎಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗರಾಜ್ ಲಕ್ಕೂರು ಜಿಲ್ಲಾ ಕಾರ್ಯಾಧ್ಯಕ್ಷ ಬೆಳವಾಡಿ ರಾಜಪ್ಪ ಮಹಿಳಾ ಘಟಕ ರೇಖಾ ಭಾಸ್ಕರ ಸವಿತಾ ಜಿಲ್ಲಾ ಕಾರ್ಯಾಧ್ಯಕ್ಷ ಮಂಜುನಾಥ ಬೊಮ್ಮನಹಳ್ಳಿ ಪತ್ರಿಕಾ ವರದಿಗಾರ ಸದಾನಂದ ಕಣ್ಣೇಗಾಲ ಟೌನ್ ಉಪಾಧ್ಯಕ್ಷ ಅಜಿತ್ ಕುಮಾರ್ ಗುರುಪ್ರಸಾದ್ ಸಿದ್ಧರಾಜು ಸಂಘಟನಾ ಕಾರ್ಯದರ್ಶಿ ಮಹದೇವಪ್ಪ ಶಿಂಡನಪುರ ಮಿಮಿಕ್ರಿ ರಾಜು. ಗುಂಡ್ಲುಪೇಟೆ. ಮಂಜು ಹಾಗೂ ಪದಾಧಿಕಾರಿಗಳು ಹಾಜರಿದ್ದರು

# 100ಪುಟಗಳ ದೋಷಾರೋಪಣೆ ಪಟ್ಟಿ ಸಲ್ಲಿಸಿದ ಪೊಲೀಸರು

## ಫೇಕ್ ಆಡಿಯೋ ಹಾಕಿದ್ದ ಆರೋಪಿ ಕೆ.ಎಸ್.ಮೋಹನ್‌ಕುಮಾರ್



ಕೆ.ಆರ್.ಪೇಟೆ, ತಾಲ್ಲೂಕಿನ ಹಿರಿಯ ನ್ಯಾಯವಾದಿ ವಿ.ಎಸ್.ಧನಂಜಯಕುಮಾರ್ ಅವರನ್ನು ರಾಜಕೀಯವಾಗಿ ಹಿನ್ನಡೆ ಉಂಟು ಮಾಡಬೇಕು ಎಂಬ ದುರುದ್ದೇಶದಿಂದ ಭಾವಚಿತ್ರಕ್ಕೆ ಫೇಕ್ ಆಡಿಯೋ ಧ್ವನಿಯೊಂದಿಗೆ ಎಡಿಟ್ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡಿದ್ದ ಕೆ.ಆರ್.ಪೇಟೆಯ ಕೆ.ಎಸ್.ಮೋಹನ್‌ಕುಮಾರ್ ಎಂಬುವವರ ವಿರುದ್ದ ಮಂಡ್ಯ ಇಲ್ಲಾ ಸೈಬರ್ ಕ್ರೈಮ್ ಪೊಲೀಸರು 100ಪುಟಗಳ ಸಾಕ್ಷಾದಾರಗಳೊಂದಿಗೆ ದೋಷಾರೋಪಣೆ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು 5ಕೋಟಿ ರೂಪಾಯಿಗಳ ಮಾನನಷ್ಟ ಮೊಕದ್ದಮೆ ದಾಖಲಿಸಲಾಗಿದೆ. ಇದರಲ್ಲಿ ನ್ಯಾಯ ಸಿಗುವ ವಿಶ್ವಾಸವಿದೆ ಎಂದು ವಕೀಲರಾದ ವಿ.ಎಸ್.ಧನಂಜಯಕುಮಾರ್ ಹೇಳಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾ ಡಿದ ನ್ಯಾಯವಾದಿ ವಿ.ಎಸ್.ಧನಂಜಯಕುಮಾರ್ ಅವರು ರಾಜಕೀಯ ದ್ವೇಷದ ಹಿನ್ನೆಲೆಯಲ್ಲಿ ಫೇಕ್ ಆಡಿಯೋವನ್ನು ಸಾಮಾಜಿಕ ಜಾಲತಾಣ ಅಪ್‌ಲೋಡ್ ಮಾಡುವ ಮೂಲಕ ನನ್ನನ್ನು ರಾಜಕೀಯವಾಗಿ ತುಳಿಯಬೇ ಕೆಂಬ ದುರುದ್ದೇಶ ದಿಂದ ಪಿತೂರಿ ನಡೆಸಿ ನನ್ನ ವಿರುದ್ದ ಸುಳ್ಳು ಮಾಹಿತಿಯನ್ನು ಹಾಕಿಸಿರುತ್ತಾರೆ. ಎಂದು ತಿಳಿಸಿದ್ದಾರೆ. ವಕೀಲರಾದ ಗಂಜಿಗೆರೆ ಜಿ. ಜೆ. ಲೋಕೇಶ್, ತಾಲ್ಲೂಕು ಯುವ ಜೆಡಿಎಸ್ ಅಧ್ಯಕ್ಷ ಮಹಾದೇವೇಗೌಡ, ವೀರಶೈವ ಮಹಾಸಭಾ ಮುಖಂಡರಾದ ಸೋಮನಾಥಪುರ ಮಹಾದೇಶ್, ಡಿ.ಸಿ.ಕುಮಾರ್, ಶಿವಪ್ಪ, ಮುಖಂಡರಾದ ಚಟ್ಟೇನಹಳ್ಳಿ ನಾಗರಾಜು, ಮತ್ತೇಕೆರೆ ಎಂ.ಲಕ್ಕೇಗೌಡ, ಉಪಸ್ಥಿತರಿದ್ದರು.

ಪುರಸಭಾ ಕಾರ್ಯಾಲಯ, ಗುಂಡ್ಲುಪೇಟೆ
ಚಾಮರಾಜನಗರ ಜಿಲ್ಲೆ–571111

Phone No: 08229-222226 Website: www.gundlupettown.mrc..gov.in
Help line No: 08229-223377 E-mail: itstaff_ulb_gundlupet@yahoo.com

ಪು.ಗು/ಕಿ.ಅ/15ನೇ ಹ.ಕಾಯೋ(2021–22–2025–26)ಪಿ.ಆರ್/02/2025–26 ದಿನಾಂಕ: 30.01.2026

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು ಹಾಗೂ ಇತ್ತೀಚಿನತಿದ್ದುಪಡಿ ನಿಬಂಧನೆಗೆ ಒಳಪಟ್ಟಂತೆ ಅಧಿಕೃತ ಸಿವಿಲ್/ವಿದ್ಯುತ್ ಗುತ್ತಿಗೆದಾರರಿಂದ ಗುಂಡ್ಲುಪೇಟೆ ಪುರಸಭೆ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಿದ ಹಣಕಾಸು ಯೋಜನೆಯ ಲೆಕ್ಕ ಶೀರ್ಷಿಕೆಯಡಿಯಲ್ಲಿ ಬರುವ ಕಾಮಗಾರಿಗಳಿಗೆ ಕರ್ನಾಟಕ ಪಾರದರ್ಶಕ ಅಧಿನಿಯಮದ ಪ್ರಕಾರದ ಇ–ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸಲು ಅಸಕ್ತಿವುಳ್ಳ ಗುತ್ತಿಗೆದಾರರು, https://kpp.karnataka.gov.in ನಲ್ಲಿ ಮಾಹಿತಿ ಪಡೆಯುವುದು.

ಶ್ರೀ ಸರವಣ.ಎಸ್, ಮುಖ್ಯಾಧಿಕಾರಿಗಳು,
ಪುರಸಭೆ, ಗುಂಡ್ಲುಪೇಟೆ, ದೂರವಾಣಿ ಸಂಖ್ಯೆ: 08229–222226, 08229–223377

| ಕ್ರ. ಸಂ. | ಕಾಮಗಾರಿ ವಿವರ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಇ.ಎಂ.ಡಿ ಮೊತ್ತ (ರೂ. ಗಳಲ್ಲಿ) | ಗುತ್ತಿಗೆದಾರರ ದರ್ಜೆ/ ಮೀಸಲಾತಿ |
|---|---|---|---|---|
| 2021–22ನೇ ಮತ್ತು 2025–26ನೇ ಸಾಲಿನ 15ನೇ ಹ.ಕಾ ಯೋಜನೆಯ ಅನುದಾನ | | | | |
| 1 | DMA/2024-25/OW/WORK_ INDENT35807/CALL-3 | 36.67 | 91675.00 | 3ನೇ ದರ್ಜೆ ಹಾಗೂ ಮೇಲ್ಪಟ್ಟು |
| 2 | DMA/2025-26/RD/WORK_ INDENT45254/CALL-2 (SC) | 47.10 | 70650.00 | 3ನೇ ದರ್ಜೆ ಹಾಗೂ ಮೇಲ್ಪಟ್ಟು (ಎಸ್.ಸಿ) |

ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 09.02.2026 ರ ಸಂಜೆ 5.30ಗಂಟೆವರೆಗೆ. ಟೆಂಡರ್‌ತೆರೆಯುವ ದಿನಾಂಕ: 10.02.2026 ರ ಬೆಳಿಗ್ಗೆ 11.30ಗಂಟೆಗೆ.

ಸಹಿ/– ಮುಖ್ಯಾಧಿಕಾರಿ, ಪುರಸಭೆ ಗುಂಡ್ಲುಪೇಟೆ

ಸಂ:ವಾಸಾಸಂಇ:ಚಾನಗರ:672:2025–26

# ಸೂರ್ಯಕಾಂತಿ ಮಾರಾಟ; ಕೈಸೇರದ ಹಣ

ಗುಂಡ್ಲುಪೇಟೆ : ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಸೂರ್ಯಕಾಂತಿ ಮಾರಾಟ ಮಾಡಿ ತಿಂಗಳುಗಳೇ ಕಳೆದರೂ ಹಣ ಕೈ ಸೇರದ ಹಿನ್ನೆಲೆ ಕಚೇರಿಗೆ ಅಲೆದು ಸುಸ್ತಾದ ರೈತರೊಬ್ಬರು ಗುಂಡ್ಲುಪೇಟೆ ಎಪಿಎಂಸಿ ಕಚೇರಿ ಮುಂಭಾಗ ಧರಣಿ ನಡೆಸುತ್ತಿದ್ದಾರೆ.



ರೈತಾಪಿ ವರ್ಗಕ್ಕೆ ಅನುಕೂಲವಾಗಬೇಕಿದ್ದ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಬೆಂಬಲ ಬೆಲೆ ಯೋಜನೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ಹಳ್ಳ ಹಿಡಿಯುತ್ತಿದಿಯೇ ಎಂಬ ಅನುಮಾನ ವ್ಯಕ್ತವಾಗುತ್ತಿದೆ. ತಾಲೂಕಿನ ಹಕ್ಕಲಪುರ ಗ್ರಾಮದ ರೈತ ಸಿದ್ದಪ್ಪ ಎಂಬವರು ನವೆಂಬರ್‌ನಲ್ಲಿಯೇ ಒಂಬತ್ತೂವರೆ ಕ್ವಿಂಟಾಲ್ ಸೂರ್ಯಕಾಂತಿಯನ್ನ ಗುಂಡ್ಲುಪೇಟೆ ಎಪಿಎಂಸಿ ಖರೀದಿ ಕೇಂದ್ರದಲ್ಲಿ ಮಾರಾಟ ಮಾಡಿದ್ದರು , ಪ್ರತಿ ಕ್ವಿಂಟಾಲ್ಗೆ 7721 ರಂತೆ ಖರೀದಿ ಮಾಡಿದ್ದ ಅಧಿಕಾರಿಗಳು ಹಣ ನೀಡದೆ ಸತಾಯಿಸುತ್ತಿದ್ದರಿಂದ ಬೇಸತ್ತ ರೈತ ಪ್ರತಿಭಟನೆ ಹಾದಿ ಹಿಡಿದಿದ್ದಾನೆ. ನನಗೆ 73349 ರೂ ಹಣ ಬರಬೇಕು ಆದ್ರೆ ಅಧಿಕಾರಿಗಳಾಗಲಿ ಎಪಿಎಂಸಿ ಅಧ್ಯಕ್ಷರಾಗಲಿ ಸ್ಪಂದನೆ ನೀಡುತ್ತಿಲ್ಲ , ಸೂರ್ಯಕಾಂತಿ ಖರೀದಿಸಿ ಮೂರು ತಿಂಗಳುಗಳೇ ಗತಿಸಿವೆ ಆದ್ರೆ ನಮ್ಮ ಹಣವನ್ನ ನೀಡಲು ಮೀನಾಮೇಷ ಎಣಿಸಲಾಗುತ್ತಿದೆ ಎಂದು ರೈತ ಆರೋಪಿಸಿದ್ದಾರೆ. ಕಷ್ಟಪಟ್ಟು ಬೇಸಾಯ ಮಾಡಿ ಬೆಳೆದ ಬೆಳೆಗೆ ಬೆಂಬಲ ಬೆಲೆ ಸಿಗುತ್ತೆ ಅಂತ ಮಾರುಕಟ್ಟೆಯಲ್ಲಿನ ಖರೀದಿ ಕೇಂದ್ರಕ್ಕೆ ತಂದ್ರೆ ಈ ರೀತಿಯಾಗಿ ಸತಾಯಿಸುತ್ತಾರೆ, ಆತ್ಮಹತ್ಯೆ ಹಾದಿ ಹಿಡಿಯಬೇಕಾಗುತ್ತೆ ಅಂತ ಆಕ್ರೋಶ ಹೊರಹಾಕಿದ್ದಾರೆ.

# ಅರಣ್ಯ ಬೆಂಕಿ ತಡೆಗಟ್ಟುವ ಪ್ರಾತ್ಯಕ್ಷಿಕೆ




ಹನೂರು ಅಗ್ನಿಶಾಮಕ ಠಾಣೆ ಅಧಿ ಕಾರಿ ಮತ್ತು ಸಿಬ್ಬಂದಿಯವರಿಂದ ಅರಣ್ಯ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಯವರಿಗೆ ರಾಮಾಪುರ ವಲಯ ಖಚೇರಿ ಆವರಣದಲ್ಲಿ ಅರಣ್ಯ ಬೆಂಕಿಯನ್ನು ತಡೆಗಟ್ಟುವುದು ಮುಂಜಾಗ್ರತ ಕ್ರಮಗಳನ್ನು ಅನುಸರಿಸುವುದು ಇದರ ಬಗ್ಗೆ ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆಯನ್ನು ನೀಡಲಾಯಿತು. ಇ ಈ ವೇಳೆ ಅಗ್ನಿಶಾಮಕ ಇಲಾಖೆಯ ಠಾಣಾಧಿಕಾರಿ ಮಹೇಶ್. ಸಿಬ್ಬಂದಿಯವರಾದ ಕಂದಸ್ವಾಮಿ ಲಿಂಗೇಶ್ ಹರ್ಷ ನಾಗಪ್ಪ. ಮತ್ತು ಅರಣ್ಯ ಇಲಾಖೆಯ ಅಧಿಕಾರಿಗಳಾದ ಡಿಸಿಎಫ್ ಭಾಸ್ಕರ್ ಎಸಿಎಫ್ ವಿರಾಜ್ ಎಸ್ ಹೊಸೂರು ಮತ್ತು ವಲಯ ಅರಣ್ಯಾಧಿಕಾರಿಗಳು ಹಾಜರಿದ್ದರು.

# ನಿವೇಶನ ರಹಿತರಿಗೆ ನಿವೇಶನ ಕೊಡಿಸಿ : ಶಾಸಕ ರವಿಕುಮಾರ್

## ಇದು ಸರ್ಕಾರ, ಗ್ರಾಮ ಪಂಚಾಯಿತಿ ಶಾಸಕರ ಜವಾಬ್ದಾರಿ





**ಮಂಡ್ಯ** : ದೇಶದ ಜನರು ನಿವೇಶನ ಇಲ್ಲದೆ ಇರಬಾರದು ಎಲ್ಲರೂ ನಿವೇಶನ ಹೊಂದಿರಬೇಕು ಎನ್ನುವುದು ಈ ದೇಶದ ಕಾನೂನು, ನಿವೇಶನ ರಹಿತರಿಗೆ ನಿವೇಶನ ಕೊಡಿಸುವುದು ಸರ್ಕಾರ, ಸ್ಥಳೀಯ ಗ್ರಾಮ ಪಂಚಾಯಿತಿ ಮತ್ತು ಶಾಸಕನ ಕರ್ತವ್ಯವಾಗಿದೆ ಎಂದು ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕ ರವಿಕುಮಾರ್ ಅವರು ಹೇಳಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ , ಹಲ್ಲೆಗೆರೆ ಗ್ರಾಮ ಪಂಚಾಯಿತಿ ಕಾರ್ಯಾಲಯದ ವತಿಯಿಂದ ಬಸರಾಳು ಹೋಬಳಿಯ ತಂಗಳಗೆರೆಯಲ್ಲಿ ನಡೆದ ರವಿ ಗೂಡು – ಪಿ ರವಿ ಕುಮಾರ್ ಗೌಡ ಆಶ್ರಯ ಬಡಾವಣೆ ನಿರ್ಮಾಣ ಶಿಲಾನ್ಯಾಸ ಕಾರ್ಯಕ್ರಮ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ನಿವೇಶನ ರೈತರಿಗೆ ವಸತಿ ನಿವೇಶನ ನೀಡುವುದು ನಮ್ಮ ಸರ್ಕಾರದ ಧ್ಯೇಯವಾಗಿದೆ ಅದರ ಅಂಗವಾಗಿ ಅರ್ಹರಿಗೆ ನಿವೇಶನ ನೀಡಲು ಇಂದು ಶಿಲಾನ್ಯಾಸ ಮಾಡಲಾಗಿದೆ ಎಂದು ಹೇಳಿದರು.

ಸರ್ಕಾರಿ ಜಾಗ ಕೇವಲ ಒಬ್ಬರದಲ್ಲ ಅದು ಎಲ್ಲರ ಜಾಗ, ರೈತರು ತಮ್ಮ ಗದ್ದೆಗಳಲ್ಲಿ ರಸ್ತೆ 5–10 ಅಡಿ ಜಾಗ ಬಿಟ್ಟರೆ ಉತ್ತಮ ರಸ್ತೆ ಕಲ್ಪಿಸಬಹುದು. ರೈತರ ಉತ್ಪನ್ನಗಳನ್ನು ಮಾರುಕಟ್ಟೆಗೆ ಸರಾಗವಾಗಿ ಸಾಗಣೆ ಮಾಡಬಹುದು ಎಂದು ತಿಳಿಸಿದರು.

120 ನಿವೇಶನಗಳನ್ನು ಸದರಿ ಜಾಗದಲ್ಲಿ ನೀಡಲಾಗುವುದು ಈಗಾಗಲೇ 80 ಹಕ್ಕು ಪತ್ರಗಳನ್ನು ಸಿದ್ಧವಿದೆ ಬಾಕಿ ಇರುವ ನಿವೇಶನಗಳಿಗೆ ಅಗತ್ಯ ದಾಖಲೆಗಳನ್ನು ನೀಡಿ ನಂತರ ನಾನೆ ನಿಮ್ಮ ಮನೆ ಬಾಗಿಲಿಗೆ ಬಂದು ಹಕ್ಕು ಪತ್ರಗಳನ್ನು ವಿತರಿಸುತ್ತೇನೆ ಎಂದು ಹೇಳಿದರು.

ಕಳೆದ ಬಾರಿಯ ಬೂದನೂರು ಉತ್ಸವದಲ್ಲಿ ಅನೇಕರು ಹೋರಾಟ ಮಾಡಿ ಬೂದನೂರಿನಲ್ಲಿ 120 ಹಕ್ಕು ಪತ್ರಗಳನ್ನು ವಿತರಿಸಿದ್ದರು, ಈ ಬಾರಿ ಬೂದನೂರು ಉತ್ಸವದಲ್ಲಿ 50 ಹಕ್ಕು ಪತ್ರಗಳನ್ನು ನೀಡಲು ಸಿದ್ಧತೆ ಮಾಡಲಾಗಿದೆ. ಮಂಡ್ಯ ತಾಲೂಕಿನ ಅರ್ಹ ನಿವೇಶನ ರಹಿತರಿಗೆ ನಿವೇಶನ ನೀಡಲು ಕಳೆದ ಎರಡೂವರೆ ವರ್ಷದಲ್ಲಿ ಡಿ.ಸಿ , ತಹಶೀಲ್ದಾರ್, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ 10 ಕ್ಕೂ ಹೆಚ್ಚು ಸಭೆಗಳನ್ನು ನಡೆಸಲಾಗಿದೆ ಎಂದರು.

ಹುಲಿವಾನದಲ್ಲಿ 8 ಎಕ್ಕರೆ ಜಾಗವನ್ನು ಗುರುತಿಸಿ 550 ಜನರಿಗೆ ನಿವೇಶನ ನೀಡಲು ಸಿದ್ಧತೆ ನಡೆಸಲಾಗಿದೆ ಒಂದು ತಿಂಗಳಲ್ಲಿ ಸದರಿ ಕಾರ್ಯಕ್ರಮವನ್ನು ಕೈಗೊಳ್ಳಲಾಗುವುದು. ಬಸರಾಳಲ್ಲಿ 2 ಎಕ್ಕರೆ ಜಾಗವನ್ನು ಗುರುತಿಸಲಾಗಿದೆ ಬಡವರಿಗೆ 3 ತಿಂಗಳೊಳಗಾಗಿ ನಿವೇಶನ ಹಂಚಿಕೆ ಮಾಡಲಾಗುವುದು ಎಂದು ತಿಳಿಸಿದರು.

ಹಲ್ಲೆಗೆರೆಯಲ್ಲಿ ನಿವೇಶನ ಇಲ್ಲದವರಿಗೆ ತಂದಾಯಕನದೊಡ್ಡಿಯಲ್ಲಿ ಎರಡು ಎಕರೆ ಗ್ರಾಮ ಠಾಣಾ ಜಾಗವನ್ನು ಗುರುತಿಸಲಾಗಿದೆ ಜೊತೆಗೆ ಎಂಟು ಎಕರೆ ಸರ್ಕಾರಿ ಬಿಳು ಇದ್ದು ಒಟ್ಟು ಹತ್ತು ಎಕ್ಕರೆ ಜಾಗದಲ್ಲಿ ಸುಸಜ್ಜಿತ ಬಡವಾಣೆ ನಿರ್ಮಿಸಿ 500 ಕ್ಕೂ ಹೆಚ್ಚು ಅರ್ಹರಿಗೆ ನಿವೇಶನ ಕಲ್ಪಿಸಲಾಗುವುದು. ಅರ್ಹ ನಿವೇಶನ ರಹಿತರು ಪಿ.ಡಿ.ಓ ಗಳ ಬಳಿ ಅರ್ಜಿ ಸಲ್ಲಿಸಿ ಯಾವುದೇ ಒತ್ತಡಕ್ಕೂ ಮಣಿಯದೆ ಅರ್ಹರಿಗೆ ನಿವೇಶನ ಹಂಚಿಕೆ ಮಾಡಲಾಗುವುದು ಎಂದು ತಿಳಿಸಿದರು.

ಚಂದಗಾಲು ಗ್ರಾಮದಲ್ಲೂ ಏಳು ಎಕರೆ ಜಾಗ ಮತ್ತು ಗಣಿಗದಲ್ಲೂ ನಾಲ್ಕು ಎಕರೆ ಜಾಗವನ್ನು ಗುರುತಿಸಲಾಗಿದೆ ನಿವೇಶನ ಹಂಚಿಕೆ ಮಾಡಲಾಗುವುದು. ಕೆರಗೋಡಿನಲ್ಲಿ 30 ನಿವೇಶನ ಗುರುತಿಸಲಾಗಿದ್ದು ಮುಂದಿನ ವಾರದೊಳಗೆ ಹಕ್ಕು ಪತ್ರ ನೀಡಲಾಗುವುದು. ಮದ್ದುನಗಟ್ಟದಲ್ಲಿ 80 ಎಕರೆ ಸರ್ಕಾರಿ ಪ್ರದೇಶವನ್ನು ಗುರುತಿಸಲಾಗಿದ್ದು ಸದರಿ ಜಾಗವನ್ನು ಕೈಗಾರಿಕೆಗೆ ಮೀಸಲಿಡಲಾಗುವುದು. ಮಹಿಳೆಯರಿಗೆ ಯುವಕರಿಗೆ ಬಡವರಿಗೆ ಅನುಕೂಲವಾಗುವ ಕಾರ್ಖಾನೆಯನ್ನು ರಾಜ್ಯ ಸರ್ಕಾರದಿಂದ ತರಲಾಗುವುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಿ.ತ್ಯಾಗರಾಜು, ಚಿಕ್ಕಬಳ್ಳಿ ಕೃಷ್ಣ, ತಹಸೀಲ್ದಾರ್ ವಿಶ್ವನಾಥ್, ತಾಲ್ಲೂಕು ಪಂಚಾಯಿತಿ ಇಒ ಲೋಕೇಶ್‌ಮೂರ್ತಿ, ಸಿ.ಎಂ.ದ್ಯಾವಪ್ಪ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಪ್ರೇಮಮ್ಮ, ಉಪಾಧ್ಯಕ್ಷೆ ಭಾಗ್ಯಮ್ಮ, ಸದಸ್ಯರಾದ ಆರ್.ಗೀತಾ, ಕರೀಗೌಡ, ವಿನೋದ್, ಅಶೋಕ್, ವೈಶಾಲಿ, ಎಚ್.ಎಂ.ರಮೇಶ್, ಟಿ.ಲೋಕೇಶ್, ತಾಯಮ್ಮ, ರಾಮಲಿಂಗೇಗೌಡ, ಮಾಲಾಶ್ರೀ , ನಿಂಗರಾಜು, ದಯಾನಂದ್, ಸುಧಾಮಣಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ವೃತ್ತಿಗಿಂತ ಶಿಕ್ಷಣ ಮುಖ್ಯ : ಎಎಸ್ಪಿ ಗಂಗಾಧರಸ್ವಾಮಿ



**ಮಂಡ್ಯ:** ಕೆಲಸ ಯಾವುದೇ ಆದರೂ ಸರಿ ಎಲ್ಲರೂ ಶಿಕ್ಷಣ ಪಡೆಯುವುದು ಕಡ್ಡಾಯವಾಗಿರಬೇಕು ಇದರ ಮೂಲಕ ಸಮಾಜದ ಮುಖ್ಯವಾಹಿನಿಗೆ ಬರಬೇಕು ಮಡಿವಾಳ ಮಾಚಿ ದೇವರ ಸಂದೇಶವನ್ನು ತಮ್ಮ ಜೀವನದಲ್ಲಿ ಅನುಸರಿಸಬೇಕು ಎಂದು ಅಪರ ಪೊಲೀಸ್ ವರಿಷ್ಠಧಿಕಾರಿ ಗಂಗಾಧರಸ್ವಾಮಿ ಅವರು ಹೇಳಿದರು.

ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ನಡೆದ ಮಡಿವಾಳ ಮಾಚಿದೇವ ಜಯಂತಿ ಕಾರ್ಯಕ್ರಮವನ್ನು ಮಡಿವಾಳ ಮಾಚಿದೇವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ನಾವು ಸ್ಪರ್ಧಾತ್ಮಕ ಯುಗದಲ್ಲಿ ಬದುಕುತ್ತಿದ್ದೇವೆ. ಯುವ ಪೀಳಿಗೆ ಎಚ್ಚೆತ್ತು ಸ್ಪರ್ಧಾತ್ಮಕ ಜಗತ್ತಿನಲ್ಲಿ ಗೆಲ್ಲಬೇಕು. ಯುವ ಜನತೆ ಮಡಿವಾಳ ಮಾಚಿದೇವ ಅವರ ಆದರ್ಶ, ಮೌಲ್ಯಗಳನ್ನು ಪಾಲಿಸಬೇಕು ಎಂದು ಹೇಳಿದರು.

ಕನ್ನಡ ಉಪನ್ಯಾಸಕರಾದ ಸಬ್ಬನಹಳ್ಳಿ ನಾಗರಾಜು ವಿಶೇಷ ಉಪನ್ಯಾಸ ನೀಡಿ ಮಾತನಾಡಿ 12 ನೇ ಶತಮಾನದಲ್ಲಿ ಕಾಯಕವೇ ಕೈಲಾಸ ಎಂಬ ಭಾವನೆಯನ್ನು ಸಮಾಜಕ್ಕೆ ಸಾರಿದ ಕಾಲಘಟ್ಟದಲ್ಲಿ ಅನುಭವ ಮಂಟಪದಲ್ಲಿ 35 ಮಹಿಳೆಯರು ಸೇರಿದಂತೆ 250 ಶರಣರು ತಮ್ಮ ಅನುಭವವನ್ನು ಹಂಚಿಕೊಳ್ಳುತ್ತಿದ್ದರು. ರಾಜರ ಆಡಳಿತ ಕಾಲದಲ್ಲಿ ಸಮ ಸಮಾಜದ ನಿರ್ಮಾಣ ಮಾಡುವಲ್ಲಿ ಶರಣರ ಪಾತ್ರ ಅಪಾರ ಎಂದು ಮಡಿವಾಳ ಮಾಚಿದೇವರ ಕುರಿತು ಮಾಹಿತಿ ನೀಡಿದರು.

ದೇವರಾಜು ಅರಸು ಹಿಂದುಳಿದ ವರ್ಗಗಳ ವೇದಿಕೆ ಜಿಲ್ಲಾಧ್ಯಕ್ಷ ಸಂದೇಶ್ ಮಾತನಾಡಿ. ಸಮಾಜದ ಅಶುಚಿತ್ವವನ್ನು ಶುಚಿ ಗೊಳಿಸುವ ಕಾಯಕ ಮಾಡುವ ಮಡಿವಾಳ ಸಮುದಾಯದ ವರ್ಗದವರು ಶಿಕ್ಷಣವನ್ನು ಪಡೆಯುವ ಮೂಲಕ ಸಾಮಾಜಿಕವಾಗಿ. ಆರ್ಥಿಕವಾಗಿ ಸಬಲರಾಗಬೇಕು ಜೊತೆಗೆ ಮಡಿವಾಳ ಮಾಚಿದೇವರ ಆದರ್ಶವನ್ನು ಎಲ್ಲರೂ ಮೈಗೂ ಡಿಸಿಕೊಳ್ಳಬೇಕು ಎಂದರು.

ವೇದಿಕೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪ ನಿರ್ದೇಶಕ ಡಾ.ಬಿ. ವಿ. ನಂದೀಶ್. ಮುಖಂಡರಾದ ಮಡಿವಾಳ ಸಂಘದ ಜಿಲ್ಲಾಧ್ಯಕ್ಷ ಡಿ. ರಮೇಶ್. ವೆಂಕಟೇಶ್. ಕಾಂತ ರಾಜು ಚಿಕ್ಕರಳ್ಳಿ. ಸೋಮಶೇಖರ್. ಸಿದ್ದಶೆಟ್ಟಿ. ಮದ್ದೂರು ಜಯರಾಮು. ಹನುಮಂತು. ತಾ ಳ ಶಾಸನ ಮೋಹನ್.ರವಿ. ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಚನ್ನಗೆರೆ ಗ್ರಾಮದ ಅಭಿವೃದ್ಧಿಗೆ ಒಂದು ಕೋಟಿ ರೂಗಳಿಗೂ ಹೆಚ್ಚಿನ ಅನುದಾನ



ಕೆ.ಆರ್.ನಗರ: ಚನ್ನಗೆರೆ ಗ್ರಾಮದ ಅಭಿವೃದ್ಧಿಗೆ ಒಂದು ಕೋಟಿ ರೂಗಳಿಗೂ ಹೆಚ್ಚಿನ ಅನುದಾನವನ್ನು ನೀಡಲಾಗಿದೆ ಎಂದು ಶಾಸಕ ಡಿ.ರವಿಶಂಕರ್ ಹೇಳಿದರು. ಅವರು ತಾಲೂಕಿನ ಚನ್ನಂಗೆರೆ ಗ್ರಾಮ ಪಂಚಾಯಿತಿಯ ನೂತನ ಕಟ್ಟಡ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದರು.

ಗ್ರಾಮದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಗ್ರಾಮ ಪಂಚಾಯಿತಿಯ ಕಟ್ಟಡ ನಿರ್ಮಾಣ ಕಾಮಗಾರಿಗೆ 20 ಲಕ್ಷ ರೂ ಅನುದಾನವನ್ನು ನೀಡಲಾಗುವುದು.

ಗ್ರಾಮದಲ್ಲಿ ಅಂಬೇಡ್ಕರ್ ಭವನ ಸೇರಿದಂತೆ ವಿವಿಧ ಸಮುದಾಯ ಭವನಗಳ ನಿರ್ಮಾಣ ಕಾರ್ಯವನ್ನು ಮಾಡುವುದರ ಜೊತೆಗೆ ಗ್ರಾಮದಲ್ಲಿರುವ ವಿವಿಧ ದೇವಾಲಯಗಳ ಅಭಿವೃದ್ಧಿಗೆ ಅಗತ್ಯವಿರುವ ಅನುದಾನವನ್ನು ನೀಡುವುದರ ಮೂಲಕ ಅವುಗಳ ಸಮಗ್ರ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದರು.

ಮುಂದಿನ ದಿನಗಳಲ್ಲಿ ತಾಲೂಕು ಮಟ್ಟದ ಎಲ್ಲಾ ಅಧಿಕಾರಿಗಳೊಂದಿಗೆ ಗ್ರಾಮಕ್ಕೆ ಆಗಮಿಸಿ ಜನಸ್ಪಂದನ ಸಭೆಯನ್ನು ನಡೆಸಿ ಜನಸಾಮಾನ್ಯರ ಅಹವಾಲುಗಳನ್ನು ಆಲಿಸಿ ಸಾರ್ವಜನಿಕರ ಸಮಸ್ಯೆಗಳನ್ನು ಪರಿಹರಿಸುವ ಕೆಲಸವನ್ನು ಮಾಡಲಾಗುವುದು. ಜೊತೆಗೆ ಹಂತ ಹಂತವಾಗಿ ಗ್ರಾಮದ ಸಮಗ್ರ ಅಭಿವೃದ್ಧಿಗೆ ಶ್ರಮಿಸುವ ಮೂಲಕ ಈ ಭಾಗದ ಜನರ ಋಣವನ್ನು ತೀರಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಹಾಡ್ಯ ಮಹದೇವಸ್ವಾಮಿ, ಇಓ ರವಿಕುಮಾರ್, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಉದಯ ಶಂಕರ್, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸುನಿತಾ ದಿನೇಶ್, ಉಪಾಧ್ಯಕ್ಷ ಕೃಷ್ಣಪ್ಪ, ಸದಸ್ಯರಾದ ಅನಿತಾ ಕಾಂತರಾಜು, ಧನಲಕ್ಷ್ಮಿ ಶಿವರಾಜು, ಚೈತ್ರರಘು, ರತ್ನಮಣಿ, ರಾಜೇಶ್ವರಿಲೋಕೇಶ್, ಪಿಡಿಓ ಸ್ವಾಮಿನಾಯಕ, ಕಾರ್ಯದರ್ಶಿ ಕೆ.ಟಿ.ಪ್ರಕಾಶ್, ಮಾಜಿ ಅಧ್ಯಕ್ಷ ಹರೀಶ್, ಮುಖಂಡರುಗಳಾದ ಕಾಂತರಾಜು, ಎಂ.ರಂಗಸ್ವಾಮಿ, ಮಲ್ಲಿಕಾರ್ಜುನ, ಶಂಕರನಾಯಕ, ಅಸ್ಲಮ್, ಶಂಕರಣ್ಣ, ಪ್ರಕಾಶ್, ಬೋರೇಗೌಡ, ರಾಜು, ಪ್ರಭು ಸೇರಿದಂತೆ ಹಲವರು ಇದ್ದರು.

# ತಾಲೂಕು ವಾಲ್ಮೀಕಿ ಭವನ ನಿರ್ಮಾಣಕ್ಕೆ ನಿವೇಶನ ಕೊಡಿಸುವಂತೆ ಸಿಎಂಗೆ ಪದಾಧಿಕಾರಿಗಳು ಮನವಿ



**ಕೆ.ಆರ್ .ನಗರ :** ಸಾಲಿಗ್ರಾಮ ತಾಲೂಕು ವಾಲ್ಮೀಕಿ ನಾಯಕರ ಸಂಘದ ಪದಾಧಿಕಾರಿಗಳು ಬೆಂಗಳೂರಿನ ವಿಧಾನಸೌಧದಲ್ಲಿ ಮುಖ್ಯಮಂತ್ರಿಯ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ತಾಲೂಕು ವಾಲ್ಮೀಕಿ ಭವನ ನಿರ್ಮಾಣಕ್ಕೆ ನಿವೇಶನ ಕೊಡಿಸುವಂತೆ ಮನವಿ ಮಾಡಿದರು.

ಲೋಕಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮತ್ತು ಶಾಸಕ ಡಿ ರವಿಶಂಕರ್ ಜೊತೆಗೂಡಿ ಸಿ ಎಂ ಸಿದ್ದರಾಮಯ್ಯ ಅವರೊಂದಿಗೆ ಸಂಘದ ಅಧ್ಯಕ್ಷ ಸಿ ಸಿ ಮಹದೇವ್ ಮತ್ತು ಎಸ್ ಟಿ ಘಟಕದ ಕಾಂಗ್ರೆಸ್ ತಾಲೂಕು ಅಧ್ಯಕ್ಷ ತಿಪ್ಪೂರು ಮಹದೇವ್ ಹಾಗೂ ಸಂಘದ ಪದಾಧಿಕಾರಿಗಳು ಸಮುದಾಯ ಭವನಕ್ಕೆ ಜಾಗ ಮತ್ತು ಅನುದಾನದ ಬಗ್ಗೆ ಚರ್ಚಿಸಿದರು. ಶಾಸಕ ರವಿಶಂಕರ್ ಈಗಾಗಲೇ ಕೆ ಆರ್ ನಗರ ವಾಲ್ಮೀಕಿ ಸಮುದಾಯ ಭವನಕ್ಕೆ ಒಂದು ಕೋಟಿ ಅನುದಾನ ನೀಡಿದ್ದಾರೆ. ಅದೇ ರೀತಿ ಸಾಲಿಗ್ರಾಮ ತಾಲೂಕು ವಾಲ್ಮೀಕಿ ಸಮುದಾಯ ಭವನವನ್ನು ಅಭಿವೃದ್ಧಿಪಡಿಸುವುದರ ಬಗ್ಗೆ ಸ್ಥಳದಲ್ಲೇ ಇದ್ದ ಶಾಸಕ ರವಿಶಂಕರ್ ಅವರಿಗೆ ಸೂಚಿಸಿದರು.

ಮೊದಲು ನಿವೇಶನ ಆಗಲಿ ಆನಂತರ ಅನುದಾನ ನೀಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು. ಕೆ ಆರ್ ನಗರ ಮತ್ತು ಸಾಲಿಗ್ರಾಮ ಎರಡು ತಾಲೂಕುಗಳಲ್ಲಿ ವಾಲ್ಮೀಕಿ ಸಮುದಾಯ ಭವನ ಹಾಗೂ ಅಂಬೇಡ್ಕರ್ ಸಮುದಾಯ ಭವನಕ್ಕೆ ಶಾಸಕ ರವಿಶಂಕರ್ ಈಗಾಗಲೇ ಸಾಕಷ್ಟು ಅನುದಾನ ಪಡೆದು ನೀಡಿದ್ದಾರೆ ಎಂದು ಅವರು ತಾಲೂಕು ಮಟ್ಟದ ಭವನಕ್ಕೂ ಅನುದಾನ ನೀಡುವ ಭರವಸೆ ನೀಡಿದರು.

ಕೆ. ಆರ್ .ನಗರ ವಿಧಾನಸಭಾ ಕ್ಷೇತ್ರದ ಶಾಸಕ ಡಿ. ರವಿಶಂಕರ್, ಕೆ ಆರ್ ನಗರ ತಾಲೂಕು ಎಸ್ ಟಿ ಘಟಕದ ಕಾಂಗ್ರೆಸ್ ಅಧ್ಯಕ್ಷ ತಿಪ್ಪೂರು ಮಾಹದೇವ್, ಸಾಲಿಗ್ರಾಮ ತಾಲೂಕು ವಾಲ್ಮೀಕಿ ನಾಯಕರ ಸಂಘದ ಅಧ್ಯಕ್ಷ ಸಿ.ಸಿ.ಮಹದೇವ್, ಖಜಾಂಚಿ ಸಂತೋಷ್, ಚನ್ನಂಗೆರೆ ಮಲ್ಲಿಕಾರ್ಜುನ್, ಕಲಾವಿದರ ಕುಮಾರ್, ತಂದ್ರೆ ಧರ್ಮ ಸೇರಿದಂತೆ ಇತರರು ಇದ್ದರು.

# ಗ್ಯಾರಂಟಿ ಯೋಜನೆಗಳಿಂದ ಜನಸಾಮಾನ್ಯರಿಗೆ ಹೆಚ್ಚಿನ ಅನುಕೂಲ: ಉದಯಶಂಕರ್

ಕೆ.ಆರ್.ನಗರ: ರಾಜ್ಯ ಸರ್ಕಾರವು ಜಾರಿಗೆ ತಂದಿರುವ ಪಂಚ ಗ್ಯಾರಂಟಿ ಯೋಜನೆಗಳಿಂದ ಜನಸಾಮಾನ್ಯರಿಗೆ ಹೆಚ್ಚಿನ ಅನುಕೂಲವಾಗಿದೆ ಎಂದು ಸಾಲಿಗ್ರಾಮ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಉದಯಶಂಕರ್ ಹೇಳಿದರು.

ಅವರು ಸಾಲಿಗ್ರಾಮ ತಾಲೂಕಿನ ಶೀಗವಾಳು ಗ್ರಾಮ ಪಂಚಾಯಿತಿಯಲ್ಲಿ ಆಯೋಜಿಸಿದ್ದ ಪಂಚ ಗ್ಯಾರಂಟಿ ಯೋಜನೆಗಳ ಅರಿವು ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಈ ಯೋಜನೆಗಳನ್ನು ಕಾಂಗ್ರೆಸ್ ಪಕ್ಷದ ನೇತೃತ್ವದ ಸರ್ಕಾರವು ಜಾರಿಗೆ ತಂದ ಸಂದರ್ಭದಲ್ಲಿ ವಿರೋಧ ಪಕ್ಷಗಳು ಹಲವು ಟೀಕೆಗಳನ್ನು ಮಾಡುತ್ತಿದ್ದರು. ಆದರೆ ನಂತರದ ದಿನಗಳಲ್ಲಿ ಕೆಲವು ರಾಜ್ಯಗಳಲ್ಲಿ ಇದೇ ಯೋಜನೆಗಳನ್ನು ಅನುಸರಿಸಿ ವಿರೋಧ ಪಕ್ಷಗಳು ಮುನ್ನಡೆಯುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಜನಸಾಮಾನ್ಯರ ನೋವು ನಲಿವುಗಳನ್ನು ಹತ್ತಿರದಿಂದ ಕಂಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರವು ಎಲ್ಲಾ ವರ್ಗದ ಬಡವರಿಗೆ ಅನುಕೂಲ ಆಗಬೇಕೆಂದು ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ರಾಜ್ಯದಲ್ಲಿ ಅನುಷ್ಠಾನ ಮಾಡುವ ಮೂಲಕ ನುಡಿದಂತೆ ನಡೆಯಲಾಗುತ್ತಿದೆ ಎಂದರು.

ತಾಲೂಕು ಪಂಚಾಯಿತಿ ಇಓ ರವಿಕುಮಾರ್ ಮಾತನಾಡಿ ಗ್ಯಾರಂಟಿ ಯೋಜನೆಗಳ ಬಗ್ಗೆ ಜನಸಾಮಾನ್ಯರಿಗೆ ಅರಿವು ಮೂಡಿಸುವ ಉದ್ದೇಶದಿಂದ ವಿವಿಧ ಕಾರ್ಯಕ್ರಮಗಳನ್ನು ರೂಪಿಸಿ ತಾಲೂಕು ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅರಿವು ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಗ್ರಾಮಮಟ್ಟದಲ್ಲೂ ಕೂಡ ಇಂತಹ ಅರಿವು ಶಿಬಿರಗಳನ್ನು ಆಯೋಜನೆ ಮಾಡಿ ಜನಸಾಮಾನ್ಯರಿಗೆ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಗಳಾದ ಅನ್ನಭಾಗ್ಯ, ಗೃಹಲಕ್ಷ್ಮಿ, ಗೃಹ ಜ್ಯೋತಿ, ಯುವ ನಿಧಿ, ಶಕ್ತಿ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸಿ ಅದರ ಸದುಪಯೋಗವನ್ನು ಪಡೆದುಕೊಳ್ಳಲು ಎಲ್ಲಾ ರೀತಿಯ ಕಾರ್ಯವನ್ನು ಮಾಡಲಾಗುವುದು ಎಂದರು.

ಸಭೆಯಲ್ಲಿ ಪಾಲ್ಗೊಂಡಿದ್ದ ವಿವಿಧ ಇಲಾಖೆ ಅಧಿಕಾರಿಗಳು ಗ್ಯಾರಂಟಿ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು. ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸದಸ್ಯರುಗಳು, ಗ್ರಾಮ ಪಂಚಾಯಿತಿ ಸದಸ್ಯರುಗಳು, ಸಿಬ್ಬಂದಿ ವರ್ಗದವರು, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಗ್ರಾಮಸ್ಥರನ್ನು ಒಡಗೂಡಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಜಾಥಾ ಮಾಡುವ ಮೂಲಕ ಯೋಜನೆಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯವನ್ನು ಮಾಡಲಾಯಿತು. ಸಭೆಯಲ್ಲಿ ಪಾಲ್ಗೊಂಡಿದ್ದ ಸಾರ್ವಜನಿಕರು ಹಲವು ವಿಷಯಗಳ ಕುರಿತು ಅಧಿಕಾರಿಗಳ ಗಮನ ಸೆಳೆದರು.

ಕಾರ್ಯಕ್ರಮದಲ್ಲಿ ಸಿಡಿಪಿಓ ಅಣ್ಣಯ್ಯ, ಸೇಸ್ಕಾಂ ಎಇಇ ಮಧುಸೂಧನ್, ಆಹಾರ ಇಲಾಖೆಯ ಇನ್ಸ್ಪೆಕ್ಟರ್ ಗಳಾದ ಸುರೇಶ, ಕುಮಾರ್, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ರಾಜು ಇದ್ದರು.

# ಅಂಕೇಗೌಡರ ಪುಸ್ತಕ ಪ್ರೀತಿ ಇಂದಿನ ಯುವ ಪೀಳಿಗೆಗೆ ಮಾದರಿ: ಡಾ. ಮಾನಸ



**ಪಾಂಡವಪುರ:** ಪುಸ್ತಕ ಮನೆ ಸ್ಥಾಪನೆ ಮಾಡಿ ಇಪ್ಪತ್ತು ಭಾಷೆಯ ಇಪ್ಪತ್ತು ಲಕ್ಷಕ್ಕೂ ಅಧಿಕ ಪುಸ್ತಕಗಳನ್ನು ಸಂಗ್ರಹಿಸಿ ವಿಶಿಷ್ಟ ಸಾಧನೆ ಮಾಡಿರುವ ಅಂಕೇಗೌಡ ಪುಸ್ತಕ ಪ್ರೀತಿ ಇಂದಿನ ಯುವಪೀಳಿಗೆಗೆ ಆದರ್ಶಪ್ರಾಯವಾಗಿದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ ಹೇಳಿದ್ದಾರೆ.

ಪಾಂಡವಪುರದ ಹರಳಹಳ್ಳಿಯಲ್ಲಿರುವ ಪುಸ್ತಕ ಮನೆಯಲ್ಲಿ ಸೋಮವಾರ 2026 ನೇ ಸಾಲಿನ ಭಾರತ ಸರ್ಕಾರದ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾದ ಎಂ. ಅಂಕೇಗೌಡ ಅವರನ್ನು ಪುಸ್ತಕ ಪ್ರಾಧಿಕಾರದ ವತಿಯಿಂದ ಗೌರವ ಸಮರ್ಪಣೆ ಮಾಡಿ ಮಾತನಾಡುತಿದ್ದರು.

ನಾವು ಪುಸ್ತಕ ಪ್ರೀತಿಯನ್ನು ಉತ್ತೇಜಿಸುವ ಸಲುವಾಗಿ ಪ್ರಾಧಿಕಾರದ ವತಿಯಿಂದ ಮನೆಗೊಂದು ಗ್ರಂಥಾಲಯ ಯೋಜನೆ ಆರಂಭಿಸಿದ್ದೇವೆ. ಆದರೆ ಅಂಕೇಗೌಡರ ಮನೆಯ ಈ ಗ್ರಂಥಾಲಯ ನಿಬ್ಬೆರಗಾಗಿಸುವಂತಿದೆ. ಇಷ್ಟೊಂದು ದೊಡ್ಡ ಪ್ರಮಾಣದ ಪುಸ್ತಕಗಳನ್ನು ಒಬ್ಬ ವ್ಯಕ್ತಿ ತನ್ನ ಸ್ವಂತ ಪರಿಶ್ರಮ ಮತ್ತು ಆಸಕ್ತಿಯಿಂದ ಸಂಗ್ರಹ ಮಾಡಿರುವುದು ಅತ್ಯಂತ ಅಚ್ಚರಿಯ ಸಂಗತಿ .ಅವರ ಈ ಸಾಧನೆ ಶಾಶ್ವತವಾಗಿ ಉಳಿಯುತ್ತದೆ. ಇದರ ಮೂಲಕ ಜ್ಞಾನದ ತಳಹದಿಯ ಮೇಲೆ ದೇವಾಲಯ ಕಟ್ಟುವುದು ಹೇಗೆ ಎಂಬುದನ್ನು ಅಂಕೇಗೌಡರು ತೋರಿಸಿಕೊಟ್ಟಿದ್ದಾರೆ. ಜನ ದೇವಾಲಯಗಳಿಗೆ ಮತ್ತು ತಮ್ಮ ಭಕ್ತಿಯ ಕಾಣಿಕೆಗಾಗಿ ಖರ್ಚು ಮಾಡುವ ಶೇಕಡಾ 10%ರಷ್ಟನ್ನಾದರು ಪುಸ್ತಕ ಕೊಂಡುಕೊಳ್ಳಲು ಉಪಯೋಗಿಸಿದ್ದಲ್ಲಿ ಪುಸ್ತಕ ಲೋಕದ ಬೆಳವಣಿಗೆಗೆ ಸಹಕಾರಿಯಾಗುತ್ತದೆ ಎಂದು ಅವರು ಹೇಳಿದರು. ಅಂಕೇಗೌಡರ ಅಂತಿಮ ಕಾಲದಲ್ಲಿ ಯಾರು ಬರಲಿ, ಬಿಡಲಿ ,ಸರ್ಕಾರ ಅವರ ಮನೆ ಮುಂದೆ ಇರುತ್ತದೆ. ಅವರ ಸಾಧನೆಗೆ ಸಂದಗೌರವ ಇದಾಗಿದೆ ಎಂದು ಅವರು ತಿಳಿಸಿದರು.

ಸನ್ಮಾನಕ್ಕೆ ಪ್ರತಿಕ್ರಿಯಿಸಿದ ಅಂಕೇಗೌಡರು ತಮ್ಮ ಹಿಂದಿನ ದಿನಗಳನ್ನು ನೆನೆದು ಭಾವುಕರಾದರು. ತಾವು ಬಸ್ ಕಂಡೆಕ್ಟರ್ ಆಗಿ ಕೆಲಸ ಮಾಡುತಿದ್ದ ದಿನಗಳಲ್ಲಿ ನಡೆದ ಘಟನೆಗಳನ್ನು ನೆನಪಿಸಿಕೊಂಡ ಅವರು ನಂತರ ಆ ಕೆಲಸ ತೊರೆದು ಪಾಂಡವಪುರದ ಫ್ಯಾಕ್ಟರಿಯೊಂದರಲ್ಲಿ ಕೆಲಸಕ್ಕೆ ಸೇರಿ ಪುಸ್ತಕ ಮನೆ ಸ್ಥಾಪಿಸಿದ ಸಂದರ್ಭವನ್ನು ಕುರಿತು ವಿವರಿಸಿದರು. ಈ ಪುಸ್ತಕಗಳನ್ನು ಮುಂದಿನ ಪೀಳಿಗೆಗೆ ಸಂರಕ್ಷಿಸಿಡುವುದೇ ನನ್ನ ದೊಡ್ಡ ಕನಸು ಎಂದ ಅವರು ಇಲ್ಲಿಗೆ ಬರುವ ಸಂಶೋಧನಾ ವಿದ್ಯಾರ್ಥಿಗಳು ಅಧ್ಯಯನ ಮಾಡಲು ಹಾಗೂ ತಂಗಲು ಕಟ್ಟಡವೊಂದರ ಅವಶ್ಯಕತೆ ಇದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಾರ್ವಜನಿಕ ಗ್ರಂಥಾಲಯ ಆಯುಕ್ತ ಹೆಚ್. ಬಸವರಾಜೇಂದ್ರ ಅವರು ಸಹ ಉಪಸ್ಥಿತರಿದ್ದರು. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿ ಕೆ.ಬಿ. ಕಿರಣ್ ಸಿಂಗ್ ಹಾಗೂ ಖ್ಯಾತ ಪತ್ರಕರ್ತ ,ಬರಹಗಾರ ರಾಜಶೇಖರ ಕದಂಬ, ರಾಮಣ್ಣ, ತಿಪ್ಪಣ್ಣ ಹಾಗೂ ಶ್ರೀನಿವಾಸ ಕರಿಯಪ್ಪ ಅವರು ಸಮಾರಂಭದಲ್ಲಿ ಭಾಗಿಯಾಗಿದ್ದರು.

## ಸಂಕ್ಷಿಪ್ತ ಸುದ್ದಿ

### ಗಾಂಜಾ ಗಿಡ ಸಾಗಾಣಿಕೆ ಆರೋಪಿತನಿಗೆ ಕಠಿಣ ಶಿಕ್ಷೆ

**ಮೈಸೂರು:** ಬೆಲವತ್ತಾ ಗ್ರಾಮ, ಕೆಸರೆ, ಮನೆ ನಂ.19, ಆತಾ ಮಸೀದಿ ಪಕ್ಕದ ಕ್ರಾಸ್ ರಸ್ತೆ, ಅಜ್ಜು ನಗರ. 2ನೇ ಹಂತದ ಆರೋಪಿ ಸೈಯದ್ ಬಾಬೀರ್ ಬಿನ್ ಸೈಯದ್ ಆಮನ್ (38 ವರ್ಷ) ತನ್ನ ವಾಸದ ಮನೆಯಲ್ಲಿ ಗಾಂಜಾ ಗಿಡಗಳನ್ನು ಬೆಳೆದು ಅವುಗಳನ್ನು ಕಿತ್ತು ನಿರ್ಜನ ಪ್ರದೇಶದಲ್ಲಿ ಒಣಗಿಸಿ ಮಾರಾಟ ಮಾಡಲು ಉದ್ದೇಶಿಸಿ ಮಾಲು ಸಮೇತ ಸಿಕ್ಕಿದ್ದು, ಒಟ್ಟು 3 ಕೆ.ಜಿ 230 ಗ್ರಾಂ ಇದ್ದುದು ತನಿಖೆಯಿಂದ ದೃಢಪಟ್ಟಿದ್ದು ಆರೋಪಿತನ ವಿರುದ್ಧ ಎನ್.ಆರ್.ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರಾದ ಲಕ್ಷ್ಮೀಕಾಂತ್ ತಳವಾರ್ ರವರು ಆರೋಪಿತನ ವಿರುದ್ಧ ದೋಷಾರೋಪಣಾ ಪತ್ರ ಸಲ್ಲಿಸಿದ್ದರು.

ದಿ:06–08–2023 ರಂದು ಬೇರು ಸಮೇತ ಕಿತ್ತು ತನ್ನ ಕೆಎ–04, ಸಿ–5774 ಕಾರ್ ಒಳಗೆ ಹಾಕಿಕೊಂಡು ಹೋಗಿ ಮಧ್ಯಾಹ್ನ ಸುಮಾರು 3–30 ಗಂಟೆ ಸಮಯದಲ್ಲಿ ಎನ್.ಆರ್. ಠಾಣೆ ವ್ಯಾಪ್ತಿ ಸವಿತಾ ಅಂಬೇಡ್ಕರ್ ಕಾಲೋನಿ ರಸ್ತೆಯಲ್ಲಿ ಜೆ.ಸಿ.ಕನ್ವೆನ್ಸನ್ ಹಾಲ್ ಸಮೀಪ ಜೆ.ಎಸ್.ಎಸ್.ಕಾಲೇಜ್ ಆಫ್ ಫಾರ್ಮಸಿ ಕಾಂಪೌಂಡ್ ಬಳಿ ತನ್ನ ವಾಹನವನ್ನು ನಿಲ್ಲಿಸಿಕೊಂಡು ಸದರಿ ಗಾಂಜಾ ಗಿಡಗಳನ್ನು ಪ್ಲಾಸ್ಟಿಕ್ ಚೀಲಕ್ಕೆ ತುಂಬುತ್ತಿದ್ದಾಗ ಪೊಲೀಸ್ ಅಧಿಕಾರಿಗಳಿಗೆ ಮಾಲು ಸಮೇತ ಸಿಕ್ಕಿಬಿದ್ದಿರುತ್ತಾನೆ.

ಸದರಿ ಪ್ರಕರಣದಲ್ಲಿ ವಿಚಾರಣೆ ನಡೆಸಿದ ಮಾನ್ಯ 7ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಎಂ.ರಮೇಶ ರವರು ಅಭಿಯೋಜನೆಯು ಹಾಜರುಪಡಿಸಿದ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿ ಜನವರಿ 22, 2026 ರಂದು ಆರೋಪಿತನಿಗೆ ಕಲಂ 20(9) ಎನ್.ಡಿ.ಪಿ.ಎಸ್.ಕಾಯ್ದೆ ಅಡಿಯಲ್ಲಿನ ಅಪರಾಧಕ್ಕೆ 3 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಮತ್ತು ರೂ.30,000/– ದಂಡ ವಿಧಿಸಿದ್ದು, ಕಲಂ 20(ಛ)(ಯ)( ಃ) ಎನ್.ಡಿ.ಪಿ.ಎಸ್.ಕಾಯ್ದೆ ಅಡಿಯ ಅಪರಾಧಕ್ಕೆ 3 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಮತ್ತು ರೂ.30,000/– ದಂಡ ವಿಧಿಸಿದ್ದು, ದಂಡ ಪಾವತಿಸಲು ತಪ್ಪಿದಲ್ಲಿ ಮತ್ತೆ 6 ತಿಂಗಳ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿ ತೀರ್ಪು ನೀಡಿರುತ್ತದೆ.

ಸದರಿ ಪ್ರಕರಣದಲ್ಲಿ ಮೈಸೂರಿನ 7ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಸರ್ಕಾರಿ ಅಭಿಯೋಜಕರಾದ ಶ್ರೀಮತಿ ಎನ್.ಬಿ.ವಿಜಯಲಕ್ಷ್ಮಿ ರವರು ಸರ್ಕಾರದ ಪರವಾದ ಮಂಡಿಸಿರುತ್ತಾರೆ.

### ಗಾಂಜಾ ಮಾರಾಟ ಆರೋಪಿತರಿಗೆ 5 ವರ್ಷಗಳ ಕಠಿಣ ಶಿಕ್ಷೆ

**ಮೈಸೂರು:** ದಿ:06–04–2023 ರಂದು ಉದಯಗಿರಿ ಪೊಲೀಸ್ ಠಾಣೆ ವ್ಯಾಪ್ತಿಯ ರಾಜೀವನಗರದ 2ನೇ ಹಂತ, ಸೈಯದ್ ಅಬ್ದುಲ್ ರೆಹಮಾನ್ ರಸ್ತೆಯಿಂದ ನಾರಾಯಣ ಹೃದಯಾಲಯಕ್ಕೆ ಹೋಗುವ ರಸ್ತೆಯಲ್ಲಿ ಮಧ್ಯಾಹ್ನ 2–15 ಗಂಟೆ ಸಮಯದಲ್ಲಿ ಬರುತ್ತಿದ್ದಾಗ ಮುದಾಸಿರ್ ಅಹಮ್ಮದ್ @ ಮುದ್ದು ಮತ್ತು ಮೊಹಮ್ಮದ್ ಇಮ್ರಾನ್ @ ಬಬನ್ @ ಅಮೀರ್ ರವರು ಒಟ್ಟು 12 ಕೆ.ಜಿ 600 ಗ್ರಾಂ ಗಾಂಜಾವನ್ನು ಖರೀದಿಸಿ ತಂದು ಅಕ್ರಮವಾಗಿ ಗಿರಾಕಿಗಳಿಗೆ ಮಾರಾಟ ಮಾಡಿ ಹಣ ಸಂಪಾದನೆ ಮಾಡುವ ಉದ್ದೇಶದಿಂದ ಹಂಚಿಕೊಳ್ಳುತ್ತಿದ್ದದ್ದು ತನಿಖೆಯಿಂದ ದೃಢಪಟ್ಟ ಮೇರೆಗೆ ಆರೋಪಿತರ ವಿರುದ್ಧ ಉದಯಗಿರಿ ಠಾಣೆಯ ಈ ಹಿಂದಿನ ಆರಕ್ಷಕ ನಿರೀಕ್ಷಕರಾದ ಶ್ರೀ ಸುಧಾಕರ್.ಕೆ.ಎನ್ ರವರು ದೋಷಾರೋಪಣಾ ಪತ್ರ ಸಲ್ಲಿಸಿದ್ದರು.

### ರೇಷ್ಮೆ ಕೃಷಿ ಪ್ರಶಸ್ತಿಗೆ ಅರ್ಜಿ ಸಲ್ಲಿಸಿ

**ರಾಮನಗರ:** ರೇಷ್ಮೆ ಇಲಾಖೆ ವತಿಯಿಂದ 2023–24, 2024–25ನೇ ಸಾಲಿನ ರೇಷ್ಮೆ ಕೃಷಿ ಪ್ರಶಸ್ತಿಗಾಗಿ ಗೂಡಿನ ನಂತರದ ಚಟುವಟಿಕೆ, ರಾಮನಗರ ವ್ಯಾಪ್ತಿಯಲ್ಲಿ (ರಾಮನಗರ ಮತ್ತು ಚನ್ನಪಟ್ಟಣ) ರೇಷ್ಮೆ ನೂಲು ಬಿಚ್ಚಾಣಿಕೆಯಲ್ಲಿ ಉತ್ತಮ ಪ್ರಗತಿ ಸಾಧಿಸಿರುವ ರೀಲರುಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಪ್ರಶಸ್ತಿಗಾಗಿ ನಿಗದಿಪಡಿಸಿರುವ ಅರ್ಹತೆಗಳಂತೆ ಸಕ್ರಿಯ ರೀಲರ್‌ಗಳು ಚಾಲ್ತಿಯಲ್ಲಿರುವ ಲೈಸೆನ್ಸ್ (ರಹದಾರಿ) ಹೊಂದಿರಬೇಕು. ಸರ್ಕಾರಿ ಮಾರುಕಟ್ಟೆಗಳಲ್ಲಿಯೇ ಗೂಡು ಖರೀದಿಸಿರುವ ಬಗ್ಗೆ ಹಾಗೂ ರೇಷ್ಮೆ ವಿನಿಮಯ ಕೇಂದ್ರದಲ್ಲಿ ರೇಷ್ಮೆ ಮಾರಾಟ ಮಾಡಿರುವ ಬಗ್ಗೆ ದಾಖಲಾತಿಗಳನ್ನು ಹೊಂದಿರಬೇಕು.ಅರ್ಜಿಯನ್ನು ಫೆ.09ರೊಳಗೆ ರಾಮನಗರದ ಗೂಡಿನ ನಂತರದ ಚಟುವಟಿಕೆಗಳ ರೇಷ್ಮೆ ಸಹಾಯಕ ನಿರ್ದೇಶಕರ ಕಚೇರಿಗೆ ಸಲ್ಲಿಬೇಕು.

ಹೆಚ್ಚಿನ ಮಾಹಿತಿಗೆ ರೇಷ್ಮೆ ಸಹಾಯಕ ನಿರ್ದೇಶಕರ ಕಚೇರಿ, ಗೂಡಿನ ನಂತರದ ಚಟುವಟಿಕೆ, ರಾಮನಗರದ ಕಚೇರಿಯನ್ನು ಸಂಪರ್ಕಿಸುವಂತೆ ರಾಮನಗರದ ಗೂಡಿನ ನಂತರದ ಚಟುವಟಿಕೆಗಳ ರೇಷ್ಮೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಯೋಜನೆ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

**ರಾಮನಗರ:** ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ–1ರ ಜನಾಂಗದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ, ಅಲೆಮಾರಿ, ಅರೆಅಲೆಮಾರಿ ಜನಾಂಗದ ಮೆಟ್ರಿಕ್ ನಂತರದ ಅರ್ಹತಾ ವಿದ್ಯಾರ್ಥಿವೇತನ, ಶುಲ್ಕ ಮರುಪಾವತಿ ಮತ್ತು ವಿದ್ಯಾಸಿರಿ–ಊಟ ಮತ್ತು ವಸತಿ ಸಹಾಯ ಯೋಜನೆ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು ಫೆ.15ರೊಳಗೆ ಸಲ್ಲಿಸಬೇಕು. ವೆಬ್‌ಸೈಟ್ ವಿಳಾಸ: https://ssp.postmatric.karnataka.gov.in ಮೂಲಕ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗೆ ಸಹಾಯವಾಣಿ ಸಂಖ್ಯೆ: 8050770005 ಅನ್ನು ಸಂಪರ್ಕಿಸುವಂತೆ ಬೆಂಗಳೂರು ದಕ್ಷಿಣ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಬಾಲ್ಯವಿವಾಹ ಮುಕ್ತ ಗ್ರಾಮ ಪ್ರಶಸ್ತಿಗೆ ಅರ್ಜಿ ಆಹ್ವಾನ

**ರಾಮನಗರ:** ಬೆಂಗಳೂರು ದಕ್ಷಿಣ ಜಿಲ್ಲಾ ವ್ಯಾಪ್ತಿಯಲ್ಲಿ 2024–25ನೇ ಸಾಲಿನ ಬಾಲ್ಯವಿವಾಹ ಶೂನ್ಯ ಸಹಿಷ್ಣುತೆ ಹೊಂದಿರುವ ಗ್ರಾಮ ಪಂಚಾಯ್ತಿಗಳಿಗೆ (ಬಾಲ್ಯವಿವಾಹ ಮುಕ್ತ ಗ್ರಾಮ ಪಂಚಾಯತ್) ಪ್ರಶಸ್ತಿ ನೀಡುವ ಕುರಿತು, ಶೂನ್ಯ ಸಹಿಷ್ಣುತೆ ಹೊಂದಿರುವ ಗ್ರಾಮ ಪಂಚಾಯತ್‌ಗಳನ್ನು ಗುರುತಿಸಿ, ಪ್ರತಿ ಜಿಲ್ಲೆಯಿಂದ ಒಂದು ಗ್ರಾಮ ಪಂಚಾಯತ್‌ಗೆ 25,000 ರೂ.ಗಳಂತೆ ಪ್ರಶಸ್ತಿ ನೀಡಲು ಬಾಲ್ಯ ವಿವಾಹ, ಶೂನ್ಯ ಸಹಿಷ್ಣುತೆ ಹೊಂದಿರುವ ಗ್ರಾಮ ಪಂಚಾಯತ್ ಆಯ್ಕೆಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು ಫೆ.11ರ ಸಂಜೆ 5.30ರೊಳಗೆ ಸಲ್ಲಿಸಬೇಕು. ಶೂನ್ಯ ಸಹಿಷ್ಣುತೆ ಹೊಂದಿರುವ ಗ್ರಾಮ ಪಂಚಾಯತ್ ಅಧಿಕಾರಿಗಳು ಕೂಡಲೇ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೊಠಡಿ ಸಂಖ್ಯೆ–307, 2ನೇ ಮಹಡಿ, ಜಿಲ್ಲಾಡಳಿತ ಸಂಕೀರ್ಣ, ಬಿ.ಎಂ ರೋಡ್, ಬೆಂಗಳೂರು ದಕ್ಷಿಣ ಜಿಲ್ಲೆ. ದೂ. ಸಂಖ್ಯೆ: 080–29655500 ಅನ್ನು ಸಂಪರ್ಕಿಸುವಂತೆ ಜಿಲ್ಲಾ ಮಕ್ಕಳ ರಕಣಾದಿಕಾರಿಗಳು ಪಕಟಣೆಯಲಿ ತಿಳಿಸಿದಾರೆ.

# ಶರಣ ವೀರಗೊಲ್ಲಾಳ

ಉಪೇಕ್ಷಿತ ವಚನಕಾರರು




| ವೀಣಾ ಹೇಮಂತ್‌ಗೌಡ ಪಾಟೀಲ್

ನೋಡುವ ದೃಷ್ಟಿ ಸರಿಯಾಗಿದ್ದರೆ ಕುರಿಯ ಹಿಕ್ಕೆಯಲ್ಲಿಯೂ ಕೂಡ ಪರಮಾತ್ಮ ಕಾಣುತ್ತಾನೆ ಎಂಬುದಕ್ಕೆ ನಿದರ್ಶನವಾಗಿರುವ ವ್ಯಕ್ತಿ ಶ್ರೇಷ್ಠ ಶರಣ ವೀರ ಗೊಲ್ಲಾಳ. ಕುರುಬ ಗೊಲ್ಲಾಳೇಶ್ವರ ಎಂದು ಕೂಡ ಕರೆಯಲ್ಪಡುವ ಈ ವ್ಯಕ್ತಿ 12ನೇ ಶತಮಾನದಲ್ಲಿ ತನ್ನ ಭಕ್ತಿ ಮತ್ತು ಕಾಯಕಕ್ಕೆ ಹೆಸರಾದವನು.

ಇಂದಿನ ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಗೋಲಗೇರಿ ಎಂಬ ಗ್ರಾಮದ ಪಕ್ಕದ ದವಳಾರ ಎಂಬ ಗ್ರಾಮದಲ್ಲಿ ಕಾಟ ಕೂಟ ಹಾಗೂ ದುಗ್ಗಳೆ ಎಂಬ ದಂಪತಿಗಳು ಇದ್ದರು. ಕಾಟ ಕೂಟನಿಗೆ ಬಲ್ಲುಗ ಎಂದು ದುಗ್ಗಳೆಗೆ ದ್ಯಾವಲಮ್ಮ ಎಂದು ಕೂಡ ನಮ್ಮ ಇತಿಹಾಸಕಾರರು ಕರೆದಿದ್ದಾರೆ. ತಮ್ಮ ಬದುಕಿನ ಇಳಿ ವಯಸ್ಸಿನಲ್ಲಿ ಈ ದಂಪತಿಗಳಿಗೆ ಜನಿಸಿದ ಮಗನಿಗೆ ದಂಪತಿಗಳು ಅತ್ಯಂತ ಪ್ರೀತಿಯಿಂದ ತಮ್ಮ ಮನೆ ದೇವರಾದ ಬೀರಲಿಂಗೇಶ್ವರನ ಕೃಪಾ ಪ್ರಸಾದದಿಂದ ಹುಟ್ಟಿದ ಮಗನಿಗೆ ಬೀರಲಿಂಗ ಎಂದು ಹೆಸರಿಟ್ಟರು... ತಾಯಿ ಪ್ರೀತಿಯಿಂದ ಗೊಲ್ಲಾಳ ಎಂದು ಕರೆದು ಅದೇ ಹೆಸರು ಶಾಶ್ವತವಾಯಿತು.

ಜಾತಿಯಿಂದ ಕುರುಬರಾಗಿದ್ದ ಇವರು ತಮ್ಮ ಕುಲವೃತ್ತಿಯಾದ ಕುರಿಗಳನ್ನು ಕಾಯುವ ಕಾಯಕವನ್ನು ಮಾಡುತ್ತಿದ್ದರು. ಚಿಕ್ಕಂದಿನಿಂದಲೇ ತಂದೆಯ ಜೊತೆಗೆ ಕುರಿ ಕಾಯುವ ಕೆಲಸಕ್ಕೆ ತಾನು ಕೂಡ ಹೋಗುತ್ತಿದ್ದ ಬಾಲಕ ಗೊಲ್ಲಾಳ ಇತರ ಮಕ್ಕಳಂತೆ ಪ್ರಾಪಂಚಿಕ ಆಟೋಟಗಳಲ್ಲಿ ಭಾಗವಹಿಸುವುದಕ್ಕಿಂತ ಕುರಿಗಳನ್ನು ಮೇಯಲು ಬಿಟ್ಟು ಅಲ್ಲಿಗೆ ಇರುವ ಒಂದು ಮರದ ಕೆಳಗೆ ಶಿವಲಿಂಗವನ್ನು ಪೂಜಿಸುತ್ತಿದ್ದ. ಶಿವನ ಧ್ಯಾನ ಚಿಂತನಗಳಲ್ಲಿ ತೊಡಗುತ್ತಿದ್ದ. ಶಿವಲಿಂಗವನ್ನು ಪೂಜಿಸಬೇಕು ಎಂದೂ ಅದು ದೊರೆಯುವ ಸ್ಥಳವನ್ನು ಸ್ನೇಹಿತರಲ್ಲಿ ಕೇಳಿದಾಗ ಅವರು ಶ್ರೀಶೈಲದ ಪಾತಾಳ ಗಂಗೆಯಲ್ಲಿ ಶಿವಲಿಂಗ ದೊರೆಯುತ್ತದೆ ಎಂದು ಹೇಳಿದರು. ವಯಸ್ಸಾದ ಪಾಲಕರನ್ನು ಬಿಟ್ಟು ಅಲ್ಲಿಗೆ ಹೋಗಿ ಶಿವಲಿಂಗವನ್ನು ತರಲು ಸಾಧ್ಯವಿಲ್ಲ ಎಂಬುದು ಅರಿವಿದ್ದರೂ ಕೂಡ ತರಲೇಬೇಕು ಎಂಬ ಅದಮ್ಯ ಬಯಕೆಯಿಂದ ಶ್ರೀಶೈಲಕ್ಕೆ ಹೋಗುವ ಭಕ್ತರ ಗುಂಪಿನೊಂದಿಗೆ ಆತ ಹೊರಟು ನಿಂತ.

ಭಕ್ತರ ಜೊತೆಗೆ ತಾನು ಕೂಡ ಶ್ರೀಶೈಲದ ಮಲ್ಲಯ್ಯ ಸ್ವಾಮಿಯನ್ನು ನೆನೆಯುತ್ತಾ ಜೋರಾಗಿ ಆತನ ಹೆಸರನ್ನು ಕೂಗಿ ಭಜಿಸುತ್ತಾ ಮುಂದೆ ಹೊರಟಾಗ ಮನೆಯಲ್ಲಿ ವಯಸ್ಸಾದ ತಾಯಿ ತಂದೆಯರ ನೆನಪಾಗಿ ಮುಖ ಚಿಕ್ಕದಾಯಿತು. ಆತನ ಮುಖದ ಮ್ಲಾನತೆಯನ್ನು ಕಂಡು ಆ ಗುಂಪಿನಲ್ಲಿದ್ದ ನಂದಯ್ಯ ಎಂಬ ವ್ಯಕ್ತಿ ಏನಾಯಿತು ಎಂದು ಬಾಲಕನನ್ನು ಪ್ರಶ್ನಿಸಿದ. ಆಗ ಬಾಲಕ ಗೊಲ್ಲಾಳನು ಮಲ್ಲಯ್ಯನ ದರ್ಶನವನ್ನು ಪಡೆದು ಅಲ್ಲಿಂದ ಶಿವಲಿಂಗವನ್ನು ತರಬೇಕು ಎಂಬ ತನ್ನ ಆಸೆಯನ್ನು ಹೇಳಿ ಮನೆಯಲ್ಲಿ ವಯಸ್ಸಾದ ತಂದೆ ತಾಯಿಯರನ್ನು ಬಿಟ್ಟು ಹೋಗಲು ಮನಸ್ಸಾಗುತ್ತಿಲ್ಲ ಎಂಬ ತನ್ನ ಮನದ ದುಗುಡವನ್ನು ನಂದಯ್ಯನಲ್ಲಿ ತೋಡಿಕೊಂಡನು. ಆದರೂ ಲಿಂಗವನ್ನು ಪೂಜಿಸಬೇಕೆಂಬ ತನ್ನ ಬಯಕೆಯನ್ನು ನಂದಯ್ಯನಲ್ಲಿ ಹೇಳಿದಾಗ ಪಾಲಕರ ಯೋಗಕ್ಷೇಮವನ್ನು ನೋಡಿಕೊಳ್ಳಲು ನೀನು ಇಲ್ಲಿಯೇ ಇರು. ನಾನು ಶ್ರೀಶೈಲದಿಂದ ಬರುವಾಗ ನಿನಗೆ ಲಿಂಗರೂಪಿ ಮಲ್ಲಯ್ಯನನ್ನು ತಂದುಕೊಡುತ್ತೇನೆ



ಎಂದು ನಂದಯ್ಯ ಹೇಳಿದನು.

ನಂದಯ್ಯನ ಮಾತಿನಿಂದ ಸಂತಸ ಭರಿತನಾದ ಗೊಲ್ಲಾಳ ಅದುವರೆಗೂ ತಾನು ಕೂಡಿಟ್ಟಿದ್ದ ಅಲ್ಪಸ್ವಲ್ಪ ಹಣವನ್ನು ಹಾಗೂ ತಾನು ಕೈಯಾರೆ ತಯಾರಿಸಿದ ಪಾದರಕ್ಷೆಗಳನ್ನು ಆತನಿಗೆ ನೀಡಿ ಮರೆಯದೆ ಲಿಂಗವನ್ನು ತರಲು ಹಕ್ಕೊತ್ತಾಯ ಮಾಡಿದನು.

ಶ್ರೀಶೈಲಕ್ಕೆ ಹೋಗಿ ದೈವ ದರ್ಶನ ಪಡೆದು ಮರಳಿ ಬಂದ ನಂದಯ್ಯ ತನ್ನದೇ ಆದ ಕೆಲಸದ ತರಾತುರಿಯಲ್ಲಿ ಗೊಲ್ಲಾಳನಿಗೆ ತರಬೇಕಾದ ಲಿಂಗವನ್ನು ಮರೆತುಬಿಟ್ಟಿದ್ದ. ಇದೀಗ ಗೊಲ್ಲಾಳನ ಊರಿನ ಹತ್ತಿರ ಬರುತ್ತಿದ್ದಂತೆ ಆತನ ಅಪೇಕ್ಷೆ ಮತ್ತು ಆತನ ಸಾತ್ವಿಕ ಸಿಟ್ಟಿನ ಅರಿವಿದ್ದ ನಂದಯ್ಯ ಆತನಿಗೆ ಅಲ್ಲಿಯೇ ಇದ್ದ ಕುರಿಯ ದೊಡ್ಡ ಹಿಕ್ಕೆಯನ್ನು ನೀಡಿ ಅದನ್ನೇ ಲಿಂಗವೆಂದು ಹೇಳಿ ನಂಬಿಸಿದ. ಲಿಂಗ ಪೂಜೆಯನ್ನು ಮಾಡಿಕೊಳ್ಳುವ ವಿಧಾನವನ್ನು ಆತನಿಗೆ ಸಾದ್ಯಂತವಾಗಿ ವಿವರಿಸಿ ಹೊರಟುಹೋದ.

ದೇವರನ್ನು ನಂಬಿ ಕೆಟ್ಟವರಿಲ್ಲ ಅಂತೆಯೇ ಗೊಲ್ಲಾಳ ಕುರಿಯ ಹಿಕ್ಕೆಯನ್ನು ಅತ್ಯಂತ ನಿರ್ಮಲವಾದ ಭಕ್ತಿಯಿಂದ ಪೂಜಿಸಲು ಆರಂಭಿಸಿದ. ಅದೊಂದು ದಿನ ಮಗನ ಕಾಯಕ ಹೇಗೆ ಸಾಗುತ್ತಿದೆ ಎಂಬುದನ್ನು ನೋಡಲು ಆತನ ತಂದೆ ಬಲ್ಲುಗ ಆತನೊಂದಿಗೆ ಬಂದಾಗ ಮಗ ಕುರಿಯ ಹಿಕ್ಕೆಯನ್ನು ಪೂಜಿಸುತ್ತಿರುವುದನ್ನು ನೋಡಿ ಸಿಟ್ಟಿನಿಂದ ಆ ಲಿಂಗವನ್ನು ತುಳಿದು ಹಾಕಿದ. ತಾನು ಪೂಜಿಸುವ ದೈವವನ್ನು ತನ್ನ ತಂದೆಯೇ ತುಳಿದು ನಾಶಪಡಿಸಿದ ಕಾರಣ ಸಿಟ್ಟಿಗೆದ್ದ ಗೊಲ್ಲಾಳ ಕೋಪದಿಂದ ತಂದೆಯ ತಲೆಯನ್ನೇ ಕಡಿದು ಹಾಕಿದ. ಆತನ ಭಕ್ತಿಯ ಉಗ್ರತೆಯನ್ನು ಕಂಡು ಎಲ್ಲರೂ ನಡುಗಿದರೆ ಸಾಕ್ಷಾತ್ ಪರಶಿವನು ಪ್ರತ್ಯಕ್ಷನಾಗಿ ನಿನ್ನ ಭಕ್ತಿಯ ಶಕ್ತಿಯನ್ನು ಮೆಚ್ಚಿದ್ದೇನೆ..ಏನಾದರೂ ವರ ಬೇಡಿಕೋ ಎಂದಾಗ ಭಕ್ತ ಗೊಲ್ಲಾಳ ತಂದೆಯಿಂದಲೇ ಪರಶಿವನ ಪ್ರತ್ಯಕ್ಷ ದರ್ಶನವಾಗಿದೆ ಆದ್ದರಿಂದ ತಂದೆಯ ಪ್ರಾಣದ ವಿನಾ ಮತ್ತೇನು ಬೇಡಲಾರೆ ಎಂದು ಹೇಳಿ ತಂದೆಯ ಪ್ರಾಣಭಿಕ್ಷೆಯನ್ನು ಬೇಡಿದನು. ಶಿವ ಮೆಚ್ಚಿದ ವೀರನಾದ ಕುರುಬ ಗೊಲ್ಲಾಳನನ್ನು ಅಂದಿನಿಂದ ಜನರು ವೀರಗೊಲ್ಲಾಳ ಎಂದು ಕರೆಯಲಾರಂಭಿಸಿದರು.

ಮುಂದೆ ಪ್ರಾಪ್ತ ವಯಸ್ಕರಾದ ಮೇಲೆ ಕಲ್ಯಾಣದ ಶಿವಶರಣರ, ಅಲ್ಲಿಯ ಕಾಯಕ ದಾಸೋಹಗಳ ಖ್ಯಾತಿಯನ್ನು ಕೇಳಿ ನೋಡಿ ಅವರ ಜೊತೆಗೆ ಕೆಲ ದಿನಗಳಾದರೂ ಇರಬೇಕೆಂಬ ಆಶಯವನ್ನು ಹೊತ್ತು ವೀರಗೊಲ್ಲಾಳ ಕಲ್ಯಾಣಕ್ಕೆ ಪ್ರಯಾಣ ಬೆಳೆಸಿದ. ಅಲ್ಲಿ ಮಹಾಮನೆಯ ದಾಸೋಹ ಸೇವೆ, ಕಾಯಕಗಳಲ್ಲಿ ಪಾಲ್ಗೊಂಡು ತನ್ನ ಬದುಕನ್ನು ಸಾರ್ಥಕಗೊಳಿಸಿಕೊಂಡ. ಅನುಭವ ಮಂಟಪದಲ್ಲಿ ಶರಣರ ಅನುಭಾವದ ನುಡಿಗಳನ್ನು ಕೇಳಿ ಧನ್ಯನಾದ ಮಾತ್ರವಲ್ಲದೆ ತಾನು ಕೂಡ ವೀರ ಬೀರೇಶ್ವರ ಎಂಬ ಅಂಕಿತನಾಮದಲ್ಲಿ ವಚನಗಳನ್ನು ರಚಿಸಿದ ಶಿವ ಚಿಂತನೆಯೊಂದಿಗೆ ವೈಚಾರಿಕ ಚಿಂತನೆಗಳನ್ನು ಹೊಂದಿದ ಆತ ಶರಣ ಚಿಂತಕನಾಗಿ ಶರಣ ಧರ್ಮ ಪರಿಪಾಲಕನಾಗಿ ಬದಲಾದ.

ಕೆಲ ಕಾಲದ ನಂತರ ಮತ್ತೆ ಗೋಲಗೇರಿಗೆ ಬಂದ ಗೊಲ್ಲಾಳೇಶ್ವರ ತನ್ನ ಕಾಯಕದ ಜೊತೆ ಜೊತೆಗೆ ಶಿವ ಚಿಂತನೆಯನ್ನು ಶರಣ ಚಿಂತನೆಗೆ ವೈಚಾರಿಕ ಭಾವಗಳನ್ನು ಜನರಲ್ಲಿ ಮೂಡಿಸುವ ಕಾಯಕದಲ್ಲಿ ನಿರತನಾಗಿ ಅಲ್ಲಿಯೇ ಲಿಂಗೈಕ್ಯನಾದ.

ಶರಣ ತತ್ವ ಚಿಂತಕನಾದ ಗೊಲ್ಲಾಳ ಶರಣನ ಸಮಾಧಿ ಹಾಗೂ ದೇವಾಲಯ ಇಂದಿಗೂ ಗೋಲಗೇರಿಯಲ್ಲಿ ಇದ್ದು ಪ್ರತಿ ವರ್ಷ ಜಾತ್ರೆ ಮತ್ತು ಧರ್ಮ ಪ್ರಸಾರ ಕಾರ್ಯಕ್ರಮಗಳು ಜರುಗುತ್ತವೆ.

ಕುರಿ ಕಾಯುವ ವೃತ್ತಿಯನ್ನು ಮಾಡುತ್ತಿದ್ದ ಆತನ ವಚನಗಳಲ್ಲಿಯೂ ಕೂಡ ಕುರಿ,ಆಡು,ಹೋತುಗಳ ಉಲ್ಲೇಖವಿದ್ದು ಆತನ ವಚನಗಳಲ್ಲಿ ಗಂಭೀರವಾದ ಚಿಂತನೆಗಳು ಹಾಗೂ ಸ್ಪಷ್ಟ ವೈಜ್ಞಾನಿಕತೆಗಳ ಅರಿವಾಗುತ್ತದೆ.

ಆಡು ಆರು ತಿಂಗಳು ಹುಟ್ಟಿ ಮೂರು ದಿನ ಬದುಕಿ ಒಂದು ದಿನ ಸತ್ತಿತ್ತು
ಕುರಿ ಕುರುಹ ಮೇದು ಮರಿಗೆ ಮೊಲೆಗೊಟ್ಟಿತ್ತು
ಮರಿಯ ಮೊಲೆಯ ನುಂಗಿ ಕುರುಹಿನೊಳಗಡಗಿತ್ತು
ಆಡು ಕುರಿ ಬಂದ ಬಟ್ಟೆಯ ಸೋಧಿಸಿಕೊಂಡು ತೋಳಬ ತೊಡಕಿನಲ್ಲಿ ಸಾಯದೆ ಅರಿ ವೀರಬೀರೇಶ್ವರ ಲಿಂಗವಾ

ಎಂಬ ವಚನದಲ್ಲಿ ಆಡು ಕುರಿಗಳ ಉಪಮೆಯನ್ನು ಇಟ್ಟು ಶರಣ ಗೊಲ್ಲಾಳ ವಚನವನ್ನು ರಚಿಸಿದ್ದರೆ ಆತನ ಮತ್ತೊಂದು ವಚನ ಹೀಗಿದೆ.

**ಕಲ್ಲು ಲಿಂಗವಲ್ಲ ಉಳಿಯ ಮನೆಯಲ್ಲಿ ಒಡೆಯಿತು**
**ಮರ ದೇವರಲ್ಲ ಉರಿಯಲ್ಲಿ ಬೆಂದಿತು**
**ಮಣ್ಣು ದೇವರಲ್ಲ ನೀರಿನ ಕೊನೆಯಲ್ಲಿ ಕದಡಿತು**
**ಇಂತಿವೆಲ್ಲವನರಿದ ಚಿತ್ತ ದೇವರಲ್ಲ**
**ಶರಣಂಗಳ ಮೊತ್ತದೊಳಗಾಗಿ ಸತ್ವಗೆಟ್ಟಿತ್ತು**
**ಇಂತಿವ ಕಳೆದುಳಿದ ವಸ್ತುವಿಪ್ಪೆಡೆ ಯಾವುದೆಂದರೆ ಕಂಡವರೊಳಗೆ ಕೈ ಕೊಂಡಾಡದೆ**
ಕೊಂಡ ವ್ರತದಲ್ಲಿ ಮತ್ತೊಂದ ನಡುಗೂಡಿ ಬರೆಯದೆ ವಿಶ್ವಾಸ ಗ್ರಹಿಸಿ **ನಿಂದಲ್ಲಿ ಆ ನಿಜಲಿಂಗವಲ್ಲದೆ**
**ಮತ್ತೊಂದು ಪೆರೆತನರಿಯದೆ**
**ನಿಂದಾತನೇ ಸರ್ವಾಂಗಲಿಂಗಿ**
**ವೀರ ಬೀರೇಶ್ವರ ಲಿಂಗದೊಳಗಾದ ಶರಣ**

ಕಲ್ಲು ಒಡೆದು ಹೋಗಬಹುದು, ಮರ ಸುಟ್ಟು ಹೋಗಬಹುದು, ಮಣ್ಣು ನೀರಲ್ಲಿ ನೆನೆದು ಹೋಗಬಹುದು. ಹೀಗೆ ನಿಸರ್ಗದ ವಸ್ತುಗಳಲ್ಲಿ ದೇವರನ್ನು ಹುಡುಕುವ ಬಾಹ್ಯ ಪೂಜೆಯ ಆಡಂಬರಕ್ಕೆ ಸೀಮಿತಗೊಳ್ಳದೆ ಅಂತರಂಗದ ಅವಲೋಕನದ ಮೂಲಕ ಆತ್ಮಶುದ್ಧಿಯನ್ನು ಕಂಡುಕೊಳ್ಳಬೇಕು ಎಂಬುದು ಶರಣ ಗೊಲ್ಲಾಳರ ವಚನದಲ್ಲಿ ವ್ಯಕ್ತವಾಗುತ್ತದೆ.

ಸಾಧಕನಲ್ಲಿ ಅಚಲವಾದ ವಿಶ್ವಾಸವಿದ್ದು ಅಂಗಾಂಗ ಸಾಮರಸ್ಯವನ್ನು ಆತ ಹೊಂದಿರಬೇಕು ಎಂದು ಅವರು ಪ್ರತಿಪಾದಿಸುತ್ತಾರೆ.... ಬಹುಶಹ ತಮ್ಮ ಬದುಕಿನ ಘಟನೆಗೆ ಅವರಿಗೆ ಈ ರೀತಿ ವಚನ ಬರೆಯಲು ಸ್ಫೂರ್ತಿಯಾಗಿರಬಹುದು.ಇದನ್ನೇ ಶರಣೆ ಸತ್ಯಕ್ಕ 'ವಿಶ್ವಾಸದಿಂದ ನಂಬಿದರಯ್ಯ ಗೊಲ್ಲಾಳರಾಯರು ' ಎಂದು ಬರೆದಿದ್ದರೆ ಶರಣ ಗಣದಾಸಿ ವೀರಣ್ಣನವರು 'ಗೊಲ್ಲಾಳಯ್ಯಂಗೆ ಕುರಿಯ ಹಿಕ್ಕೆಯ ದೃಢದಿಂದ ಪೂಜಿಸಿ' ಎಂದು ಅವರ ಭಕ್ತಿಯ ವಿಶ್ವಾಸದ ಕುರಿತು ಉಚ್ಚರಿಸಿದ್ದಾರೆ.

ಇಂದಿಗೂ ಕೂಡ ಗೋಲಗೇರಿಯಲ್ಲಿ ಶರಣ ಗುಲ್ಲಾಳನ ಸಮಾಧಿಯನ್ನು ಹಾಗೂ ಆತ ಪೂಜಿಸುತ್ತಿದ್ದ ಗೊಲ್ಲಾಳೇಶ್ವರ ದೇವರ ಗುಡಿಯನ್ನು ನಾವು ಕಾಣಬಹುದು.

ಹೀಗೆ ದೃಢ ವಿಶ್ವಾಸವನ್ನು ಹೊಂದಿದ ಜ್ಞಾನದ ಬಲದಿಂದ ವೈಚಾರಿಕ ಚಿಂತನೆಗಳಿಂದ ಕುರುಬ ಗೊಲ್ಲಾಳ ವೀರಗೊಲ್ಲಾಳನಾಗಿ ನಂತರ ಶರಣ ಗೊಲ್ಲಾಳನಾಗಿ ಪರಿಪಕ್ವವಾದ ಶರಣನಾದ. ಅಂತಹ ಶರಣ ಗೊಲ್ಲಾಳನಿಗೆ ಶರಣು ಶರಣಾರ್ಥಿ.

# ಪವರ್ ಡ್ರೆಸ್ಸಿಂಗ್: ಆತ್ಮವಿಶ್ವಾಸದ ಕುರುಹು



ಜಗತ್ತು ನಮ್ಮ ಜ್ಞಾನವನ್ನು ಅಳೆಯುವ ಮೊದಲೇ ನಮ್ಮ ವ್ಯಕ್ತಿತ್ವವನ್ನು ಅಳೆದು ಬಿಡುತ್ತದೆ; ನಮ್ಮ ಮಾತುಗಳು ಕಿವಿಗೆ ಬೀಳುವ ಮುನ್ನವೇ ನಮ್ಮ ವೇಷಭೂಷಣವು ನಮ್ಮ ಪರವಾಗಿ ಮೌನವಾಗಿ ಮಾತನಾಡತೊಡಗಿರುತ್ತದೆ. ಜಗತ್ತಿನಲ್ಲಿ, ನಮ್ಮ ಮಾತು, ಕೃತಿ ಮತ್ತು ಜ್ಞಾನ ಎಷ್ಟು ಮುಖ್ಯವೋ, ಅಷ್ಟೇ ಮುಖ್ಯವಾದುದು ನಾವು ನಮ್ಮನ್ನು ಜಗತ್ತಿನ ಮುಂದೆ ಹೇಗೆ ಪ್ರಸ್ತುತಪಡಿಸುತ್ತೇವೆ ಎಂಬುದು. ಇದನ್ನೇ ಆಧುನಿಕ ಜಗತ್ತು 'ಪವರ್ ಡ್ರೆಸ್ಸಿಂಗ್' (Power Dressing) ಎಂದು ಕರೆಯುತ್ತದೆ.

ಪವರ್ ಡ್ರೆಸ್ಸಿಂಗ್ ಎನ್ನುವುದು ಕೇವಲ ಬಟ್ಟೆಗಳ ಆಯ್ಕೆಯಲ್ಲ; ಅದು ನಮ್ಮ ವ್ಯಕ್ತಿತ್ವದ ಪ್ರತಿಬಿಂಬ. "ನಾನು ಯಾರು ಮತ್ತು ನನ್ನ ಸಾಮರ್ಥ್ಯವೇನು?" ಎಂಬುದನ್ನು ಮಾತುಗಳಿಗಿಂತ ಮುಂಚಿತವಾಗಿ ಜಗತ್ತಿಗೆ ಸಾರುವ ಕಲೆ ಇದು.

**ಏನಿದು ಪವರ್ ಡ್ರೆಸ್ಸಿಂಗ್?**

ಪವರ್ ಡ್ರೆಸ್ಸಿಂಗ್ ಎಂದರೆ ಕೇವಲ ದುಬಾರಿ ಬ್ರಾಂಡ್‌ನ ಬಟ್ಟೆಗಳನ್ನು ಧರಿಸುವುದು ಎಂದರ್ಥವಲ್ಲ. ಅದು ಆತ್ಮವಿಶ್ವಾಸವನ್ನು ಹೆಚ್ಚಿಸುವ, ಮತ್ತು ಎದುರಿಗಿರುವವರಲ್ಲಿ ಗೌರವವನ್ನು ಮೂಡಿಸುವ ಒಂದು ವೃತ್ತಿಪರ ವಸ್ತ್ರ ಸಂಹಿತೆ.

1970–80 ರ ದಶಕದಲ್ಲಿ ಅಮೆರಿಕದ ಕಾರ್ಪೊರೇಟ್ ಜಗತ್ತಿನಲ್ಲಿ ಈ ಪರಿಕಲ್ಪನೆ ಬೆಳೆದು ಬಂದರೂ, ಇಂದು ಇದು ವೃತ್ತಿಪರ ಶಿಸ್ತಿನ ಜಾಗತಿಕ ಸಂಕೇತವಾಗಿದೆ.

**ಸಂದರ್ಭಕ್ಕೆ ತಕ್ಕ ಉಡುಗೆ:** ವಿವೇಚನೆಯ ಸಂಕೇತ ಪವರ್ ಡ್ರೆಸ್ಸಿಂಗ್‌ನ ಅತ್ಯಂತ ಪ್ರಮುಖ ಅಂಶವೆಂದರೆ 'ಸಂದರ್ಭ ಪ್ರಜ್ಞೆ'. ಎಲ್ಲಿ ಯಾವ ಉಡುಗೆಯನ್ನು ತೊಡಬೇಕು ಎಂಬ ಜಾಣ್ಮೆಯೇ ನಮ್ಮ ವ್ಯಕ್ತಿತ್ವದ ಮೌಲ್ಯವನ್ನು ನಿರ್ಧರಿಸುತ್ತದೆ.

**ವೃತ್ತಿಪರ ವೇದಿಕೆ:** ಸಭೆ ಅಥವಾ ಸಂದರ್ಶನಗಳಲ್ಲಿ ಧರಿಸುವ ಗಂಭೀರವಾದ ಫಾರ್ಮಲ್ ಉಡುಗೆಗಳು ನೀವು ನಿಮ್ಮ ಕೆಲಸವನ್ನು ಎಷ್ಟು 'ಗಂಭೀರವಾಗಿ' ಪರಿಗಣಿಸುತ್ತೀರಿ ಎಂಬುದನ್ನು ತೋರಿಸುತ್ತವೆ.

* **ಸಾಮಾಜಿಕ ಸಮಾರಂಭ:** ಹಬ್ಬ ಅಥವಾ ಸಮಾರಂಭಗಳಲ್ಲಿ ನಮ್ಮ ಸಾಂಪ್ರದಾಯಿಕ ಉಡುಗೆಗಳು ನಮ್ಮ ಮೂಲ ಮತ್ತು ಸಂಸ್ಕೃತಿಯ ಮೇಲಿರುವ ಗೌರವವನ್ನು ವ್ಯಕ್ತಪಡಿಸುತ್ತವೆ.
* **ಅನೌಪಚಾರಿಕ ಸಭೆಗಳು:** ಇಲ್ಲಿನ ಸಹಜವಾದ ಉಡುಗೆಯು ನಮ್ಮ 'ಸೌಮ್ಯ ಸ್ವಭಾವ'ವನ್ನು ಪ್ರತಿಬಿಂಬಿಸುತ್ತದೆ. ಸಂದರ್ಭಕ್ಕೆ ಹೊಂದಿಕೆಯಾಗದ ಉಡುಗೆಯು ಎಷ್ಟೇ ದುಬಾರಿಯಾಗಿದ್ದರೂ ಅದು ನಮ್ಮನ್ನು ಆತ್ಮವಿಶ್ವಾಸದ ಕೊರತೆಯಿರುವ ವ್ಯಕ್ತಿಯಂತೆ ಬಿಂಬಿಸಬಹುದು. ಸರಿಯಾದ ಜಾಗದಲ್ಲಿ ಸರಿಯಾದ ಉಡುಗೆ ತೊಡುವುದು ಎದುರಿಗಿರುವ ವ್ಯಕ್ತಿ ಅಥವಾ ಸಂಸ್ಥೆಗೆ ನಾವು ನೀಡುವ ಗೌರವವೂ ಹೌದು.

**ಆತ್ಮವಿಶ್ವಾಸದ ಮನೋವಿಜ್ಞಾನ:** ನಾವು ಧರಿಸುವ ಬಟ್ಟೆಗಳು ನಮ್ಮ ಮನಸ್ಥಿತಿಯ ಮೇಲೆ ನೇರ ಪರಿಣಾಮ ಬೀರುತ್ತವೆ. ಇದನ್ನು ಮನೋವಿಜ್ಞಾನದಲ್ಲಿ 'ಎನ್‌ಕ್ಲೋತ್ಡ್ ಕಾಗ್ನಿಷನ್' (Enclothed Cognition) ಎಂದು ಕರೆಯುತ್ತಾರೆ. ಮನೋವಿಜ್ಞಾನಿಗಳ ಪ್ರಕಾರ, ನಾವು ಗಂಭೀರವಾದ ಮತ್ತು ಅಚ್ಚುಕಟ್ಟಾದ ಬಟ್ಟೆಗಳನ್ನು ಧರಿಸಿದಾಗ ನಮ್ಮ ಮೆದುಳು ನಮಗೆ ನಾವು 'ಸಮರ್ಥರು' ಎಂಬ ಸಂಕೇತವನ್ನು ನೀಡುತ್ತದೆ. ಇದು ನಮ್ಮ ನಡಿಗೆ, ಧ್ವನಿ ಮತ್ತು ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಸಕಾರಾತ್ಮಕವಾಗಿ ಬದಲಾಯಿಸುತ್ತದೆ.



**ಪವರ್ ಡ್ರೆಸ್ಸಿಂಗ್‌ನ ಸೂತ್ರಗಳು**

1. **ಅಳತೆ ಮತ್ತು ಫಿಟ್ಟಿಂಗ್ (ಈಟಣ ೨ ಮಟರಿ): ಸರಿಯಾದ ಅಳತೆಯ ಬಟ್ಟೆಗಳು ನಮ್ಮಲ್ಲಿ ಶಿಸ್ತು ಮತ್ತು 'ಪರಿಪೂರ್ಣತೆ'ಯನ್ನು ಎತ್ತಿ ತೋರಿಸುತ್ತವೆ.**
2. **ಬಣ್ಣಗಳ ಮೌನ ಭಾಷೆ: ಗಾಢ ನೀಲಿ, ಕಪ್ಪು ಮತ್ತು ಬೂದು ಬಣ್ಣಗಳು ನಾಯಕತ್ವವನ್ನು ಸೂಚಿಸಿದರೆ, ಬಿಳಿ ಬಣ್ಣವು ಪಾರದರ್ಶಕತೆಯನ್ನು ಪ್ರತಿಬಿಂಬಿಸುತ್ತದೆ.**
3. **ಸರಳತೆಯೇ ಶಕ್ತಿ: ಅತಿಯಾದ ಆಲಂಕಾರಕ್ಕಿಂತ ಕನಿಷ್ಠ ಮತ್ತು ಅಚ್ಚುಕಟ್ಟಾದ ಉಡುಗೆ ಹೆಚ್ಚು ಪ್ರಭಾವಶಾಲಿ.**

**ಪ್ರಭಾವಶಾಲಿ ವ್ಯಕ್ತಿಗಳ ಪವರ್ ಡ್ರೆಸ್ಸಿಂಗ್ :**

* **ನರೇಂದ್ರ ಮೋದಿ:** ಅವರ ಸಿಗ್ನೇಚರ್ 'ಮೋದಿ ಕುರ್ತಾ' ಮತ್ತು 'ನೆಹರು ಜಾಕೆಟ್'ಗಳು ಭಾರತೀಯ ಮೂಲದ ಉಡುಗೆಯನ್ನು ಜಾಗತಿಕ ವೇದಿಕೆಯಲ್ಲಿ ಹೆಮ್ಮೆಯಿಂದ ಪ್ರಸ್ತುತಪಡಿಸುತ್ತವೆ.
* **ನೀತಾ ಅಂಬಾನಿ:** ಅವರ ಕೈಮಗ್ಗದ ಸೀರೆಗಳು ಭಾರತೀಯ ಪರಂಪರೆಯ ಮೇಲಿರುವ ಗೌರವವನ್ನು ಮತ್ತು ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಪ್ರತಿಬಿಂಬಿಸುತ್ತವೆ.

**ಡಾ. ರಾಜ್‌ಕುಮಾರ್: ಅವರ ಶ್ವೇತ ವರ್ಣದ ಪಂಚೆ ಮತ್ತು ಶರ್ಟ್ ಸರಳತೆಯೂ ಹೇಗೆ 'ಪವರ್' ಆಗಬಲ್ಲದು ಎಂಬುದಕ್ಕೆ ಅತ್ಯುತ್ತಮ ಉದಾಹರಣೆ.**



ಪಾಶ್ಚಾತ್ಯ ದೇಶಗಳಲ್ಲಿ ಪವರ್ ಡ್ರೆಸ್ಸಿಂಗ್ ಎಂಬ ಪರಿಕಲ್ಪನೆ 70–80 ರ ದಶಕದಲ್ಲಿ ಪ್ರಚಾರವಾದರೆ , ನಮ್ಮ ಭಾರತದಲ್ಲಿ ಇದು ಸಾವಿರಾರು ವರ್ಷಗಳ ಇತಿಹಾಸವಿರುವ ಒಂದು ಪರಂಪರೆ. ಭಾರತೀಯ ಸಂಸ್ಕೃತಿಯಲ್ಲಿ , ವಸ್ತ್ರ ಎಂಬುದು ಕೇವಲ ಮೈ ಮುಚ್ಚುವ ಸಾಧನವಾಗಿಲ್ಲ?ಅದು ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಸಾರುವ ಒಂದು ಸಂಕೇತವಾಗಿದೆ. ಅವರವರ ಸ್ಥಾನಮಾನಕ್ಕೆ ತಕ್ಕಂತೆ , ಸಂದರ್ಭಕ್ಕೆ ತಕ್ಕಂತೆ ಭಾರತೀಯರು ಉಡುಗೆ ತೊಡುವುದು ನಮ್ಮ ಸಂಪ್ರದಾಯದ ಭಾಗವಾಗಿದೆ .

ಸಿಂಧೂ ನಾಗರಿಕತೆಯ ನೂಲಿನ ವಿನ್ಯಾಸಗಳಿಂದ ಹಿಡಿದು ಅಂದಿನ ರಾಜರ ರಾಜಸಭೆಯವರೆಗೆ, "ವಸ್ತ್ರ" ವಿನ್ಯಾಸಗಳು ಹೇಗೆ "ವ್ಯಕ್ತಿತ್ವ"ವನ್ನು ರೂಪಿಸುತ್ತವೆ ಎಂಬುದನ್ನು ಭಾರತ ಯಾವಾಗಲೋ ಅರಿತಿತ್ತು.

**1. ಪ್ರಾಚೀನ ನಾಗರಿಕತೆ: ಹೊದಿಕೆಗಳ ಕಲೆ**

ಹರಪ್ಪ ಮತ್ತು ಮೊಹೆಂಜೋದಾರೋ ನಾಗರಿಕತೆಯಲ್ಲೇ (ಕ್ರಿ.ಪೂ. 3300–1300) ಪವರ್ ಡ್ರೆಸ್ಸಿಂಗ್ ಪರಿಕಲ್ಪನೆ ಇತ್ತು.

* ಪುರೋಹಿತ ರಾಜ (The Priest-King): ಮೊಹೆಂಜೋದಾರೋದಲ್ಲಿ ಪತ್ತೆಯಾದ ಪ್ರಸಿದ್ಧ ಕಲ್ಲಿನ ಮೂರ್ತಿಯು ಒಂದು ಸುಂದರವಾದ ಶಾಲು ಧರಿಸಿದೆ. ಒಂದು ಹೆಗಲ ಮೇಲೆ ಶಾಲು ಹೊದಿಯುವ ಈ ಶೈಲಿಯು ಕೇವಲ ಫ್ಯಾಷನ್ ಆಗಿರದೆ, ಅದು ಧಾರ್ಮಿಕ ಮತ್ತು ರಾಜಕೀಯ ಅಧಿಕಾರದ ಗುರುತಾಗಿತ್ತು.

2. ವೈದಿಕ ಮತ್ತು ಶಾಸ್ತ್ರೀಯ ಕಾಲ: ಬಟ್ಟೆಯಲ್ಲಿನ ಸಂಕೇತಗಳು

ಮೌರ್ಯ ಮತ್ತು ಗುಪ್ತರ ಕಾಲದಲ್ಲಿ, ಅಧಿಕಾರವನ್ನು ಬಟ್ಟೆಯ ನೇಯ್ಗೆಯ ಗುಣಮಟ್ಟ ಮತ್ತು ಬಣ್ಣದ ಪವಿತ್ರತೆಯ ಮೂಲಕ ಗುರುತಿಸಲಾಗುತ್ತಿತ್ತು.

* ಸಂಪ್ರದಾಯದ ಉಡುಗೆ: ಭಾರತದಲ್ಲಿ ವೇದ ಕಾಲದಿಂದಲೂ ರೇಷ್ಮೆ ಮತ್ತು ಬಂಗಾರದ ಎಳೆಗಳಿಂದ (ಜರಿ) ಕೂಡಿದ ಬಟ್ಟೆಗಳನ್ನು ಧರಿಸುವ ಮೂಲಕ ತಮ್ಮ ವಿಶಿಷ್ಟತೆಯನ್ನು ಸಾರುತ್ತಿದ್ದರು.
* **ಪೇಟ ಮತ್ತು ಕಿರೀಟ:** ಪೇಟ ಧರಿಸುವುದು ಅಧಿಕಾರದ ಪರಮೋಚ್ಚ ಸಂಕೇತವಾಗಿತ್ತು. ನಮ್ಮ ಮೈಸೂರಿನ ಮಹಾರಾಜರು , ದಿವಾನ್ ವಿಶ್ವೇಶ್ವರಯ್ಯನವರು, ಮಾಜಿ ರಾಷ್ಟ್ರಪತಿ ಸರ್ವಪಲ್ಲಿ ರಾಧಾಕೃಷ್ಣನ್ ಮುಂತಾದವರು ಪೇಟ ಧರಿಸುತ್ತಿದ್ದರು . ಅದು ಅಂದಿನ ಪವರ್ ಡ್ರೆಸ್ಸಿಂಗ್ ಶೈಲಿ .

3. ಮೊಘಲರ ಪ್ರಭಾವ: ಹೊಲಿಗೆಯ ರಚನೆ

ಮೊಘಲರ ಕಾಲವು ಭಾರತೀಯ ಉಡುಗೆಯಲ್ಲಿ ಒಂದು ದೊಡ್ಡ ಬದಲಾವಣೆ ತಂದಿತು. ಕೇವಲ ಮೈಮೇಲೆ ಹೊದಿಯುವ ಬಟ್ಟೆಗಳ ಬದಲಿಗೆ, ಹೊಲಿದು ತಯಾರಿಸಿದ ರಚನಾತ್ಮಕ ಉಡುಗೆಗಳು ಅಧಿಕಾರದ ಸಂಕೇತವಾದವು.

* **ಜಾಮಾ ಮತ್ತು ಅಂಗರಖಾ:** ಈ ಉದ್ದನೆಯ ಉಡುಪುಗಳು ವ್ಯಕ್ತಿಗೆ ಭವ್ಯವಾದ ನೋಟವನ್ನು ನೀಡುತ್ತಿದ್ದವು. ಇದರ ಮೇಲಿನ ಭಾರಿ ಕಸೂತಿ ಕೆಲಸಗಳು ಮತ್ತು ರತ್ನಗಳ ಅಲಂಕಾರವು ಧರಿಸಿದ ವ್ಯಕ್ತಿಯ ಶ್ರೀಮಂತಿಕೆ ಮತ್ತು ಬಲವನ್ನು ತೋರಿಸುತ್ತಿತ್ತು.
* **ಪಟ್ಕಾ (ಸೊಂಟಪಟ್ಟಿ):** ಆಯುಧಗಳನ್ನು ಹಿಡಿಯಲು ಬಳಸುತ್ತಿದ್ದ ಕಸೂತಿ ಮಾಡಿದ ಸೊಂಟಪಟ್ಟಿಯು ಒಬ್ಬ ವ್ಯಕ್ತಿಯು ಕಲಾಪ್ರೇಮಿಯೂ ಹೌದು ಮತ್ತು ವೀರ ಯೋಧನೂ ಹೌದು ಎಂಬುದನ್ನು ಬಿಂಬಿಸುತ್ತಿತ್ತು.

4. ಸೀರೆ: ಸ್ತ್ರೀಶಕ್ತಿಯ ಶಾಶ್ವತ ಸಂಕೇತ

ಭಾರತೀಯ ಮಹಿಳೆಯರಿಗೆ ಸೀರೆಯು ಸಾವಿರಾರು ವರ್ಷಗಳಿಂದಲೂ ಅತ್ಯುತ್ತಮ 'ಪವರ್ ಸೂಟ್' ಆಗಿ ಉಳಿದಿದೆ. ಮಹಾಭಾರತ , ರಾಮಾಯಣ ಕಾಲದಿಂದಲೂ ಸೀರೆ ಭಾರತದ ಪವರ್ ಡ್ರೆಸ್ಸಿಂಗ್ ಆಗಿದೆ .

* ರಾಜವಂಶದ ಶಕ್ತಿ: ಯುದ್ಧರಂಗಕ್ಕೆ ನವವಾರಿ (ಕಚ್ಚೆ) ಸೀರೆ ಉಟ್ಟು ಕುದುರೆಯನ್ನೇರಿದ ರಾಣಿ ಲಕ್ಷ್ಮೀಬಾಯಿಯಿಂದ ಹಿಡಿದು, ರಾಜತಾಂತ್ರಿಕ ವೇದಿಕೆಗಳಲ್ಲಿ ಶಿಫಾನ್ ಸೀರೆಗಳ ಮೂಲಕ ಪ್ರಭಾವ ಬೀರಿದ ಮಹಾರಾಣಿ ಗಾಯತ್ರಿ ದೇವಿಯವರೆಗೆ ಸೀರೆಯು ಅಧಿಕಾರದ ಸಂಕೇತವಾಗಿದೆ.
* ಸಾಂಸ್ಕೃತಿಕ ನಾಯಕತ್ವ: ಪಾಶ್ಚಿಮಾತ್ಯ ಉಡುಗೆಗಳನ್ನು ಅನುಕರಿಸದೆ, ತನ್ನದೇ ಆದ ಶೈಲಿಯಲ್ಲಿ ಗೌರವವನ್ನು ಸಂಪಾದಿಸುವ ತಾಕತ್ತು ಸೀರೆಗೆ ಇದೆ.


ಪವರ್ ಡ್ರೆಸ್ಸಿಂಗ್ ಎಂದರೆ ಬಣ್ಣ ಬಣ್ಣದ ಬಟ್ಟೆ ತೊಡುವುದಷ್ಟೇ ಅಲ್ಲ . ಅದು ನಮ್ಮ ಒಳಗಿನ ಆತ್ಮವಿಶ್ವಾಸಕ್ಕೆ ನೀಡುವ ಒಂದು ಬಾಹ್ಯ ರೂಪ. ಗುಣಮಟ್ಟವು ಬ್ರಾಂಡ್‌ನಲ್ಲಿಲ್ಲ, ಅದನ್ನು ನಾವು ನಿರ್ವಹಿಸುವ ರೀತಿಯಲ್ಲಿದೆ. ಅಚ್ಚುಕಟ್ಟಾಗಿ ಇಸ್ತ್ರಿ ಮಾಡಿದ ಹತ್ತಿ ಬಟ್ಟೆಯು ನೀಡುವ ಗಾಂಭೀರ್ಯವು, ಅಸ್ತವ್ಯಸ್ತವಾಗಿರುವ ದುಬಾರಿ ಸೂಟ್‌ಗಿಂತಲೂ ಮೌಲ್ಯಯುತವಾದುದು. ಪವರ್ ಡ್ರೆಸ್ಸಿಂಗ್ ನಮ್ಮ ಪ್ರಭಾವಶಾಲಿ ಮತ್ತು ಸಮರ್ಥ ಇಮೇಜ್ ಅನ್ನು ರಚಿಸಲು ಒಂದು ಸಾಧನವಾಗಿ ಕಾರ್ಯನಿರ್ವಹಿಸುತ್ತದೆ. ನಾವು ತೊಡುವ ಬಟ್ಟೆ ನಮ್ಮ ವ್ಯಕ್ತಿತ್ವನ್ನು ಬಿಂಬಿಸುತ್ತದೆ . ನಾವೆಲ್ಲರೂ ನಮ್ಮದೇ ಶೈಲಿಯಲ್ಲಿ ಪವರ್ ಡ್ರೆಸ್ ಮಾಡಿಕೊಳ್ಳೋಣ



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

# ನನಗೂ ಬೇಕು ಒಬ್ಬ ಗೆಳತಿ/ಯ





| ಆನಂದ ಜಿ.ಎನ್. ದಾಂಡೇಲಿ.

ಬದುಕಿನ ದಾರಿಯು ನಾವು ಅಂದುಕೊಂಡಂತೆಯೇ ಎನ್ನುವುದು ನಮ್ಮ ಬದುಕಿನ ಅರ್ಧ ದಾರಿಯನ್ನು ಕ್ರಮಿಸಿದ ನಂತರವೇ ಅರಿವಾಗುತ್ತದೆ. ಏಕೆಂದರೆ ಬದುಕಿನ ಒಂದು ಬುನಾದಿ ನಿರ್ಮಾಣದಲ್ಲೇ ನಾವು ಅವರಿವರ(ತಂದೆ,ತಾಯಿ, ಗುರುಗಳು,ಗೆಳೆಯ, ಬಂಧು ಬಳಗ)ದವರ ಲೆಕ್ಕಾಚಾರದಲ್ಲಿ ಸಲಹೆ ಸೂಚನೆ ಪಡೆದು ಒಂದು ಕಾಲ ಘಟ್ಟದಲ್ಲಿ ಬದುಕಿನ ಉನ್ನತ ಶಿಖರದಲ್ಲೋ ಇಲ್ಲಾ ಬದುಕಿನ ಪಾತಾಳದಲ್ಲೋ ಇದ್ದೇವೆ ಎನ್ನುವ ಅನುಭವ ಆದಾಗ ನಮ್ಮೆದುರಿಗೆ ನಾವು ನಮ್ಮನ್ನು ಅವಲೋಕನ ಮಾಡಿಕೊಳ್ಳಲು ಆರಂಭಿಸುತ್ತೇವೆ ಅಲ್ಲವೇ.?

ಇಂತಹ ಸ್ಥಿತಿಯಲ್ಲಿ ನಮ್ಮೊಳಗೇ ಉಂಟಾಗುವ ತುಡಿತಗಳು ಇಲ್ಲಾ ಸಂತೋಷದ ಭಾವ ಇಲ್ಲಾ ನೋವುಗಳನ್ನು ನಮ್ಮ ಆತ್ಮೀಯರೊಂದಿಗೆ ಹಂಚಿಕೊಂಡು ಪುಟಿದೇಳುವ ತವಕದಲ್ಲಿ ಮನಸ್ಸು ಹಾತೊರೆಯುತ್ತದೆ.ಅಷ್ಟರಲ್ಲಿ ಅದಾಗಲೇ ಮದುವೆ ಆಗಿ ಜೊತೆಗೆ ಸಾಗುವ ಮಡದಿ/ಗಂಡ ಇದ್ದರೂ ಅವರೊಂದಿಗೆ ಎಲ್ಲವನ್ನು ಮನಬಿಚ್ಚಿ ಹೇಳಿಕೊಳ್ಳಲು ಆಗದ ಅದೇನೋ ದುಗುಡದಲ್ಲಿ ಸಾಗುವ ಮನ ಪುರುಷನಾದರೆ ಒಬ್ಬ ಗೆಳತಿಯನ್ನು ಮಹಿಳೆಯಾದರೆ ಒಬ್ಬ ಗೆಳೆಯನನ್ನು ಹಂಬಲಿಸುತ್ತದೆ.

**ಚೌಕಟ್ಟಿನ ಸತ್ಯ ಅರಿಯುವುದೇ ಒಳಮನಸು.**

ಏಕೆಂದರೆ ಮನುಷ್ಯನಿಗೆ ತನ್ನ ಬದುಕಿನ ಅರ್ಧ ಪಥವನ್ನು ಅನೇಕ ಏರಿಳಿತದಲ್ಲಿ ಸಾಗಿ ದಣಿದಿರುವ ಜೀವಕ್ಕೆ ಬೇಕಿರುವ ಒಂದು ಭುಜಕ್ಕೆ ಸದಾ ಹಂಬಲಿಸುವಾಗ ಮನುಷ್ಯನ ಮನಸ್ಸು ಮನೆಯ ಹೊರಗಿನ ಜೀವಿಗಳ ಆಕರ್ಷಣೆಗೆ ಹೆಚ್ಚು ಮಾರುಹೋಗುತ್ತದೆ. ಅಂತಹ ಸ್ಥಿತಿಯಲ್ಲಿ ಇರುವ ಮತ್ತೊಂದು ಬದಿಯ ವ್ಯಕ್ತಿ ಕೂಡ ಒಡನಾಟಕ್ಕೆ ಸಿಗಬಹುದು. ಸಿಕ್ಕಿರುವ ಗೆಳೆತನ,ಸ್ನೇಹ, ತುಂಬಾ ಸಲುಗೆಗೂ ಕಾರಣವಾಗಬಹುದು.

ದೊರೆತ ಜೀವ ಸ್ಪಂದನೆ ನೀಡುವಂತಿದ್ದರೆ ಅವರ ಬದುಕು ಹೂವಿನಂತೆ ಮತ್ತಷ್ಟು ಘಮವನ್ನು ಬೀರುತ್ತಾ ಅರಳಿ ನಿಲ್ಲುತ್ತದೆ ಅದೇ ಬಳಸಿಕೊಂಡು ಬಿಸಾಡುವ ಜೀವ ಸಿಕ್ಕರೆ ಮೊದಲಿನ ಸ್ಥಿತಿಗಿಂತಲೂ ಮತ್ತಷ್ಟು ಪಾತಾಳಕ್ಕೆ ಕುಸಿದು ಬದುಕು ಮೂರು ಹೋಳಾಗುವುದರಲ್ಲಿ ಸಂಶಯವಿಲ್ಲ. ಎರಡು ಮನಸುಗಳ ತುಡಿತ ಒಂದೆಡೆಯಾದರೆ ಎರಡು ಮನೆತನದ ಬಿಕ್ಕಟ್ಟಿಗೂ ಕಾರಣವಾಗುವ ಸೂಕ್ಷ್ಮ ವಿಚಾರ ಎನ್ನುವ ಎಚ್ಚರಿಕೆ ಇರುವುದು ಅತೀ ಮುಖ್ಯ. ಅಂತಹ ಸಮಯೋಚಿತ ನಡೆ ನಮ್ಮದಾಗಲಿ ಎನ್ನುವ ಬಯಕೆ. ಸಿಗುವ ಗೆಳೆಯ/ಗೆಳತಿ ಮುಕ್ತ ಮನಸ್ಸಿನಿಂದ ವಿಚಾರ ವಿನಿಮಯ ಮಾಡಿಕೊಂಡು ಅದನ್ನು ತಮ್ಮ ತಮ್ಮ ಕುಟುಂಬದ ಏರಿಳಿತಕ್ಕೆ ಹೊಂದಾಣಿಕೆ ಮಾಡಿಕೊಂಡು ಸಾಗುವ ದಾರಿ ಕಾಣಬೇಕು ಆಗಲೇ ಅವರಿಬ್ಬರ ಸ್ನೇಹಕ್ಕೆ ಒಂದು ಬೆಲೆ ಇರುತ್ತದೆ. ಇಲ್ಲದಿದ್ದರೆ ಊರಿನ ಬಾಯಿಗೆ ಉಪಹಾರ ಎಂಬಂತೆ ಎರಡು ಕುಟುಂಬಕ್ಕೂ ಮುಜುಗರ ಸೃಷ್ಟಿ ಸಾಧ್ಯ. ಮನುಷ್ಯನ ಮನಸ್ಸು ಚಂಚಲ ಪ್ರತಿ ಕ್ಷಣ ಮರ್ಕಟದಂತೆ ಎನ್ನುವುದು ಎಚ್ಚರವಿರಬೇಕು. ಅದು ಕೇವಲ ಕ್ಷಣಿಕ ಸಂತೋಷದ ವ್ಯಾಮೋಹಕ್ಕೆ ಹೆಚ್ಚು ಒಲವು ನೀಡುತ್ತದೆ. ಕ್ಷಣಿಕ ಸುಖ ಕ್ಷಣ ಕ್ಷಣವು ನರಕ ಯಾತನೆ ತರುವಂತೆ ಇರಬಾರದು.ನಮ್ಮ ಬದುಕು ನಾಲ್ಕು ಜನರಿಗೆ ಮಾದರಿ ಆಗಬೇಕೇ ವಿನಃ ಮಾರಕವಾಗದಿರಲಿ ಎನ್ನುವ ಬಯಕೆ ಹೊಂದಿರುವ ನಮ್ಮ ಮನಸ್ಸು ತನಗೆ ಬೇಕಿರುವ ಗೆಳತಿ/ಗೆಳೆಯನನ್ನು ಪಡೆದು ಒಂದು ಚೌಕಟ್ಟಲ್ಲಿ ಸಾಗುವ ಪ್ರಯತ್ನ ಮಾಡಬೇಕಿದೆ ಅಲ್ಲವೇ..??



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,